
# ಭಾಗ – 1





## 1.1 ಪರಿಚಯ

ಮಕ್ಕಳು ಮನುಷ್ಯ ಜನಾಂಗದ ಮುಂದಿನ ಪೀಳಿಗೆ, ಅವರನ್ನು ಸಶಕ್ತ, ಉತ್ಪಾದಕ ಹಾಗು ಮೌಲ್ಯಯುತ ನಾಗರೀಕರನ್ನಾಗಿಸಲು ಒಂದು ಆರೋಗ್ಯಪೂರ್ಣ ಸಮಾಜಿಕ ವ್ಯವಸ್ಥೆಯನ್ನು ರೂಪುಗೊಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕಾಗಿದೆ. ಈ ಅಂಶವನ್ನು ಒತ್ತಿ ಹೇಳುವ ಹಿನ್ನೆಲೆಯಲ್ಲಿ ನಮ್ಮ ಜಗತ್ತಿನಲ್ಲಿ 250 ಮಿಲಿಯಕ್ಕಿಂತಲೂ ಅಧಿಕ ಸಂಖ್ಯೆಯ ಬಾಲಕಾರ್ಮಿಕರಿದ್ದಾರೆ ಎನ್ನುವ ಅಂಕಿಅಂಶ ಬೆಚ್ಚಿಬೀಳಿಸುವಂತಾಹದ್ದು. 14 ವಯೋಮಾನದ ಮಕ್ಕಳನ್ನು ಗುಲಾಮರಿಗಿಂತ ಕಡೆಯಾದ ಸ್ಥಿತಿಯಲ್ಲಿ ಹಾಸುಕಂಬಳಿ, ಬಳೆ, ಅಗರಬತ್ತಿ, ಬೆಂಕಿಪೊಟ್ಟಣ, ಬೀಡಿ, ಗಾಜು, ಗಣಿ ಮುಂತಾದ ಅಪಾಯಕಾರಿ ಉದ್ಯಮಗಳಲ್ಲಿ ನಾವಿಂದು ಗಮನಿಸಬಹುದಾಗಿದೆ. ಪೋಷಕರ ದುಸ್ಥಿತಿಯ ಲಾಭ ಪಡೆದು ಕೇವಲ ಕಡಿಮೆ ಕೂಲಿಗೆ ಅವರ ಮಕ್ಕಳನ್ನು ಅವರಿಗೆ ಇಷ್ಟವಿರಲಿ ಇಲ್ಲದಿರಲಿ ದುಡಿತಕ್ಕೆ ಹಚ್ಚುವುದು ಯಾವ ನ್ಯಾಯ?

ಮಕ್ಕಳ ದುಡಿಮೆಯನ್ನು ಅದು ಅವರ ವರ್ತಮಾನ ಮತ್ತು ಭವಿಷ್ಯದ ಹಿತದೃಷ್ಟಿಯಲ್ಲಿ ಅದು ಉತ್ತಮ ಅನುಭವ ಒದಗಿಸುತ್ತದೆ ಎಂದು ಮೌಲ್ಯೀಕರಿಸಲಾಗದು. ಬಾಲ್ಯಾವಸ್ಥೆಯಲ್ಲಿ ಮಕ್ಕಳನ್ನು ದುಡಿಸುವುದು ಒಂದು ಹೀನಾಯ ಕಾರ್ಯ. ಒಟ್ಟು ಸಮಾಜಿಕ ವ್ಯವಸ್ಥೆ ಇಂದು ಕುಸಿದುಬೀಳುತ್ತಿದೆ ಎನ್ನುವ ಎಲ್ಲಾ ಲಕ್ಷಣವನ್ನು ಇದು ಎತ್ತಿ ತೋರಿಸುತ್ತದೆ. ದುಡಿಮೆಯ ಜೊತೆ ಅವರು ಅವರ ಬಾಲ್ಯವನ್ನು ಕಳೆದುಕೊಳ್ಳುವುದರಿಂದ ಹರೆಯದಲ್ಲಿ ಮುಪ್ಪನ್ನು, ವೃದ್ಧಾಪ್ಯವನ್ನು ಶೀಘ್ರ ಸಾವನ್ನು ಎದುರುನೋಡುತ್ತಾರೆ ಎನ್ನುವುದು ನಿರ್ವಿವಾದ. ನೀವು ನಿಮ್ಮ ಸುತ್ತ ಮುತ್ತಲೂ ದುಡಿಯುವ ಮಕ್ಕಳನ್ನು ನೀವು ನೋಡಿಯೇ ಇರುತ್ತೀರಿ. ಮಕ್ಕಳನ್ನು ಯಾಕೆ ದುಡಿಸುತ್ತೀರಿ ಎಂದು ಕೇಳಿದರೆ ಸಹಜವಾಗಿ ಅವರು ದುಡಿಯಲು ಕಲಿಯುವುದು ಯಾವಾಗ? ಎಂದು ಅವರನ್ನು ಕೆಲಸಕ್ಕೆ ಹಚ್ಚಿದವರ ಮರು ಪ್ರಶ್ನೆ ಅಷ್ಟೇ ವೇಗವಾಗಿ ನಿಮಗೆದುರಾಗುವುದು ಸಹಜ ಹಾಗೆಂದು ನೀವು ಮಕ್ಕಳನ್ನು ದುಡಿತಕ್ಕೆ ಹಚ್ಚುವ ಪೋಷಕರನ್ನು ಕಂಡು ಮಾತನಾಡಿಸಲು ಸಾಧ್ಯವಾದರೆ ತಾನೇ! ನಿಮಗೆ ಪ್ರಶ್ನೆ ಕೇಳಲು ಅವಕಾಶ. ಇಲ್ಲದಿದ್ದಲ್ಲಿ ನಿಮ್ಮ ಪ್ರಶ್ನೆ ನಿಮ್ಮಲ್ಲೇ ಉಳಿದು ಬಿಡುತ್ತದೆ.


ದುಡಿಯುತ್ತಿರುವ ಮಕ್ಕಳನ್ನೆ ಕೇಳಿ ನೀವು ಯಾಕೆ ದುಡಿಯುತ್ತಿದ್ದೀರಿ?

ಇದೇ ಪ್ರಶ್ನೆಗೆ ವಯಸ್ಕರು ಎಷ್ಟು ಸಹಜವಾಗಿ ಉತ್ತರಿಸಬಹುದೋ ಅದೇ ರೀತಿಯಲ್ಲಿ ದುಡಿಯುವ ಮಕ್ಕಳು ನಿಮಗೆ ಉತ್ತರಿಸುತ್ತಾ ಹೋಗುತ್ತಾರೆ. ಹೊಟ್ಟೆ ಪಾಡಿಗೆ, ಮನೆಯಲ್ಲಿ ದುಡಿಯುವ ಹಿರಿಯರ್‍ಯಾರು ಇಲ್ಲ. ನಮ್ಮನೇಲಿ ಕಷ್ಟ, ನಾನಾದರು ಇವರ ಮನೆಯಲ್ಲಿ ಕೆಲಸ ಮಾಡಿದರೆ ಎರಡು ಹೊತ್ತು ಊಟನಾದರೂ ಸಿಗುತ್ತಲ್ಲ. ನಮ್ಮಪ್ಪ ಸಾಲ ಮಾಡಿದ್ದಾನೆ ನಾನು ಅದನ್ನು ಇಲ್ಲಿ ತೀರಿಸುತ್ತಾ ಇದ್ದೇನೆ. ಇತ್ಯಾದಿ.

ಮುಂದಿನ ಪ್ರಶ್ನೆ ಕೇಳಿ ನಿಮಗೆ ಈ ಕೆಲಸ ಇಲ್ಲಿ ಇಷ್ಟವಾಗುತ್ತಾ? ಇಲ್ಲಿ ನಿಮಗೆ ಎಲ್ಲಾ ಅನುಕೂಲ ಇದಿಯಾ? ನಿಮ್ಮನ್ನು ಇಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಾರಾ?

ಎಲ್ಲದಕ್ಕೂ ನಿಮಗೆ ಹೌದು ಎಲ್ಲವೂ ಚೆನ್ನಾಗಿದೆ ಎಂದು ಹೇಳುತ್ತಾರೆ. ಯಾಕೆಂದರೆ ಕೆಲಸಕ್ಕಿಟ್ಟುಕೊಳ್ಳುವ ಫ್ಯಾಕ್ಟರಿಯ ಒಡೆಯ, ಮ್ಯಾನೇಜರ್, ಮನೆಗೆಲಸಕ್ಕೆ ಇಟ್ಟುಕೊಂಡ ಯಜಮಾನ ಯಜಮಾನತಿ ಇಬ್ಬರೂ ಇವರು ನಮ್ಮ ಅಣ್ಣನ ಮಕ್ಕಳು, ತಂಗಿಯ ಮಕ್ಕಳು, ನಮ್ಮ ಮನೆಯ ಕುಟುಂಬದ ಸದಸ್ಯೆ ಇತ್ಯಾದಿಗಳ ನಿರಾಂತಕವಾಗಿ ಒದರುತ್ತಾರೆ. ಜೊತೆಗೆ ನಮ್ಮ ಮಕ್ಕಳಿಗೆ ಯಾರು ಏನು ಕೇಳಿದರೂ ತಾವು ತಮ್ಮ ಖುಷಿಯಿಂದಲೇ ಇಲ್ಲಿ ಇದ್ದೇವೆ ಎನ್ನುವ ಉತ್ತರ ಹೇಳುವಂತೆ ಹೇಳಿಕೊಟ್ಟಿರುವುದರಿಂದ ನಿಮ್ಮ ಪ್ರಶ್ನೆಗಳೆಲ್ಲವುದಕ್ಕು ಅವರು ಗಿಣಿಪಾಠ ಒಪ್ಪಿಸಿಯೇ ಬಿಡುತ್ತಾರೆ. ಆದರೆ ಅವರನ್ನು ಕಂಡಾಗ ನಿಮ್ಮ ಯಾವುದೇ ಪ್ರಶ್ನೆಗಳಿಗೆ ಅವರು ಉತ್ತರ ಹೇಳಬೇಕಾಗಿಲ್ಲ. ಯಾಕೆಂದರೆ ಕೆದರಿದ ಕೂದಲು, ಎಣ್ಣೆ ನೀರು ಕಾಣದ ದೇಹ, ಹರಿದ ಮಾಸಿದ ಬಟ್ಟೆ, ಬಾಲ್ಯಸಹಜ ಉಲ್ಲಾಸ ಕಳೆದುಕೊಂಡ ನಿಸ್ತೇಜವಾದ ಮುಖ. ಈ ಮುಖಗಳೆಲ್ಲವೂ ಹೋಟೆಲ್, ಗ್ಯಾರೇಜ್, ಕಟ್ಟಡ ನಿರ್ಮಾಣ, ನೆಲಹಾಸು ರತ್ನಗಂಬಳಿ ನೇಯ್ಗೆ, ಬೆಂಕಿಪೊಟ್ಟಣ ತಯಾರಿ, ಪೆಟ್ರೋಲ್ ಬಂಕ್, ಗಾಜಿನ ಬಳೆ, ಹೊಲಗದ್ದೆ, ಕ್ವಾರಿ ಮಾತ್ರವಲ್ಲ ವೇಶ್ಯಾವೃತ್ತಿಯಲ್ಲೂ ತಳ್ಳಲ್ಪಟ್ಟು ಆಸರೆ ಹೀನರಾಗಿರುವ ಅವರ ದೈನೇಸಿ ಸ್ಥಿತಿ ನಿಮಗೆಲ್ಲ ಉತ್ತರವನ್ನು ಅವರ ಮೌನಗಳೇ ನೀಡುತ್ತವೆ. ಬಾಲ್ಯಮರೆತು ಆಸರೆ ಹೀನರಾಗಿ ಕಠಿಣ ಶ್ರಮ ಜೀವಿಗಳಾಗಿ ಅತ್ತ ವಯಸ್ಕ ಕಾರ್ಮಿಕರು ಅಲ್ಲದ ಇತ್ತ ಬಾಲಕ/ಕಿಯರು ಅಲ್ಲದ ತ್ರಿಶಂಕು ಸ್ಥಿತಿಯಲ್ಲಿ ತೂಗುಯ್ಯಾಲೆಯ ಜೀವನವನ್ನು ಈ ಮಕ್ಕಳು ಎದುರಿಸುತ್ತಿದ್ದಾರೆ ಅನ್ನುವುದು






ನಾವು ಇಂದು ಗಂಭೀರವಾಗಿ ಆಲೋಚಿಸಬೇಕಾದ ವಿಚಾರ. ನಾವು ಬಾಲಕಾರ್ಮಿಕತೆಯನ್ನು ರಾಷ್ಟ್ರೀಯ ಧಾರುಣ ಅನಿಷ್ಟಗಳಲ್ಲಿ ಒಂದು ಎಂದೇ ಗುರುತಿಸಬೇಕಾಗುತ್ತದೆ. ಆದುದರಿಂದ ಇದನ್ನು ತೊಡೆದುಹಾಕುವಲ್ಲಿ ಸಮಾಜದ ವಿವಿಧ ವರ್ಗ ಜಾತಿ ಸಮುದಾಯದ ಜವಾಬ್ದಾರಿ ಅತ್ಯಂತ ಹೆಚ್ಚಿನದು. ಈ ನಿಟ್ಟಿನಲ್ಲಿ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯು ಜಗತ್ತಿನ ಎಲ್ಲೆಡೆ ಮಕ್ಕಳ ಹಕ್ಕುಗಳ ರಕ್ಷಣೆಗೆ, ಮಕ್ಕಳ ಬಾಲ್ಯವನ್ನು ವಾಪಸ್ ಒದಗಿಸುವ, ಬಾಲ್ಯ ಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು ಎಲ್ಲಾ ತೆರನಾದ ಪ್ರಯತ್ನಗಳನ್ನು ನಡೆಸುತ್ತಿದೆ.

ಮಕ್ಕಳ ಬಾಲ್ಯ ಅವರ ಮೂಲಭೂತ ಹಕ್ಕು ಎನ್ನುವುದನ್ನು ಜಾಗತಿಕವಾಗಿ ಸಂಯುಕ್ತರಾಷ್ಟ್ರಗಳು ಒಪ್ಪಿಕೊಂಡಿರುವ ಶರ್ತಬದ್ಧವಾದ ಒಡಂಬಡಿಕೆ. ಇದಕ್ಕೆ ಭಾರತವು ಸಹಿ ಹಾಕಿರುವುದರಿಂದ ಹದಿನಾಲ್ಕು ವರ್ಷ ವಯೋಮಿತಿಯಲ್ಲಿರುವ ಎಲ್ಲಾ ಮಕ್ಕಳು ಈ ಹಕ್ಕಿನ ವ್ಯಾಪ್ತಿಯಲ್ಲಿ ಬರುತ್ತಾರೆ. ಆ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ದೇಶದ ವಿವಿಧ ಸಂಘಟನೆಗಳು ನೂರಾರು ರೀತಿಯ ಕಾರ್ಯಚಟುವಟಿಕೆಯ ಮೂಲಕ ಅರಿವು, ಶಿಕ್ಷಣ ಕಾನೂನು ರೀತಿಯ ಪ್ರಯತ್ನಗಳ ಮೂಲಕ, ಸಾರ್ವಜನಿಕರು, ಉದ್ಯೋಗದಾತರು, ಸರ್ಕಾರ ಮುಂತಾದವುಗಳ ಮೇಲೆ ಒತ್ತಡ ತಂತ್ರವನ್ನು ಹೇರಿದೆ. ಈ ಎಲ್ಲಾ ಪ್ರಯತ್ನಗಳಲ್ಲಿ ಇಂದು ಬಾಲ್ಯಕಾರ್ಮಿಕತೆ ಒಂದು ಸಾಮಾಜಿಕ ಅನಿಷ್ಟ, ದೇಶದ ಕಳಂಕ ಇದನ್ನು ತೊಡೆದುಹಾಕಬೇಕು ಎನ್ನುವ ನಿಟ್ಟಿನಲ್ಲಿ ಸರ್ಕಾರಗಳು, ರಾಜಕೀಯ ಪಕ್ಷಗಳು ಒಕ್ಕೊರಳಲ್ಲಿ ಒಪ್ಪಿಕೊಂಡಿದೆ. ಆದರೆ ಜನಸಾಮಾನ್ಯರ ಮನೋಸ್ಥಿತಿಯಲ್ಲಿ, ಅದರಲ್ಲೂ ಬಡಕಾರ್ಮಿಕವರ್ಗಗಳಲ್ಲಿ ಈ ಬಗ್ಗೆಗಿನ ಮುನ್ನೋಟ ಇಲ್ಲದಿರುವುದು, ತಾವು ಕೆಲಸಮಾಡುವ ಕಡೆಗಳಲ್ಲಿ ಮಕ್ಕಳು ದುಡಿಮೆ ನಡೆಸುವುದನ್ನು ಅವರು ಅನಿವಾರ್ಯವೆಂಬಂತೆ ಒಪ್ಪಿಕೊಂಡಿರುವ ಮನೋಸ್ಥಿತಿಯಲ್ಲಿದ್ದಾರೆ. ಬಡಕಾರ್ಮಿಕರ ಮಕ್ಕಳು ತಮ್ಮ ಬಾಲ್ಯದಲ್ಲೇ ಕಾರ್ಮಿಕರಾಗಬೇಕೇ? ಎನ್ನುವ ಪ್ರಶ್ನೆ ಅವರನ್ನು ಕಾಡಿಲ್ಲವೆಂದುಕೊಳ್ಳಬಾರದು. ಕಾಡಿದರೂನೂವೆ ಬೇರೆ ವ್ಯವಸ್ಥೆಗಳಿಲ್ಲ ಎಂದು ಕೈಚೆಲ್ಲಿ ಕುಳಿತು ಬಿಟ್ಟಿರುವ ಅಂಶಗಳೇ ಹೆಚ್ಚಿನ ಮಹತ್ವ ಬೀರುತ್ತದೆ.

ಈ ನಿಟ್ಟಿನಲ್ಲಿ ಕಾರ್ಮಿಕರಾಗಿರುವ ಅಸಂಖ್ಯಾತ ಜನರನ್ನು ತಲುಪಿ ಅವರ ನಡುವೆ ಬಾಲಕಾರ್ಮಿಕತೆಯ ಗಂಭೀರತೆಯನ್ನು ಮನನ ಮಾಡಿಸುವ, ಈ ನಿಟ್ಟಿನಲ್ಲಿ ಅವರು ಮುಂದುವರಿದು ತಮ್ಮ ಮಕ್ಕಳಿಗೆ ಉತ್ತಮ ಉದ್ಯೋಗಕೌಶಲ್ಯ ಹೊಂದಲು ಅವಕಾಶ ಕಲ್ಪಿಸುವ ಶಿಕ್ಷಣ ಮುಂತಾದ ದಿಕ್ಕಿನೆಡೆ ಅವರು ತೆರೆದುಕೊಳ್ಳುವಂತೆ ಮಾಡುವುದು ಅತೀ ಮುಖ್ಯವಾಗುತ್ತದೆ. ಆದುದರಿಂದ ಇವರುಗಳ ನಡುವೆ ಈ ವಿಚಾರವನ್ನು ಒಯ್ಯುವ ಕಾರ್ಯವನ್ನು ಯಾವುದೇ ಬಾಹ್ಯ ಶಕ್ತಿಗಳಿಗೆ ಸಾಧ್ಯವಿರುವುದಿಲ್ಲ. ಇದು ಆಂತರಿಕವಾಗಿ ಹೊರಹೊಮ್ಮಬೇಕಾದ ಒಂದು ಮಹತ್‌ಕಾರ್ಯ. ಈ ಕಾರ್ಯವನ್ನು ನಿರ್ವಹಿಸಲು ಅವರೊಂದಿಗೆ ಸದಾಕಾಲವಿರುವ ಕಾರ್ಮಿಕಸಂಘಟನೆಯ ಸಂಘಟಕರಿಗೆ, ಮುಖಂಡರುಗಳಿಗೆ ಮಾತ್ರ ಸಾಧ್ಯವೆನ್ನುವುದನ್ನು ನಾವು ಇಲ್ಲಿ ಮನಗಾಣಬೇಕು. ರಾಷ್ಟ್ರೀಯ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಪ್ರಮುಖ ಸಂಘಟನೆಗಳು ಬಾಲ ಕಾರ್ಮಿಕತೆಯ ಪಿಡುಗು ಹಾಗು ಅದರ ನಿವಾರಣೆ ಬಗ್ಗೆ ಹತ್ತು ಹಲವು ನೀತಿಯನ್ನು ಘೋಷಿಸಿವೆಯಾದರೂ ತಳಮಟ್ಟದ ಕಾರ್ಮಿಕವರ್ಗಕ್ಕೆ ಈ ವಿಚಾರಗಳನ್ನು ತಲುಪಿಸುವ ನಿಟ್ಟಿನಲ್ಲಿ ಕಾರ್ಯತಂತ್ರವನ್ನು ರೂಪಿಸುವ ಅವಶ್ಯಕತೆಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಕಾರ್ಮಿಕ ಸಂಘಟನೆಯ ಸದಸ್ಯರುಗಳು, ಪದಾಧಿಕಾರಿಗಳು ಮತ್ತು ಉದ್ಯೋಗದಾತ ಒಕ್ಕೂಟದ ಸದಸ್ಯರುಗಳು ಅತ್ಯಂತ ಕಾಳಜಿಯಿಂದ ಬಾಲಕಾರ್ಮಿಕತೆಯ ನಿರ್ಮೂಲನೆಯತ್ತ ಸಂಘಟಿತ ಪ್ರಯತ್ನ ನಡೆಸುವುದು ಅತ್ಯಂತ ಹೆಚ್ಚಿನ ಜವಾಬ್ದಾರಿಯುತ ಕೆಲಸ ಕಾರ್ಯವಾಗಬೇಕಾಗಿದೆ. ಕಾರ್ಮಿಕ ಸಂಘಟನೆಗಳಿಗೆ ತನ್ನದೇ ಆದ ಗುರಿ ಉದ್ದೇಶವಿರುವ ಜೊತೆಗೆ ಕಾರ್ಮಿಕ ಹಿತರಕ್ಷಣೆಯ ವಲಯಗಳಿಗೆ ಮಾತ್ರ ಸೀಮಿತವಾಗಿರುವ ಸಾಧ್ಯತೆ ಮಾತ್ರ ಹೆಚ್ಚಿರುತ್ತದೆ. ಸಾಮಾಜಿಕ ವಲಯದಲ್ಲಿನ ಅನಿಷ್ಟ ಪದ್ಧತಿಗಳ ನಿವಾರಣೆಯಲ್ಲಿ ಸೂಕ್ತ ಮಾರ್ಪಾಟುಗಳಲ್ಲಿ ಕಾರ್ಮಿಕ ಸಂಘಟನೆಯ ಪಾತ್ರವಿದೆ ಎಂಬ ಮಾಹಿತಿ ಒದಗಿಸುವ ಜೊತೆಯಲ್ಲಿ ಅವರನ್ನು ಸಾಮಾಜಿಕ ಅನಿಷ್ಟಗಳ ವಿರುದ್ಧವು ಹೋರಾಡುವಂತೆ ಮಾಡುವುದು ಬಾಲಕಾರ್ಮಿಕತೆಯ ನಿರ್ಮೂಲನಕ್ಕೆ ಹಾಕಿಕೊಳ್ಳುವ ಪ್ರಮುಖ ಹಾಗೂ ದಿಟ್ಟ ಹೆಜ್ಜೆಯಾಗಿರುತ್ತದೆ. ಈ ದೆಸೆಯಲ್ಲಿ ರಾಜ್ಯದ ವಿವಿಧ ಕಾರ್ಮಿಕ ಸಂಘಟನೆ ಹಾಗು ಉದ್ಯೋಗದಾತರ ಸಂಘಟನೆಗಳ ಪದಾಧಿಕಾರಿಗಳಲ್ಲಿ ಬಾಲಕಾರ್ಮಿಕತೆಯ ಬಗ್ಗೆಗಿನ ಸೂಕ್ತ ಮಾಹಿತಿ, ಅದರ ನಿವಾರಣೆಗಾಗಿ ಅನುಸರಿಸಬಹುದಾದ ಕಾರ್ಯತಂತ್ರಗಳ ಬಗ್ಗೆ ಒಂದು ಕಾರ್ಯಾಗಾರವನ್ನು ನಡೆಸಿ ಮುಂದಿನ ಗೊತ್ತುಗುರಿಗಳನ್ನು ಗುರುತಿಸುವ ನಿಟ್ಟಿನಲ್ಲಿ ಈ ಒಂದು ಕೈಪಿಡಿಯನ್ನು ರಚಿಸಲಾಗಿದೆ. ಇದನ್ನು ಒಂದು ಮಾದರಿಯಾಗಿರಿಸಿ ಸ್ಥಳೀಯ ಮಟ್ಟದಲ್ಲಿ ಇವುಗಳ ಸಂಘಟನೆ ಕಾರ್ಮಿಕಸಂಘಟನೆಗಳು ಅದರ ಸದಸ್ಯರುಗಳು ಬಾಲಕಾರ್ಮಿಕತೆಯ ನಿರ್ಮೂಲನದಲ್ಲಿ, ಅದನ್ನು ಪ್ರತಿಬಂಧಿಸುವಲ್ಲಿ ಮುಂದಾದರೆ ನಮ್ಮೆಲ್ಲರ ಆಶಯಗಳು ಈಡೇರುವಲ್ಲಿ ಸಂದೇಶವಿಲ್ಲ.





## 1.2 ಕೈಪಿಡಿಯ ಬಗ್ಗೆ

ಈ ತರಬೇತಿ ಕೈಪಿಡಿಯಲ್ಲಿ ನಾಲ್ಕು ಭಾಗಗಳಿವೆ, ಮೊದಲನೆಯ ಭಾಗದಲ್ಲಿ ಕೈಪಿಡಿಯ ಬಗ್ಗೆ ಕೆಲವು ಲೇಖನಗಳು ಇವೆ. ಎರಡನೆಯ ಭಾಗದಲ್ಲಿ ಕಾರ್ಮಿಕ ಸಂಘಟನೆಗಳ ನಾಯಕರಿಗೆ ತರಬೇತಿ ಕೊಡುವ ಬಗ್ಗೆ ತರಬೇತಿ ಚಟುವಟಿಕೆಗಳು ಇವೆ. ಮೂರನೆಯ ಭಾಗದಲ್ಲಿ ತರಬೇತಿ ಚಟುವಟಿಕೆಗಳಿಗೆ ಹೆಚ್ಚಿನ ಮಾಹಿತಿಗಳನ್ನು ಒದಗಿಸುವ ಲೇಖನಗಳಿವೆ.

ನಾಲ್ಕನೇ ಭಾಗದಲ್ಲಿ ಬಾಲಕಾರ್ಮಿಕತೆಯ ಬಗ್ಗೆ ಪವರ್ ಪಾಯಿಂಟ್ ಮಂಡನೆಯ ಸಂಬಂಧಪಟ್ಟಂತಹ ಸಾಹಿತ್ಯವನ್ನು ಒದಗಿಸಲಾಗಿದೆ. ಇದಲ್ಲದೆ ಬಾಲಕಾರ್ಮಿಕ, ಸಂತೋಷದ ಮಗು ಮತ್ತು ಸ್ನೇಹ ಸೂಚಕ ಪಟ್ಟಿಯನ್ನು ಸಹ ಸೇರಿಸಲಾಗಿದೆ.

ಕೈಪಿಡಿಯಲ್ಲಿ 10 ತರಬೇತಿ ಚಟುವಟಿಕೆಗಳು ಇವೆ. ಅವುಗಳಲ್ಲಿ 5 ಚಟುವಟಿಕೆಗಳು 60 ನಿಮಿಷಗಳ ಮತ್ತು 5 ಚಟುವಟಿಕೆಗಳು 30 ನಿಮಿಷಗಳ ಮತ್ತು 2 ಚಟುವಟಿಕೆಗಳು 20 ಹಾಗೂ 40 ನಿಮಿಷಗಳ ಚಟುವಟಿಕೆಗಳಾಗಿದ್ದು, ಶಿಬಿರಾರ್ಥಿಗಳ ನೇರ ಭಾಗವಹಿಸುವಿಕೆಗೆ ಅನುಕೂಲವಾಗುವಂತೆ ತರಬೇತಿ ಕೈಪಿಡಿ ತಯಾರಿಸಲಾಗಿದೆ. ತರಬೇತಿ ಕೈಪಿಡಿಯಲ್ಲಿ ಬಹಳಷ್ಟು ಚಿತ್ರಗಳಿದ್ದು, ಅವುಗಳನ್ನು ತರಬೇತಿದಾರರು ತರಬೇತಿಯಲ್ಲಿ ಶಿಬಿರಾರ್ಥಿಗಳಿಗೆ ವಿಷಯಗಳನ್ನು ಮನವರಿಕೆ ಮಾಡಲು ಉಪಯೋಗಿಸಬಹುದಾಗಿದೆ.

ಪ್ರತಿಯೊಂದು ತರಬೇತಿ ಚಟುವಟಿಕೆಯನ್ನು ಹಲವಾರು ಉಪಚಟುವಟಿಕೆಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ತರಬೇತಿ ಚಟುವಟಿಕೆ ಈ ಕೆಳಗಿನ ಭಾಗಗಳನ್ನು ಒಳಗೊಂಡಿದೆ.

- ಶೀರ್ಷಿಕೆ
- ಅವಧಿ
- ಉದ್ದೇಶಗಳು
- ಪಠ್ಯ
- ವಿಧಾನಗಳು
- ಪರಿಕರಗಳು
- ಪ್ರಕ್ರಿಯೆ / ಚಟುವಟಿಕೆ
- ನಿರೀಕ್ಷಿತ ಫಲಿತಾಂಶ
- ಸಫಲತೆಗೆ ಸೂಚ್ಯಂಕಗಳು
- ಸೂಚನೆಗಳು



## 1.3 ಕಾರ್ಯಾಗಾರದ ಪೂರ್ವ ತಯಾರಿ

ಕಾರ್ಮಿಕ ಸಂಘಟನೆಗಳು ತಮ್ಮದೇ ಆದ ಒಂದು ನಿರ್ಧಿಷ್ಟ ಉದ್ದೇಶಗಳಿಗಾಗಿ ಸಂಘಟಿತವಾದುವುಗಳು. ಅವುಗಳು ಒಂದೋ ತಮ್ಮ ವೃತ್ತಿ, ಒಂದು ಕಾರ್ಖಾನೆಯ ಅಥವಾ ಒಟ್ಟು ಉತ್ಪಾದನಾ ವ್ಯವಸ್ಥೆಯ ಒಂದು ಭಾಗವಾಗಿಯಾಗಿಯೂ ಗುರುತಿಸುವುದರಿಂದ ಅದಕ್ಕೆ ವ್ಯತಿರಿಕ್ತವಾಗಿರುವ ಅಥವ ನೇರವಾಗಿ ಸಂಬಂಧ ಪಡದ ವಿಚಾರಗಳಲ್ಲಿ ಅವರನ್ನು ತೊಡಗಿಸಿಕೊಳ್ಳುವುದು ಅತ್ಯಂತ ವಿರಳವೆಂದೆ ಭಾವಿಸಬೇಕು. ಸಂಘಟನೆಯ ಮುಂದಾಳತ್ವ ಹೊಂದಿದವರಿಗೆ ಈ ಬಗ್ಗೆ ಮಾಹಿತಿ ಹಾಗು ಆಸಕ್ತಿ ಇದ್ದರೂನೂವೆ ಸಂಘಟನೆಯ ಮೇಲೆ ಮತ್ತೊಂದು ಹೊರೆಯಾಗುವುದೆಂದು ಭಾವಿಸಿ ಯಾವುದೇ ಸಂಘಟನೆಗಳು ತಮ್ಮ ಉದ್ಧೇಶಿತ ಕಾರ್ಯಕ್ರಮಗಳಿಂದ ವಿಚಲಿತಗೊಳ್ಳುವುದಿಲ್ಲ. ಈ ನಿಟ್ಟಿನಲ್ಲಿ ಬಾಲಕಾರ್ಮಿಕತೆಯ ಬಗ್ಗೆ ಎಲ್ಲಾ ಕಾರ್ಮಿಕ ಸಂಘಟನೆಗಳು ತಾತ್ವಿಕವಾಗಿ ಜೊತೆ ಸೇರಿ ಈ ಪಿಡುಗನ್ನು ನಿವಾರಿಸುವಲ್ಲಿ ಸಹಭಾಗಿಗಳಾಗುವಂತೆ ಮಾಡುವುದು ಅತ್ಯಂತ ಸೂಕ್ಷ್ಮವಾದ ಕೆಲಸ. ಇದನ್ನು ಸಾಧಿಸುವುದೇ ಕಾರ್ಯಗಾರದ ಒಟ್ಟು ಆಶಯವಾಗಿರಬೇಕು.

ಕಾರ್ಮಿಕ ಸಂಘಟನೆಗಳ ಪದಾಧಿಕಾರಿಗಳ ಮತ್ತು ಉದ್ಯೋಗದಾತರ ಪದಾಧಿಕಾರಿಗಳ ಕಾರ್ಯಾಗಾರವನ್ನು ಆಯೋಜಿಸುವುದು ಮೇಲ್ನೋಟಕ್ಕೆ ಸುಲಭವಾದ ಚಟುವಟಿಕೆಯಲ್ಲ. ಈ ಬಗ್ಗೆ ಒಂದು ನಿರ್ಧಿಷ್ಟ ಪೂರ್ವತಯಾರಿ ಮುಂದಿನ ಕೆಲಸಕಾರ್ಯಗಳನ್ನು ಸರಳಗೊಳಿಸಲು ಸಹಾಯಕವಾಗಿರುವ ಅಂಶ. ಆದುದರಿಂದ ಈ ಕೆಳಗಿನ ಅಂಶಗಳನ್ನು ನಡೆಸುವುದರಿಂದ ಕಾರ್ಯಗಾರದ ಪೂರ್ವತಯಾರಿ ಅತ್ಯಂತ ಸರಳವಾಗುವುದು.


- ನಿಮ್ಮ ಪ್ರದೇಶದಲ್ಲಿ ಚಾಲನೆಯಲ್ಲಿರುವ ವಿವಿಧ ಕಾರ್ಮಿಕ ಸಂಘಟನೆಗಳಿದ್ದಲ್ಲಿ ಅವುಗಳ ಬಗ್ಗೆ ಸ್ಥೂಲವಾದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಿ. ಅವುಗಳಲ್ಲಿ ರಾಷ್ಟ್ರೀಯ ಮತ್ತು ರಾಜ್ಯಮಟ್ಟದಲ್ಲಿ ಗುರುತಿಸಲ್ಪಟ್ಟ ಇಂಟಕ್, ಎಐಟಿಯುಸಿ, ಸಿಐಟಿಯು, ಬಿಎಂಎಸ್, ಎಚ್‌ಎಂಎಸ್ ಮುಂತಾದ ಸಂಘಟನೆಗಳ ಬೆಂಬಲಿತ ಸಂಘಟನೆಗಳೇ ಎನ್ನುವುದನ್ನು ಖಚಿತಪಡಿಸಿಕೊಳ್ಳಿ.
- ನಿಮ್ಮ ಪ್ರದೇಶದಲ್ಲಿ ಇವುಗಳನ್ನು ಹೊರತು ಪಡಿಸಿ ಸ್ವತಂತ್ರವಾದ ಇತರೇ ಸಂಘಟನೆಗಳು ಇದ್ದಲ್ಲಿ ಅವುಗಳನ್ನು ಗುರುತಿಸಿಕೊಳ್ಳಿ. (ಉದಾ: ರಸ್ತೆಬದಿಯ ಗೂಡಂಗಡಿದಾರರ ಸಂಘಟನೆ, ತಲೆಹೊರೆ ಮಾರಾಟಗಾರರ ಸಂಘಟನೆ ಇತ್ಯಾದಿ)
- ಈ ತೆರನಾಗಿ ಗುರುತಿಸಿದ ಸಂಘಟನೆಗಳ ಬಗ್ಗೆ ಒಂದು ವಿಸ್ತೃತವಾದ ಮಾಹಿತಿಯನ್ನು ಕಲೆಹಾಕಿ
- ಅವುಗಳಲ್ಲಿ ಪ್ರಮುಖವಾಗಿ ಈ ಕೆಳಗಿನ ಮಾಹಿತಿಗಳು ನಿಮ್ಮ ಅರಿವಿಗೆ ಬಂದರೆ ಉತ್ತಮ.
  - ಸಂಘಟನೆಯ ಹೆಸರು ಹಾಗು ಅವುಗಳಲ್ಲಿ ಸದಸ್ಯರಾಗಿರುವ ಕಾರ್ಮಿಕರು/ಉದ್ಯೋಗದಾತರು ಯಾವ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರು.
  - ಅಂದಾಜು ವರ್ಷಗಳಿಂದ ಈ ಸಂಘಟನೆ ಈ ಪ್ರದೇಶದಲ್ಲಿ ಕಾರ್ಯನಿರತವಾಗಿದೆ.
  - ಇದರ ನಾಯಕತ್ವ ವಹಿಸಿರುವವರು ಯಾರು? ಹೆಸರು? ಪದಾಧಿಕಾರಿಗಳ ಸಂಖ್ಯೆ? ಸದಸ್ಯರ ಸಂಖ್ಯೆ?
  - ಅವುಗಳ ಪ್ರಮುಖ ಕಾರ್ಯಚಟುವಟಿಕೆಗಳು ಏನು?
  - ಅವರ ಕಾರ್ಯಕ್ಷೇತ್ರದಲ್ಲಿ ಬಾಲಕಾರ್ಮಿಕತೆಯ ಪರಿಸ್ಥಿತಿ ಏನು? ಈ ಕಾರ್ಮಿಕರ ಮಕ್ಕಳು ಬಾಲಕಾರ್ಮಿಕರಾಗಿರುವ ಸಾಧ್ಯತೆಗಳು ಇವೆಯೇ ? ಇದ್ದಲ್ಲಿ ಅವರು ಕೈಗೊಂಡ ಕ್ರಮಗಳೇನು?
  - ಬಾಲಕಾರ್ಮಿಕತೆಯ ಬಗ್ಗೆ ಅವರ ಪರಿಕಲ್ಪನೆ ಏನು?



- ಬಾಲಕಾರ್ಮಿಕತೆಯನ್ನು ಹೊಡೆದೋಡಿಸಲು ಹಮ್ಮಿಕೊಂಡ ಕಾರ್ಯಕ್ರಮಗಳು ಅಥವಾ ಅಂತಹ ನಿದರ್ಶನಗಳು ಇವೆಯೇ?
- ಬಾಲಕಾರ್ಮಿಕತೆಯ ಬಗ್ಗೆ ಅವರ ಸಂಘಟನೆಯ ಕಾರ್ಮಿಕರ ಸದಸ್ಯರಲ್ಲಿ ಮತ್ತು ಕಾರ್ಮಿಕರಲ್ಲಿ ಜಾಗೃತಿ ಮತ್ತು ಅರಿವಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯವೇ?

- ಈ ಕಾರ್ಮಿಕ ಸಂಘಟನೆಗಳ ಮಾಹಿತಿಯು ನಿಮಗೆ ಜಿಲ್ಲಾ ಕಾರ್ಮಿಕಕಲ್ಯಾಣ ಅಧಿಕಾರಿ, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ಪತ್ರಕರ್ತರು ಹಾಗು ಜಿಲ್ಲೆಯಾ ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಲಭ್ಯವಾಗುವುದು.
- ನೋಂದಣಿಯಾಗದಿರುವ ಸಂಘಟನೆಗಳನ್ನು ಇಲ್ಲಿ ಪರಿಗಣಿಸುವುದು ಅತೀ ಮುಖ್ಯ.
- ಇದೇ ಪ್ರಕಾರ ನಿಮ್ಮ ಪ್ರದೇಶದಲ್ಲಿ ವಿವಿಧ ಉದ್ಯೋಗದಾತರ ಒಕ್ಕೂಟಗಳು ಚಾಲನೆಯಲ್ಲಿರಬಹುದು? ಉದಾ: ಹೋಟೆಲ್ ಉದ್ಯಮಿಗಳ ಒಕ್ಕೂಟ, ಗ್ಯಾರೇಜ್ ಮಾಲೀಕರ ಒಕ್ಕೂಟ, ದರ್ಜಿಗಳ ಒಕ್ಕೂಟ, ಬೀಡಿ ಮಾಲೀಕರ ಒಕ್ಕೂಟ. ·ಇವರುಗಳ ಉದ್ಯಮಗಳಲ್ಲಿ ತಿಳಿದೋ ತಿಳಿಯದೆಯೋ ಬಾಲಕಾರ್ಮಿಕರನ್ನು ದುಡಿಸಿಕೊಳ್ಳುತ್ತಿರಬಹುದು ಎನ್ನುವುದು ನಿಮ್ಮ ಅರಿವಿಗೆ ಬಂದಿರಬಹುದು. ಈ ಉದ್ಯಮಗಳ ಒಕ್ಕೂಟದ ಪದಾಧಿಕಾರಿಗಳನ್ನು ಈ ಕಾರ್ಯಾಗಾರದಲ್ಲಿ ಒಳಗೊಳಿಸುವುದು ಅತೀ ಅವಶ್ಯ.
- ಈ ಎಲ್ಲಾ ಮಾಹಿತಿಗಳ ಮೂಲಕ ನಿಮಗೆ ಕಾರ್ಯಗಾರಕ್ಕೆ ಬೇಕಾದ ಹಿನ್ನೆಲೆ ಹಾಗು ಆಹ್ವಾನಿಸ ಬೇಕಾದ ಪ್ರತಿನಿಧಿಗಳ ಸಂಖ್ಯೆ ಇತ್ಯಾದಿಗಳು ಲಭ್ಯವಾಗುವುದು.
- ಈ ಆಧಾರದ ಮೇಲೆ ಕಾರ್ಯಾಗಾರ ನಡೆಸಲು ಸೂಕ್ತವಾದ ಸಭಾಂಗಣವನ್ನು ಗೊತ್ತುಪಡಿಸಿ.
  - ನಗರದ ಸದ್ದುಗದ್ದಲಗಳಿಂದ ಹೊರತಾಗಿರಲಿ ಹಾಗೆಂದು ಕಾರ್ಯಗಾರದಲ್ಲಿ ಭಾಗವಹಿಸುವ ಪ್ರತಿನಿಧಿಗಳು ಬಂದು ತಲುಪಲು ಸಾರ್ವಜನಿಕ ಸಾರಿಗೆ ವ್ಯವಸ್ಥೆ ಇರುವ ಪ್ರದೇಶವಾಗಿರಲಿ.
  - ಸಭಾಂಗಣವು ಕನಿಷ್ಠ 30 ರಿಂದ 50 ಜನರನ್ನು ಒಳಗೊಳ್ಳುವಂತಿರಲಿ.
  - ಸಣ್ಣ ವೇದಿಕೆಯಿದ್ದಲ್ಲಿ ಅನುಕೂಲ.
  - ವಿದ್ಯುತ್, (ಜನರೇಟರ್) ಶೌಚಾಲಯ, ಸಣ್ಣ ಪಾರ್ಕಿಂಗ್ ವ್ಯವಸ್ಥೆಗಳಿದ್ದರೆ ಅನುಕೂಲ.
  - ಊಟೋಪಚಾರಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಅಥವಾ ಕೊಠಡಿಗಳಿದ್ದಲ್ಲಿ ಉತ್ತಮ.
- ಸಭಾಂಗಣ ದೊರಕಿದ ಹಿನ್ನೆಲೆಯಲ್ಲಿ ಸೂಕ್ತ ದಿನಾಂಕವನ್ನು ಗೊತ್ತುಪಡಿಸಿ. ಸಾಮಾನ್ಯವಾಗಿ ಕಾರ್ಮಿಕ ಸಂಘಟನೆಯ ಮುಖಂಡರುಗಳಿಗೆ ರವಿವಾರದ ದಿನ ಸೂಕ್ತವಾಗಿರುವುದರಿಂದ ಈ ಬಗ್ಗೆ ಮೊದಲೇ ತಿಳಿದುಕೊಳ್ಳಿ.
- ನೀವು ಸಂಘಟಿಸಲಿರುವ ಕಾರ್ಯಗಾರಕ್ಕೆ ಸೂಕ್ತ ಸಂಪನ್ಮೂಲವ್ಯಕ್ತಿಗಳನ್ನು ಆಹ್ವಾನಿಸಿ. ಕಾರ್ಯಾಗಾರ ನಡೆಯುವ ಬಗ್ಗೆ ಸವಿವರವಾದ ಮಾಹಿತಿಯನ್ನು ಅವರಿಗೆ ನೀಡಿ. ಸಂಪನ್ಮೂಲವ್ಯಕ್ತಿಗಳು ನಡೆಸಬೇಕಾದ ವಿಷಯ ಹಾಗು ಅದರ ಪ್ರಸ್ತುತಿ ನಡೆಸುವ ಕುರಿತಂತೆ ಕಾರ್ಯಾಗಾರದಲ್ಲಿ ಒದಗಿಸಬೇಕಾದ ವ್ಯವಸ್ಥೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಿ. ಸಾಧ್ಯ ಅಸಾಧ್ಯಾತೆಗಳ ಬಗ್ಗೆ ಸಂಪನ್ಮೂಲವ್ಯಕ್ತಿಗಳಿಗೆ ಪೂರ್ವಭಾವಿಯಾಗಿ ತಿಳಿಸಿ. (ಉದಾ: ಓಎಚ್‌ಪಿ ಪ್ರೊಜೆಕ್ಟರ್, ಎಲ್‌ಸಿಡಿ ಪ್ರೊಜೆಕ್ಟರ್, ಸ್ಲೈಡ್ ಪೊಜೆಕ್ಟರ್ ಇತ್ಯಾದಿ).
- ಸಂಪನ್ಮೂಲ ವ್ಯಕ್ತಿಗಳು ಪ್ರಸ್ತುತ ಪಡಿಸುವ ವಿಷಯದ ಬಗ್ಗೆ ಬಾಷಣ, ಉಪನ್ಯಾಸ ಲೇಖನಗಳನ್ನು ಪ್ರತಿ ಮಾಡಿ ಆಗಮಿಸುವ ಪ್ರತಿನಿಧಿಗಳಿಗೆ ಒದಗಿಸ ಬಹುದಾದಲ್ಲಿ ಪ್ರಯತ್ನಿಸಿ. ಕಾರ್ಯಾಗಾರಕ್ಕೆ ಆಗಮಿಸಬೇಕಾದ ಪ್ರತಿನಿಧಿಗಳಿಗೆ ಆಹ್ವಾನ ಪತ್ರಿಕೆಯನ್ನು ತಲುಪಿಸಿ. ನೀವು ಅಥವಾ ನಿಮ್ಮ ಸಹವರ್ತಿಗಳು ಖುದ್ದಾಗಿ ಹೋಗಿ ಆಹ್ವಾನಿಸಲು ಸಾಧ್ಯವಿದ್ದಲ್ಲಿ ಉತ್ತಮ. ಕಾರ್ಯಗಾರದ ದಿನದಂದು ಸಣ್ಣಪ್ರಮಾಣದ ಉಪಹಾರ, ಲಘುಪಾನೀಯ, ಅಪರಾಹ್ನದ ಹೊತ್ತಿಗೆ ಲಘು ಊಟ, ಸಂಜೆ ಸುಮಾರಿಗೆ ಚಹಾ, ಕಾಫಿಗಳನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಿ.






- ವೇದಿಕೆಯ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಬಗ್ಗೆಗಿನ ಮಾಹಿತಿ ನೀಡುವ ಫಲಕ ಅಥವಾ ಬ್ಯಾನರ್ ಸಿದ್ಧಪಡಿಸಿ.
- ಕಾರ್ಯಾಗಾರದಲ್ಲಿ ಸಣ್ಣ ಪ್ರಮಾಣದ ಧ್ವನಿವರ್ಧಕಗಳ ಬಳಕೆ ಇದ್ದಲ್ಲಿ ಹೆಚ್ಚಿನ ಅನುಕೂಲವಾಗುವುದು.
- ಪ್ರತಿನಿಧಿಗಳು ಓದಿ ತಿಳಿಯಲೇ ಬೇಕಾದ ವಿಚಾರಗಳ ಬಗ್ಗೆ, ಮಾಹಿತಿ ಮತ್ತು ಲೇಖನಗಳನ್ನು ಪ್ರತಿಮಾಡಿಸಿಕೊಳ್ಳಿ.
- ಲೇಖನ ಸಾಮಾಗ್ರಿಗಳು ಹಾಗು ಕಾರ್ಯಗಾರಕ್ಕೆ ಬೇಕಾದ ಪೂರಕ ಸಾಮಾಗ್ರಿಗಳನ್ನು ಮುಂಚಿತವಾಗಿ ಸಿದ್ಧಪಡಿಸಿಟ್ಟುಕೊಳ್ಳಿ.
- ಕಾರ್ಯಗಾರದಲ್ಲಿ ಸಹಾಯನೀಡಲು ಸಣ್ಣದಾದ ನಾಲ್ಕೈದು ಜನರ ಕಾರ್ಯಪಡೆಯನ್ನು ನಿಯೋಜಿಸಿಕೊಳ್ಳಿ.
- ಅವರೊಂದಿಗೆ ಒಟ್ಟು ಕಾರ್ಯಗಾರ ನಡೆಯುವ ರೀತಿ, ನಡೆಸುವ ರೀತಿ ಇತ್ಯಾದಿಗಳ ಬಗ್ಗೆ ಪೂರ್ವಭಾವಿಯಾಗಿ ಚರ್ಚಿಸಿ ಎಲ್ಲಾ ಅಂಶಗಳನ್ನು ಮನನಮಾಡಿಸಿ.
- ಕಾರ್ಯಾಗಾರದ ಸಭಾಂಗಣದಲ್ಲಿ ಬಾಲಕಾರ್ಮಿಕತೆಯನ್ನು ಪ್ರತಿಬಿಂಬಿಸುವ ಭಿತ್ತಿಚಿತ್ರಗಳು, ಅದನ್ನು ನಿವಾರಿಸುವ ಮಾರ್ಗೋಪಾಯಗಳ ಬಗ್ಗೆಗಿನ ಬ್ಯಾನರ್, ಫಲಕಗಳು, ದಾಖಲಾತಿಗಳಿಂದ ಸಜ್ಜುಗೊಳಿಸಿ.
- ಕಾರ್ಯಾಗಾರಕ್ಕೆ ವೆಚ್ಚವಾಗಬಹುದಾದ ಅಂದಾಜು ವೆಚ್ಚ ಪಟ್ಟಿಯನ್ನು ತಯಾರಿಸಿ.
- ವೆಚ್ಚವನ್ನು ಸರಿದೂಗಿಸಲು ಈ ಕೆಳಗಿನ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬಹುದು.
  - ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆಗಳು ಈ ಕಾರ್ಯಕ್ರಮಗಳನ್ನು ಹಮ್ಮಿಕೊಂಡಲ್ಲಿ ಒಂದು ನಿರ್ದಿಷ್ಟ ಅನುದಾನದಲ್ಲಿ ಕಾರ್ಯಗಾರವನ್ನು ನಡೆಸಬಹುದಾದರೂ, ಸರ್ಕಾರಿ ಇಲಾಖೆಯ ಅನುದಾನವನ್ನು ಆಶ್ರಯಿಸಿಯೇ ಈ ಕಾರ್ಯಕ್ರಮವನ್ನು ನಡೆಸಬೇಕಾಗಿಲ್ಲ.
  - ವಿವಿಧ ಸಾಮಾಜಿಕ ಸಂಘಟನೆಗಳು, ಸ್ವಯಂ ಸೇವಾ ಸಂಸ್ಥೆಗಳು, ಉದ್ಯೋಗದಾತರ ಒಕ್ಕೂಟಗಳು, ದಾನಿಗಳು ಈ ತೆರನಾದ ಕಾರ್ಯಗಳ ವೆಚ್ಚವನ್ನು ಭರಿಸುವ ಸಾಧ್ಯತೆಗಳು ಅಧಿಕ ಸಂಖ್ಯೆಯಲ್ಲಿರುತ್ತದೆ. ಇಂತಹ ಸಂಪನ್ಮೂಲದ ವ್ಯವಸ್ಥೆಯನ್ನು ಸ್ಥಳೀಯವಾಗಿ ಸಂಗ್ರಹಿಸುವ ಪ್ರಯತ್ನ ನಡೆಸಿದಲ್ಲಿ ಇದು ಇತರರಿಗೂ ಮಾದರಿ ಮಾತ್ರವಲ್ಲ ಬಾಲಕಾರ್ಮಿಕತೆಯ ಅನಿಷ್ಟವನ್ನು ತೊಡೆದು ಹಾಕುವಲ್ಲಿ ಪರೋಕ್ಷ ಬೆಂಬಲವನ್ನು ಹೊಂದಿದಂತಾಗುತ್ತದೆ.
  - ಸಂಗ್ರಹಿಸುವ ಸಂಪನ್ಮೂಲಗಳು ಹಣದ ರೂಪದಲ್ಲಿಯೇ ಇರಬೇಕಾಗಿಲ್ಲ. ಉದಾ: ಪ್ರಿಂಟಿಂಗ್ ಪ್ರೆಸ್‌ನವರು ಉಚಿತವಾಗಿ ಅಥವಾ ರಿಯಾಯತಿ ದರದಲ್ಲಿ ಮುದ್ರಿಸಿ ಕೊಡುವುದು, ಹೋಟೆಲ್ ಮಾಲೀಕರ ಒಕ್ಕೂಟವು ಊಟ ಉಪಹಾರವನ್ನು ಒದಗಿಸುವುದು, ಸರ್ಕಾರದ ಅಥವಾ ಸ್ವಯಂಸೇವಾ ಸಂಸ್ಥೆಗಳ ಸಭಾಂಗಣವನ್ನು ಉಚಿತ ಅಥವಾ ರಿಯಾಯತಿ ದರದಲ್ಲಿ ಹೊಂದುವುದು. ಹೀಗೆ ಪ್ರತಿಯೊಂದು ವೆಚ್ಚವನ್ನು ಸ್ಥಳೀಯವಾಗಿ ಸರಿದೂಗಿಸಲು ಪ್ರಯತ್ನಿಸಿದಲ್ಲಿ ಅಂತಿಮವಾಗಿ ಸಂಘಟನಾ ವೆಚ್ಚ, ಸಂಪನ್ಮೂಲವ್ಯಕ್ತಿಗಳ ಗೌರವಧನ ಇತ್ಯಾದಿಗಳಿಗೆ ಮಾತ್ರ ಹಣಕಾಸಿನ ನೆರವು ಬೇಕಾಗಿರುತ್ತದೆ.
  - ಸಂಗ್ರಹಿಸಿದ ಸಂಪನ್ಮೂಲಗಳ ಬಗ್ಗೆ ಕಾರ್ಯಾಗಾರದಲ್ಲಿ ಪಾರದರ್ಶಕವಾಗಿ ಲೆಕ್ಕಪತ್ರಗಳನ್ನು ಒಪ್ಪಿಸುವುದು, ಸಂಗ್ರಹಿತ ಮೂಲಗಳನ್ನು ನೆನಪಿಸಿಕೊಂಡು ಕೃತಜ್ಞತೆಯನ್ನು ನೆನೆಯುವುದು ಅಗತ್ಯವಾಗಿ ಮಾಡಬೇಕಾದ ಕೆಲಸ.



## 1.4 ತರಬೇತಿ ಕೈಪಿಡಿಯ ಉದ್ದೇಶಗಳು

- ಕಾರ್ಮಿಕ ಸಂಘಟನೆಗಳಿಗೆ ಬಾಲಕಾರ್ಮಿಕತೆಯ ಬಗ್ಗೆ ತರಬೇತಿ ಕೊಡಲು ಅನುಕೂಲವಾಗುವುದು
- ಕಾರ್ಮಿಕ ಸಂಘಟನೆಗಳಿಗೆ ಬಾಲಕಾರ್ಮಿಕ ಸಮಸ್ಯೆಯ ಬಗ್ಗೆ ಅವರ ಮಾಹಿತಿ ಮತ್ತು ಜ್ಞಾನವನ್ನು ಹೆಚ್ಚಿಸುವುದು
- ಕಾರ್ಮಿಕ ಸಂಘಟನೆಗಳಿಗೆ ಬಾಲಕಾರ್ಮಿಕತೆ ಅವರ ಮಕ್ಕಳ ಬೆಳವಣಿಗೆಗೆ ಹಾನಿಕಾರಕ ಎಂಬುದನ್ನು ಮನವರಿಕೆ ಮಾಡಿಕೊಡುವುದು
- ತಮ್ಮ ಪರಿಸರದಲ್ಲಿನ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಕಳುಹಿಸಲು ಮನವರಿಕೆ ಮಾಡಿಕೊಡುವುದು
- ಬಾಲಕಾರ್ಮಿಕತೆ ಬಗ್ಗೆ ಅವಶ್ಯವಾದ ಮಾಹಿತಿಯನ್ನು ಒದಗಿಸುವುದು
- ಬಾಲಕಾರ್ಮಿಕತೆಯ ಕಾರಣಗಳನ್ನು ಹಾಗೂ ಅದರ ಪರಿಣಾಮವನ್ನು ಮನದಟ್ಟು ಮಾಡುವುದು
- ಅವರಿಗೆ "ಮಗು / ಮಕ್ಕಳು" "ಬಾಲಕಾರ್ಮಿಕರು" "ಅಪಾಯಕಾರಿ ಕೆಲಸ" "ನಿಕೃಷ್ಟ ಕೆಲಸ" ಮುಂತಾದವುಗಳ ಅರ್ಥ ಮಾಡಿಕೊಡುವುದು





## 1.5 ತರಬೇತಿಯಲ್ಲಿ ಉಪಯೋಗಿಸಿದ ವಿಧಾನಗಳು

### 1.5.1 ಉಪನ್ಯಾಸ

ಉಪನ್ಯಾಸವನ್ನು, ಹೊಸ ವಿಚಾರಗಳನ್ನು ಮಂಡಿಸಲು, ತರಬೇತಿಯ ಅವಧಿಯನ್ನು ಆರಂಭಿಸಲು, ಹೊಸ ವಿಷಯ ಅಥವಾ ಟಾಪಿಕ್‌ಗಳನ್ನು ಮಂಡಿಸಲು ಉಪಯೋಗಿಸಲಾಗಿದೆ.

### 1.5.2 ಪ್ರಶ್ನೆಗಳು

ಇದನ್ನು ಶಿಬಿರಾರ್ಥಿಗಳನ್ನು ಆಸಕ್ತರನ್ನಾಗಿ ಇಡಲು ಮತ್ತು ಚರ್ಚೆಯನ್ನು ಆರಂಭಿಸಲು ಉಪಯೋಗಿಸಲಾಗುವುದು. ಪ್ರಶ್ನೆಗಳನ್ನು ಕೇಳುವಾಗ ಹೆದರಿಸುವ ಅಥವಾ ಕಿರಿಕಿರಿ ಉಂಟು ಮಾಡುವ ಹಾಗೆ ಕೇಳಬಾರದು. ಶಿಬಿರಾರ್ಥಿಗಳಿಗೆ ಅವರನ್ನು ಪರೀಕ್ಷೆ ಮಾಡಲು ಪ್ರಶ್ನೆ ಕೇಳಾಗುತ್ತಿದೆ ಎಂಬ ಭಾವನೆ ಬರಬಾರದು.

### 1.5.3 ಉಪಗುಂಪುಗಳಲ್ಲಿ ಚರ್ಚೆ

ಎಲ್ಲಾ ಶಿಬಿರಾರ್ಥಿಗಳು ಸಕ್ರಿಯವಾಗಿ ಭಾಗವಹಿಸಲು ಇದು ಸಹಕಾರಿ ಆಗುವುದು. ಇದು ಭಾಗವಹಿಸುವಿಕೆಯ ಕಲಿಕೆಗೆ ಸಹಾಯ ಮಾಡುವುದು.

### 1.5.4 ಸಣ್ಣ ಗುಂಪು ಚಟುವಟಿಕೆ

ಇದು ಸಹ ಒಂದು ಸಕ್ರಿಯ ವಿಧಾನ.

ಇದು ಸಹಕಾರಿ ತತ್ವದಲ್ಲಿ ಕೆಲಸ ಮಾಡಲು ಅನುವು ಮಾಡಿಕೊಡುವುದು.

ತಮ್ಮನ್ನು ನೋಡಲಾಗುತ್ತಿದೆ ಎಂಬ ಮನೋಭಾವದೊಂದಿಗೆ ಪ್ರಕ್ರಿಯೆಯಲ್ಲಿ ಭಾಗವಹಿಸುವರು.

ಇದು ಶಿಬಿರಾರ್ಥಿಗಳಿಗೆ ಅನ್ವೇಷಣೆ ಮಾಡಲು, ಚರ್ಚಿಸಲು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸುವುದು.

ಸ್ವಲ್ಪ ಕಡಿಮೆ ಧ್ಯೇಯದ ಸದಸ್ಯರಿಗೆ ಭಾಗವಹಿಸಲು ಆಸ್ಪದ ಮಾಡಿಕೊಡುವುದು.

### 1.5.5 ಪಾತ್ರಾಭಿನಯ

ಇದು ಸಹ ಶಿಬಿರಾರ್ಥಿಗಳಿಗೆ ಭಾಗವಹಿಸುವಿಕೆಯನ್ನು ಖಾತ್ರಿ ಪಡಿಸುವ ಒಂದು ಪ್ರಕ್ರಿಯೆ. ಯಾವುದೇ ಘಟನೆಯನ್ನು ಪಾತ್ರಾಭಿನಯವಾಗಿ ಮಾರ್ಪಡಿಸಬಹುದು. ಇದು ಶಿಬಿರಾರ್ಥಿಗಳಿಗೆ ವಿಷಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು.

### 1.5.6 ಕ್ರಿಯಾ ಯೋಜನೆ

ಇದನ್ನು ಗುಂಪುಚಟುವಟಿಕೆಯಾಗಿ ಅಥವಾ ವ್ಯಕ್ತಿಗತ ಚಟುವಟಿಕೆಯಾಗಿ ಉಪಯೋಗಿಸಬಹುದು. ಇದು ಶಿಬಿರಾರ್ಥಿಗಳಿಗೆ ಹೆಚ್ಚು ಯೋಚಿಸಲು ಆಸ್ಪದ ಮಾಡಿಕೊಡುವುದು. ಇದು ಶಿಬಿರಾರ್ಥಿಗಳಿಗೆ ಹೊಸ ಹೊಸ ತಂತ್ರಗಳನ್ನು ರೂಪಿಸಿಕೊಳ್ಳಲು ಸಹಾಯ ಮಾಡುವುದು.

### 1.5.7 ಕೋರ್ಸ್‌ನ ಸಭೆ

ಕೋರ್ಸಿನ ಸಭೆ ನಡೆಸುವುದರಿಂದ ಶಿಬಿರಾರ್ಥಿಗಳಿಗೆ ಕೋರ್ಸಿನ ಬಗ್ಗೆ ಸರಿಯಾದ ಮಾಹಿತಿ ದೊರಕುತ್ತದೆ.


### 1.5.8 ನಿರ್ದೇಶಿತ ಮಾತುಕತೆ

ಇದು ಶಿಬಿರಾರ್ಥಿಗಳಿಗೆ ಹೊಸ ವಿಚಾರಗಳನ್ನು ಹೊರತರಲು ಸಹಕಾರಿಯಾಗುತ್ತದೆ. ತರಬೇತುದಾರರು ನಿರಂತರವಾಗಿ ನಿರ್ದೇಶನ ಕೊಡುತ್ತಿರುತ್ತಾರೆ. ನಿರ್ದೇಶನಗಳ ಮೂಲಕ ಶಿಬಿರಾರ್ಥಿಗಳಿಂದ ಹೊಸ ಹೊಸ ವಿಚಾರಗಳನ್ನು ಹೊರತರಲು ಸಹಾಯವಾಗುವುದು.

### 1.5.9 ಮೆದುಳುಮಂಥನ

ಇದರಲ್ಲಿ ಶಿಬಿರಾರ್ಥಿಗಳು ಒಂದೇ ವಿಷಯದ ಮೇಲೆ ತಮ್ಮ ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡಿಸಲು ಅವಕಾಶ ಇದೆ. ಶಿಬಿರಾರ್ಥಿಗಳು ತಮ್ಮ ಮನಸ್ಸಿಗೆ ಈ ಬಗ್ಗೆ ಮೊದಲು ಬಂದ ವಿಚಾರವನ್ನು ತಿಳಿಸಲು ಶಿಬಿರಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು.






## 1.6 ತರಬೇತುದಾರರ ಕೆಲಸ ಕಾರ್ಯಗಳು

- ತರಬೇತುದಾರರಿಗೆ ಗುಂಪಿನ ಸಂಯೋಜನೆಯ ಬಗ್ಗೆ ಅರಿವಿದ್ದು, ಎಲ್ಲಾ ಶಿಬಿರಾರ್ಥಿಗಳಿಗೆ ಸಮಾನ ಅವಕಾಶ ಒದಗಿಸಬೇಕು.
- ತರಬೇತುದಾರರು ಎಲ್ಲಾ ಶಿಬಿರಾರ್ಥಿಗಳ ಎಲ್ಲಾ ರೀತಿಯ ನಿಲುವು ಮತ್ತು ಯೋಚನೆಗಳಿಗೆ ಬೆಲೆ ಕೊಡಬೇಕು.
- ತರಬೇತುದಾರರು ಚರ್ಚೆಗಳಿಗೆ ಅವಕಾಶ ಕಲ್ಪಿಸಿಕೊಡಬೇಕು.
- ತರಬೇತುದಾರರು ಮೊದಲು ಚರ್ಚೆಯನ್ನು ಆರಂಭಿಸಬೇಕು. ಅವಧಿಯ ಅಂತ್ಯದಲ್ಲಿ ಚರ್ಚೆಯ ಮುಖ್ಯಾಂಶಗಳನ್ನು ಪುನರ್ಮನನ ಮಾಡಬೇಕು.
- ಅವಶ್ಯವಿದ್ದಲ್ಲಿ ಕ್ಷೇತ್ರಭೇಟಿ ಹಾಗು ಅತಿಥಿ ಉಪನ್ಯಾಸಕರ ವ್ಯವಸ್ಥೆ ಮಾಡಬೇಕು.
- ತರಬೇತುದಾರರಿಗೆ ಸಮಯ ಪ್ರಜ್ಞೆ ಇರಬೇಕು. ಅವರು ಸಮಯಕ್ಕೆ ಸರಿಯಾಗಿ ಹಾಜರಿದ್ದು ಇತರರಿಗೆ ಮಾದರಿ ಆಗಬೇಕು.
- ಶಿಬಿರಾರ್ಥಿಗಳ ಅನುಭವದ ಜ್ಞಾನಕ್ಕೆ ಬೆಲೆ ಕೊಡಬೇಕು.
- ತರಬೇತಿದಾರರು ತರಬೇತಿ ಪ್ರಾರಂಭವಾಗುವುದಕ್ಕಿಂತ ಮೊದಲೆ ಸರಿಯಾದ ತಯಾರಿ ಮಾಡಿಕೊಳ್ಳಬೇಕು.
- ತರಬೇತಿದಾರರು ಗುಂಪುಚರ್ಚೆಯನ್ನು ಪ್ರೋತ್ಸಾಹಿಸಬೇಕು.
- ವಿವಿಧ ವಿಷಯಗಳಿಗೆ ಸಂಬಂಧಪಟ್ಟ ಕಿರುಹೊತ್ತಿಗೆ, ಮಾಹಿತಿ ಪತ್ರ ಇತ್ಯಾದಿ ಸಂಗ್ರಹಿಸಿ ಶಿಬಿರಾರ್ಥಿಗಳಿಗೆ ಹಂಚಬೇಕು.
- ತರಬೇತಿ ವೇಳಾಪಟ್ಟಿಯನ್ನು ಶಿಬಿರಾರ್ಥಿಗಳು ಅರ್ಥವಾಡಿಕೊಳ್ಳಲು ಸಹಕರಿಸಬೇಕು.
- ತರಬೇತಿ ಸಂದರ್ಭಗಳಲ್ಲಿ ಅನಾವಶ್ಯಕ ಚರ್ಚೆ, ಮಾತುಕತೆ ಇತ್ಯಾದಿ ನಡೆಯದಂತೆ ನೋಡಿಕೊಳ್ಳಬೇಕು.
- ಹಾಡು, ನಾಟಕ ಇತ್ಯಾದಿಗೆ ಪ್ರೋತ್ಸಾಹ ಕೊಡಬೇಕು.
- ಶಿಬಿರಾರ್ಥಿಗಳು ಪರಸ್ಪರ ಸಮಾಲೋಚಿಸಿ ಕಲಿಯಲು ಪ್ರೋತ್ಸಾಹ ನೀಡಬೇಕು.
- ಶಿಬಿರಾರ್ಥಿಗಳಲ್ಲಿ ಯಾರಾದರೂ ಒಬ್ಬರು, ಇಬ್ಬರು ಅಥವಾ ಒಂದು ಗುಂಪು ಇಡೀ ತರಬೇತಿಯನ್ನು ತಮ್ಮ ಅಧೀನಗೊಳಿಸಿಕೊಳ್ಳುವದಕ್ಕೆ ಪ್ರೋತ್ಸಾಹ ಕೊಡಬಾರದು.
- ಭಾಗವಹಿಸದೇ ಇರುವ ಶಿಬಿರಾರ್ಥಿಗಳನ್ನು ಭಾಗವಹಿಸುವಂತೆ ಪ್ರಚೋದಿಸಬೇಕು.
- ತರಬೇತುದಾರರು ಪ್ರಜಾಸತ್ತಾತ್ಮಕವಾಗಿರಬೇಕು.
- ಶಿಬಿರಾರ್ಥಿಗಳ ಭಾಗವಹಿಸುವಿಕೆಯನ್ನು ಗುರುತಿಸಬೇಕು.
- ಶಿಬಿರಾರ್ಥಿಗಳು ಭಾಗವಹಿಸುವಿಕೆಯಿಂದ ಮತ್ತು ಚರ್ಚೆಯಿಂದ ಹಿಂತೆಗೆಯದಂತೆ ನೋಡಿಕೊಳ್ಳಬೇಕು.






## 1.7 ಮಾದರಿ ವೇಳಾಪಟ್ಟಿ

| ಕ್ರ ಸಂ | ವಿಷಯ | ಸಮಯ | ಚಟುವಟಿಕೆಗಳು | ಸಾಮಗ್ರಿಗಳು |
|---|---|---|---|---|
| 1. | ನೊಂದಣಿ | ಬೆ 09.30 ರಿಂದ ಬೆ 10.00 | ತರಬೇತಿ ಸಾಮಗ್ರಿಗಳ ವಿತರಣೆ ಮತ್ತು ಮಾಹಿತಿ ಸಂಗ್ರಹಣೆ | ನೊಂದಣಿ ಪುಸ್ತಕ, ನೊಂದಣಿ ನಮೂನೆ, ಫೈಲ್, ಪೆನ್ನು, ಮಾಹಿತ ಸಾಮಗ್ರಿಗಳು ಇತ್ಯಾದಿ. |
| 2. | ಉದ್ಘಾಟನೆ | ಬೆ 10.00 ರಿಂದ ಬೆ 10.30 | ಸಭೆ | ಉದ್ಘಾಟನಾ ಸಮಾರಂಭದ ಸಾಮಗ್ರಿಗಳು |
| 3. | ಸ್ವ ಪರಿಚಯ | ಬೆ 10–30 ರಿಂದ ಬೆ 11–30 | ಆಟಗಳು, ಚರ್ಚೆ, ಉಪನ್ಯಾಸ | ಡ್ರಾಯಿಂಗ್ ಹಾಳೆಗಳು, ಕತ್ತರಿ, ಕರಿಹಲಗೆ, ಕಂದು ಬಣ್ಣದ ಹಾಳೆಗಳು, ಮಾರ್ಕರ್ಸ್. |
| | ಚಹಾ ವಿರಾಮ | ಬೆ 11.30 ರಿಂದ ಬೆ 11.45 | – | – |
| 4. | ಬಾಲಕಾರ್ಮಿಕತೆಯ ಸ್ವರೂಪಗಳು, ಬಾಲಕಾರ್ಮಿಕತೆಯ ಕಾರಣಗಳು ಮತ್ತು ಪರಿಣಾಮಗಳು, ಅಪಾಯಕಾರಿ ಬಾಲಕಾರ್ಮಿಕತೆ, ನಿಕೃಷ್ಠ ಮಟ್ಟದ ಬಾಲಕಾರ್ಮಿಕತೆ | ಬೆ 11.45 ರಿಂದ ಮ 12.45 | ಪ್ರದರ್ಶನ, ಮುಕ್ತ ಚರ್ಚೆ | ಎಲ್.ಸಿ.ಡಿ ಪ್ರೊಜೆಕ್ಟರ್, ಓ.ಹೆಚ್.ಪಿ ಪಾರದರ್ಶಿಕೆಗಳು, ಪವರ್ ಪಾಯಿಂಟ್ ಪ್ರದರ್ಶನ, ಕರಿ ಹಲಗೆ, ಬಿಳಿ ಹಲಗೆ, ಮಾರ್ಕರ್ಸ್, ಸ್ಕೆಚ್ ಪೆನ್, ಫ್ಲಿಪ್ ಚಾರ್ಟ ಇತ್ಯಾದಿ. |
| 5. | ಯಾಕೆ ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು | ಮ 12.45 ರಿಂದ ಮ 1.45 | ಪ್ರದರ್ಶನ, ಉಪನ್ಯಾಸ, ಗುಂಪು ಚರ್ಚೆ, ಮೆದುಳು ಮಂಥನ, ವರದಿ ಓದುವುದು. | ಕರಿ ಹಲಗೆ, ಸೀಮೆಸುಣ್ಣ |





| | | | | |
|---|---|---|---|---|
| | ಊಟದ ವಿರಾಮ | ಮ 1.45 ರಿಂದ ಮ 2.15 | – | – |
| 6. | ಕಾರ್ಮಿಕ ಸಂಘಟನೆಗಳು ಏನು ಮಾಡಬಹುದು: | ಮ 2.15 ರಿಂದ ಮ 3.15 | ಉಪನ್ಯಾಸ, ಮಾರ್ಗದರ್ಶಿತ ಗುಂಪು ಚರ್ಚೆ ಮತ್ತು ವರದಿ ಓದುವುದು | ಕರಿ ಹಲಗೆ, ಸೀಮೆಸುಣ್ಣ |
| 7. | ಕಾರ್ಮಿಕ ಸಂಘಟನೆಗಳಿಗಾಗಿ ಕ್ರಿಯಾ ಯೋಜನೆ | ಮ 3.15 ರಿಂದ ಸ 4.15 | ಉಪನ್ಯಾಸ, ಸಣ್ಣ ಗುಂಪು ಚರ್ಚೆ, ಕ್ರಿಯಾ ಯೋಜನೆ ತಯಾರಿ | ಪೇಪರ್, ಪೆನ್ನು, ಕರಿಹಲಗೆ, ಸೀಮೆಸುಣ್ಣ |
| 8. | ಬಾಲಕಾರ್ಮಿಕತೆಯ ಬಗ್ಗೆ ಸಂಘಟಿತ ಚೌಕಾಸಿ | ಸ 4.15 ರಿಂದ ಸ 5.15 | ಗುಂಪು ಚರ್ಚೆ | ಕರಿ ಹಲಗೆ, ಸೀಮೆಸುಣ್ಣ |
| 9. | ಮೌಲ್ಯಮಾಪನ ಮತ್ತು ಮುಕ್ತಾಯ, ಸಾಮಾಜಿಕ ಒಪ್ಪಂದ ಪತ್ರದ ಸಹಿ | ಸ 5.15 ರಿಂದ ಸ 5.45 | ಸಭೆ | ಸಾಮಾಜಿಕ ಒಪ್ಪಂದ ಪತ್ರದ ನಮೂನೆಗಳು, ಮೌಲ್ಯಮಾಪನ ನಮೂನೆಗಳು. |
| 10 | ಚಹಾ | ಸ 5.45 | | |



# ಭಾಗ – 2

# ತರಬೇತಿ ಚಟುವಟಿಕೆಗಳು



# 2.1 ನೊಂದಣಿ

ಸಮಯ: 30 ನಿಮಿಷಗಳು

## 2.1.1 ಉದ್ದೇಶಗಳು

- ಶಿಬಿರಾರ್ಥಿಗಳ ಹೆಸರು ವಿಳಾಸ ಇತ್ಯಾದಿಗಳ ಮಾಹಿತಿ ಸಂಗ್ರಹಿಸುವುದು.
- ಶಿಬಿರಾರ್ಥಿಗಳಿಗೆ ತರಬೇತಿಗೆ ಅವಶ್ಯಕವಾದ ಪರಿಕರಗಳನ್ನು ವಿತರಿಸುವುದು.
- ಶಿಬಿರಾರ್ಥಿಗಳಿಗೆ "ಬಾಲಕಾರ್ಮಿಕತೆ"ಯನ್ನು ಪರಿಚಯಿಸುವುದು.


## 2.1.2 ಪರಿಕರಗಳು

- ನೊಂದಣಿ ಪುಸ್ತಕ
- ನೊಂದಣಿ ನಮೂನೆಗಳು
- ಪೆನ್ನು
- ಶಿಬಿರಾರ್ಥಿಗಳಿಗೆ ಹಂಚುವ ಪರಿಕರಗಳು (ತರಬೇತಿ ವೇಳಾಪಟ್ಟಿ, ತರಬೇತಿ ಪತ್ರಗಳು, ನೊಂದಣಿ ನಮೂನೆ, ಬರೆಯುವ ಪುಸ್ತಕ ಇತ್ಯಾದಿಗಳು)

## 2.1.3 ಪ್ರಕ್ರಿಯೆ

- ತರಬೇತಿ ದಿವಸ ವ್ಯವಸ್ಥಾಪಕರು ಸಾಕಷ್ಟು ಮೊದಲೇ ಬಂದು ವ್ಯವಸ್ಥೆಯನ್ನು ಇನ್ನೊಮ್ಮೆ ಪರೀಕ್ಷಿಸಬೇಕು.
- ಉತ್ತಮವಾಗಿ ಮಾತನಾಡಲು ಮತ್ತು ವಿಚಾರಿಸಿಕೊಳ್ಳಲು ಶಕ್ತರಾಗಿರುವವರನ್ನು ನೊಂದಣಿ ಮಾಡಿಕೊಳ್ಳಲು ನೇಮಿಸಬೇಕು.
- ಶಿಬಿರಾರ್ಥಿಗಳು ಆಗಮಿಸಿದ ಹಾಗೆ ಅವರನ್ನು ನೊಂದಾಯಿಸಿಕೊಳ್ಳಬೇಕು. ನೊಂದಾಯಿಸಿಕೊಳ್ಳುವಾಗ ಅವರನ್ನು ವಿಚಾರಿಸಿಕೊಳ್ಳಬೇಕು. ಸೌಹಾರ್ದಯುತವಾಗಿ ಅವರ ಹತ್ತಿರ ಮಾತನಾಡಬೇಕು. ಅವರಲ್ಲಿನ ಮುಜುಗರ, ಶಂಕೆ ಇತ್ಯಾದಿ ನಿವಾರಿಸಿ ಹೋಗಿ ಅವರು ವಾತಾವರಣಕ್ಕೆ ಹೊಂದಿಕೊಳ್ಳುವ ಹಾಗೆ ನೋಡಿಕೊಳ್ಳುವುದು ಅವಶ್ಯಕ.
- ತರಬೇತಿ ನಡೆಯುವ ಕಟ್ಟಡದ ಬಾಗಿಲಲ್ಲಿ ಮುಖವಾಡ ಧರಿಸಿದ ಇಬ್ಬರು ನಿಂತು ಶಿಬಿರಾರ್ಥಿಗಳನ್ನು ಬರಮಾಡಿಕೊಳ್ಳಬೇಕು. ಬಾಗಿಲಿನ ಒಂದು ಬದಿಯಲ್ಲಿ ನಗುತ್ತಿರುವ ಮಕ್ಕಳ ಮುಖವಾಡ ಧರಿಸಿದ ವ್ಯಕ್ತಿ ನಿಂತು ಶಿಬಿರಾರ್ಥಿಗಳು ಬಂದ ಹಾಗೆಲ್ಲ ಅವರನ್ನು ನಗುಮುಖದಿಂದ ಸತ್ಕರಿಸಿ ಕೈ ಕುಲುಕಿ ಬರಮಾಡಿಕೊಳ್ಳಬೇಕು.





- ಇನ್ನೊಂದು ಬದಿಯಲ್ಲಿ ಬಾಲಕಾರ್ಮಿಕರ ಮುಖವಾಡ ಧರಿಸಿಕೊಂಡು ಶಿಬಿರಾರ್ಥಿಗಳನ್ನು ಬರಮಾಡಿಕೊಳ್ಳಬೇಕು. ಅವರು ಒಳಗೆ ಬಂದ ಕೂಡಲೆ ಅವರ ಕೈ ಕುಲುಕಬೇಕು. "ಶುಭ ಮುಂಜಾನೆ" ಹೇಳಬೇಕು. ನಂತರ ಶಿಬಿರಾರ್ಥಿಗಳ ಹತ್ತಿರ "ನನ್ನ ಸ್ನೇಹಿತರಾಗುತ್ತೀರಾ" ಎಂದು ಕೇಳಬೇಕು. ಇದಾದ ನಂತರ ಅವರ ಮುಂಗೈಗೆ ಸ್ನೇಹ ಪಟ್ಟಿಯನ್ನು ಕಟ್ಟಬೇಕು. (ಮುಖವಾಡಗಳ ಮತ್ತು ಸ್ನೇಹದ ಪಟ್ಟಿಯ ನಮೂನೆಯನ್ನು ಭಾಗ ನಾಲ್ಕರಲ್ಲಿ ಕೊಡಲಾಗಿದೆ.)
- ಶಿಬಿರಾರ್ಥಿಗಳ ಹೆಸರು ಇತ್ಯಾದಿಗಳನ್ನು ನೊಂದಾಯಿಸಿಕೊಂಡ ನಂತರ ಅವರನ್ನು ಶಿಬಿರದಲ್ಲಿ ವ್ಯವಸ್ಥೆ ಮಾಡಿದ ಬಾಲಕಾರ್ಮಿಕರಿಗೆ ಸಂಬಂಧ ಪಟ್ಟ ವಸ್ತು ಪ್ರದರ್ಶನಕ್ಕೆ ಕರೆದುಕೊಂಡು ಹೋಗಬೇಕು. ಈ ವಸ್ತು ಪ್ರದರ್ಶನದಲ್ಲಿ ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಪೋಸ್ಟರ್‌ಗಳು, ಸ್ಟಿಕ್ಕರ್‌ಗಳು, ಬ್ಯಾನರ್‌ಗಳು, ವರ್ತಮಾನ ಪತ್ರಿಕೆಯ ತುಂಡುಗಳು, ಗ್ರಾಫ್‌ಗಳು, ಕಿರುಹೊತ್ತಿಗೆಗಳು, ಪೇಂಟಿಂಗ್‌ಗಳು, ಬ್ರೋಷರ್‌ಗಳು, ರೇಖಾಚಿತ್ರಗಳು ಇತ್ಯಾದಿಗಳು ಇರಬಹುದು.
- ವಸ್ತು ಪ್ರದರ್ಶನದ ವೀಕ್ಷಣೆಯ ನಂತರ ಉಪಹಾರದ ವ್ಯವಸ್ಥೆ ಇದ್ದರೆ ಅವರನ್ನ ಉಪಹಾರಕ್ಕೆ ಕಳುಹಿಸಿಕೊಡಬೇಕು. ಇಲ್ಲದೆ ಇದ್ದಲ್ಲಿ ಅವರನ್ನು ತರಬೇತಿ ಕೊಠಡಿಯಲ್ಲಿ ಆಸೀನರಾಗುವಂತೆ ವಿನಂತಿಸಬೇಕು.


### 2.1.4 ನಿರೀಕ್ಷಿತ ಫಲಿತಾಂಶಗಳು

- ಶಿಬಿರಾರ್ಥಿಗಳಿಗೆ ಸಂಬಂಧಪಟ್ಟಂತೆ ಅವಶ್ಯಕವಾದ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ.
- ಶಿಬಿರಾರ್ಥಿಗಳಿಗೆ ತರಬೇತಿಯಲ್ಲಿ ಉಪಯೋಗಿಸಲು ಅವಶ್ಯಕವಾದ ಪರಿಕರಗಳನ್ನು ವಿತರಿಸಲಾಗುತ್ತದೆ.
- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ಬಗ್ಗೆ ಪ್ರಾಥಮಿಕ ಅರಿವನ್ನು ಮಾಡಿಕೊಳ್ಳುವರು. ಅವರ ಅರಿವಿನ ಮಟ್ಟ ಹೆಚ್ಚಾಗುವುದು. ವಸ್ತು ಪ್ರದರ್ಶನದಿಂದ ಬಾಲಕಾರ್ಮಿಕತೆಯ ಪರಿಮಾಣ ಮತ್ತು ಪರಿಣಾಮವನ್ನು ಅರ್ಥ ಮಾಡಿಕೊಳ್ಳುವರು.
- ಸ್ನೇಹ ಸೂಚಿ ಪಟ್ಟಿಯಿಂದ ಶಿಬಿರಾರ್ಥಿಗಳು ವೈಯಕ್ತಿಕವಾಗಿ ಬಾಲಕಾರ್ಮಿಕತೆ ಬಗ್ಗೆ ಯೋಚಿಸಲು ಆರಂಭಿಸುವರು.

### 2.1.5 ಸೂಚನೆಗಳು

- ಉತ್ತಮವಾಗಿ ಮಾತನಾಡಲು ಹಾಗೂ ವಿಚಾರಿಸಿಕೊಳ್ಳಲು ಶಕ್ತರಾಗಿರುವವರನ್ನು ನೊಂದಣಿ ಮಾಡಲು ಗುರುತಿಸಿಕೊಳ್ಳಬೇಕು. ನೊಂದಣಿ ಪ್ರಕ್ರಿಯೆ ತರಬೇತಿದಾರರು ಮತ್ತು ಶಿಬಿರಾರ್ಥಿಗಳ ಮಧ್ಯೆ ಏರ್ಪಡಬಹುದಾದ ಬಾಂದವ್ಯದ ಪ್ರಥಮ ಸೋಪಾನವಾಗಿರುತ್ತದೆ. ಪ್ರತಿಯೊಬ್ಬ ಶಿಬಿರಾರ್ಥಿಗಳು ತಾವು ಒಬ್ಬ ವಿಶೇಷ ವ್ಯಕ್ತಿ ಎಂಬ ಭಾವನೆ ಹೊಂದುವಂತೆ ಅವರನ್ನು ಬರಮಾಡಿಕೊಳ್ಳಬೇಕು.
- ಶಿಬಿರಾರ್ಥಿಗಳು ತಮ್ಮ ಚಾ, ಊಟದ ವಿರಾಮ ಮುಂತಾದವುಗಳಲ್ಲಿ ವಸ್ತು ಪ್ರದರ್ಶನಕ್ಕೆ ಭೇಟಿ ಕೊಡಲು ಪ್ರೋತ್ಸಾಹಿಸಬೇಕು. ಅವರು ತಮ್ಮ ತಮ್ಮಲ್ಲಿ ಮತ್ತು ಸಂಪನ್ಮೂಲ ವ್ಯಕ್ತಿಗಳ ಜೊತೆಯಲ್ಲಿ ಬಾಲಕಾರ್ಮಿಕತೆಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಚರ್ಚಿಸಲು ಪ್ರೋತ್ಸಾಹಿಸಬೇಕು.





## 2.2 ಉದ್ಘಾಟನೆ

ಸಮಯ: 30 ನಿಮಿಷಗಳು

### 2.2.1 ಉದ್ದೇಶಗಳು

ತರಬೇತಿಗೆ ಚಾಲನೆ ನೀಡುವುದು.

ಪ್ರಶಿಕ್ಷಣಾರ್ಥಿಗಳಿಗೆ ಪ್ರೇರೇಪಣೆ ನೀಡುವುದು.

### 2.2.2 ಪ್ರಕ್ರಿಯೆ

- ಉದ್ಘಾಟನೆಗೆ ಬಂದ ಅತಿಥಿಗಳನ್ನು ವೇದಿಕೆಗೆ ಆಹ್ವಾನಿಸುವುದು.
- ಸ್ವಾಗತ ಗೀತೆ, ಸ್ವಾಗತದ ನಂತರ ತರಬೇತಿಗೆ ಪೂರಕವಾಗಿ ಬಾಲ ಕಾರ್ಮಿಕತನದ ಕುರಿತು ಸಂಕ್ಷಿಪ್ತವಾಗಿ ಸಂಘಟಕರು ಅಥವಾ ಸಂಪನ್ಮೂಲ ವ್ಯಕ್ತಿ 5 ನಿಮಿಷ ಮಾತನಾಡುವುದು.
- ಸ್ವಾಗತ ಭಾಷಣ
- ಉದ್ಘಾಟಕರು ಪೂರಕವಾಗಿ 10 ನಿಮಿಷ ಮಾತನಾಡಿ, ಪ್ರಶಿಕ್ಷಣಾರ್ಥಿಗಳ ಜವಾಬ್ದಾರಿ ಕುರಿತು ವಿವರಿಸುವುದು.
- ಉದ್ಘಾಟನೆ
- ಭಾಷಣ / ಪ್ರಸ್ತಾವನೆ
- ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯ.

### 2.2.3 ಗಮನಿಸಿ

ಉದ್ಘಾಟಕರು ಸಮಯಕ್ಕೆ ಸರಿಯಾಗಿ ಬರುವಂತೆ ತಿಳಿಸುವುದು.

ಅವರಿಗಾಗಿ ಕಾಯುವಂತಾಗಬಾರದು.

ತಡವಾದರೆ, ಉದ್ಘಾಟನೆ ಸಾಂಕೇತಿಕವಾಗಿ ಮಾಡುವುದು.

ದೀಪ ಬೆಳಗುವುದು ಮುಂತಾದ ಸಾಂಪ್ರದಾಯಿಕ ಕ್ರಮ ಬೇಡ.


ಕಾರ್ಯಕ್ರಮಕ್ಕೆ ಪೂರಕವಾಗಿರುವ ಗಣ್ಯರನ್ನೇ ಆಹ್ವಾನಿಸುವುದು.

ಸ್ವಾಗತ ಗೀತೆಯನ್ನು ಹಾಡುವಾಗ, ಬಾಲಕಾರ್ಮಿಕತೆಯನ್ನು ನಿವಾರಿಸುವ ಸಂಬಂಧಿ ಇರುವ ಗೀತೆಯನ್ನು ಹಾಡುವುದು ಅವಶ್ಯ.



ಉದ್ಘಾಟಕರು ಬಾಲಕಾರ್ಮಿಕತೆಯ ನಿವಾರಣೆ ಬಗ್ಗೆಯೆ ಮಾತನಾಡಬೇಕು. ಅವರಿಗೆ ಅವಶ್ಯವಾದ ಮಾಹಿತಿಯನ್ನು ಸಾಕಷ್ಟು ಮೊದಲೇ ಒದಗಿಸುವುದು.

ಒಟ್ಟಿನಲ್ಲಿ ಉದ್ಘಾಟನೆಯಲ್ಲಿ ಏನೂ ಅಭಾಸ ಆಗದಂತೆ ನೋಡಿಕೊಳ್ಳಬೇಕು.



## 2.3 ಸ್ವ ಪರಿಚಯ

ಸಮಯ: 20 ನಿಮಿಷಗಳು

### 2.3.1 ಉದ್ದೇಶಗಳು

- ಶಿಬಿರಾರ್ಥಿಗಳು ಇತರೆ ಶಿಬಿರಾರ್ಥಿಗಳನ್ನು ಅರ್ಥ ಮಾಡಿಕೊಳ್ಳುವುದು
- ಶಿಬಿರಾರ್ಥಿಗಳನ್ನು ತರಬೇತಿಯಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳುವಂತೆ ಮಾಡುವುದು


### 2.3.2 ಪ್ರಕ್ರಿಯೆ

ಇಂತಹ ತರಬೇತಿಗಳಲ್ಲಿ ಶಿಬಿರಾರ್ಥಿಗಳೆಲ್ಲರು ಒಂದೇ ಪ್ರದೇಶದವರಾಗಿರುವುದರಿಂದ ಪ್ರತಿಯೊಬ್ಬರ ಪರಿಚಯ ಇರುತ್ತದೆ. ಇಲ್ಲಿ ಸುಧೀರ್ಘವಾದ ಪರಸ್ಪರ ಪರಿಚಯದ ಚಟುವಟಿಕೆಯ ಅವಶ್ಯಕತೆ ಇರುವುದಿಲ್ಲ. ಸಂಕ್ಷಿಪ್ತವಾದ ಸ್ವ–ಪರಿಚಯದ ಚಟುವಟಿಕೆಯನ್ನು ಅಳವಡಿಸಿಕೊಳ್ಳುವುದು ಸೂಕ್ತ. ಪ್ರತಿಯೊಬ್ಬ ಶಿಬಿರಾರ್ಥಿ ತನ್ನನ್ನು ಸಭೆಗೆ ಪರಿಚಯಿಸಿಕೊಳ್ಳುವಂತೆ ಸೂಚಿಸುವುದು.

### 2.3.3 ನಿರೀಕ್ಷಿತ ಫಲಿತಾಂಶಗಳು

- ಶಿಬಿರಾರ್ಥಿಗಳು ತರಬೇತಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ತಯಾರಾಗುತ್ತಾರೆ.





## 2.4 ಮಕ್ಕಳನ್ನು ಅರ್ಥಮಾಡಿಕೊಳ್ಳುವುದು

ಸಮಯ: 40 ನಿಮಿಷಗಳು

### 2.4.1 ಉದ್ದೇಶಗಳು

- ಮಕ್ಕಳು / ಮಗು ಎಂಬ ಶಬ್ದದ ಜೊತೆಯಲ್ಲಿ ಹೊರ ಬರುವ ಹಲವಾರು ಭಾವನೆಗಳಿಗೆ ಸಂಬಂಧಪಟ್ಟ ಅಂಶಗಳನ್ನು ಗುರುತಿಸುವುದು
- ಬಾಲಕಾರ್ಮಿಕತೆಯ ಸೂಕ್ಷ್ಮತೆಯನ್ನು ಹೆಚ್ಚಿಸುವುದು

### 2.4.2 ಪರಿಕರಗಳು


- ಕರಿಹಲಗೆ
- ಸೀಮೆಸುಣ್ಣ
- ಚಾರ್ಟ್ ಹಾಳೆಗಳು
- ಸ್ಕೆಚ್ ಪೆನ್ನುಗಳು
- ಸೆಲೋಟೇಪ್

### 2.4.3 ಪ್ರಕ್ರಿಯೆ

#### 2.4.3.1 ಉಪಚಟುವಟಿಕೆ 1 – "ನನಗೆ ಇದು ಬೇಕು"

ತರಬೇತುದಾರರು ಕರಿಹಲಗೆ ಅಥವಾ ಚಾರ್ಟ್ ಹಾಳೆಯ ಮೇಲೆ ಮಗು ಎಂಬ ಶಬ್ದವನ್ನು ದೊಡ್ಡದಾಗಿ ಬರೆಯಬೇಕು. ಇದರ ಜೊತೆಯಲ್ಲಿ ಮಗುವಿನ ಮುಖದ ಚಿತ್ರವನ್ನು ರಚಿಸಬೇಕು. ಶಿಬಿರಾರ್ಥಿಗಳ ಹತ್ತಿರ ಚಿತ್ರವನ್ನು ನೋಡಿ, "ಮಗು" ಎಂಬ ಶಬ್ದದ ಜೊತೆಯಲ್ಲಿ ಸಂಬಂಧ ಹೊಂದಿರುವ ಎಲ್ಲಾ ಅಂಶಗಳನ್ನು ಪಟ್ಟಿ ಮಾಡಲು / ಸೂಚಿಸಲು ತಿಳಿಸಬೇಕು. ಶಿಬಿರಾರ್ಥಿಗಳಿಗೆ ಅನುಕೂಲ ಮಾಡಿಕೊಡಲು, ತರಬೇತುದಾರರು ಈ ಕೆಳಗಿನ ಪ್ರಶ್ನೆಗಳನ್ನು ಹಾಕಬಹುದು. ಮಗುವಿನ ಅಭಿವೃದ್ಧಿ ಮತ್ತು ಉತ್ತಮ ಜೀವನದ ಬಗ್ಗೆ ಅವಶ್ಯಕವಾದ ಅಂಶಗಳೇನು? ಶಿಬಿರಾರ್ಥಿಗಳು ಈ ಬಗ್ಗೆ ಅರ್ಥ ಹಾಗೂ ಸಂಪರ್ಕ ಹೊಂದಿರುವ ಶಬ್ದಗಳನ್ನು ಹೆಚ್ಚು ಹೆಚ್ಚು ಹೊರಗೆ ಹಾಕಲು ಪ್ರೋತ್ಸಾಹಿಸಬೇಕು. ಹೀಗೆ ಹೊರಬಂದ ಅಂಶಗಳನ್ನು ಚಿತ್ರದಲ್ಲಿ ಸೂಚಿಸಿ ಹಾಗೆ ಮಗುವಿನ ಮುಖದ ಚಿತ್ರದ ಮೇಲೆ, ಕೆಳಗೆ ಹಾಗೂ ಎರಡೂ ಬದಿಗಳಲ್ಲಿ ಬರೆಯಬೇಕು.






**ನನಗೆ ಇದು ಬೇಕು**

ಪೋಷಕರು ಆಹಾರ ಶಿಕ್ಷಣ ಆರೋಗ್ಯ ಕಾಪಾಡುವುದು

ಹೊಗಳುವಿಕೆ ವಿಶ್ರಾಂತಿ

ಮನೋರಂಜನೆ

ಗೌರವ / ಘನತೆ



ಬಟ್ಟೆ

ಪ್ರೀತಿ

ರಕ್ಷಣೆ

ಮನೆ ಬಹುಮಾನ ಪಾಲನೆ

ಸುರಕ್ಷತೆ

ಪ್ರೋತ್ಸಾಹ ಸಂಸ್ಕೃತಿ ಕೌಶಲ್ಯ

ಹಾಸಿಗೆ / ಕೊಠಡಿ ನಂಬಿಕೆ


ನಂತರ ಶಿಬಿರಾರ್ಥಿಗಳ ಹತ್ತಿರ ಮೇಲೆ ಪಟ್ಟಿ ಮಾಡಿದ ಅಂಶಗಳಲ್ಲಿ ಬಾಲಕಾರ್ಮಿಕರು ಯಾವುದನ್ನು ಪಡೆಯುತ್ತಿದ್ದಾರೆ ಹಾಗೂ ಯಾವುದರಿಂದ ವಂಚಿತರಾಗಿದ್ದಾರೆ ಎಂಬ ಪ್ರಶ್ನೆಯನ್ನು ಕೇಳಬೇಕು. ಬಾಲಕಾರ್ಮಿಕರು ವಂಚಿತರಾದ ಅಂಶಗಳನ್ನು ಬೇರೆ ಬಣ್ಣದಿಂದ ಗುರುತಿಸಬೇಕು.

ಕೊನೆಯಲ್ಲಿ ಒಂದು ಅಥವಾ ಎರಡು ಅಂಶಗಳನ್ನು ಮೇಲೆ ಹೇಳಿದ ಹಾಗೆ ಗುರುತಿಸದೆ ಇರಬಹುದು. ತರಬೇತುದಾರರು ಶಿಬಿರಾರ್ಥಿಗಳ ಹತ್ತಿರ "ಇದು ಏನನ್ನು ಸೂಚಿಸುತ್ತದೆ" ಎಂಬುದನ್ನು ವಿವರಿಸಲು ತಿಳಿಸಬೇಕು. ತಮ್ಮ ಜೀವನದ ಅಭಿವೃದ್ಧಿಗೆ ಅವಶ್ಯಕವಾದ ಅಂಶಗಳನ್ನು ಪಡೆಯದೇ ಇರುವ ಮಕ್ಕಳ ಭವಿಷ್ಯವೇನು? ಎಂಬ ಪ್ರಶ್ನೆಯನ್ನು ಶಿಬಿರಾರ್ಥಿಗಳಿಗೆ ಹಾಕಬೇಕು. ಶೇಕಡಾ 33 ಮಕ್ಕಳು ತಮ್ಮ ಜೀವನದ ಅಭಿವೃದ್ಧಿಗೆ ಅವಶ್ಯಕವಾದ ಅಂಶಗಳನ್ನು ಪಡೆಯಲು ಸಾಧ್ಯವಾಗದ ದೇಶದ ಭವಿಷ್ಯ ಏನಾಗಬಹುದು? ಎಂಬ ಪ್ರಶ್ನೆಯನ್ನು ಸಹ ಶಿಬಿರಾರ್ಥಿಗಳ ಮುಂದಿಡಬೇಕು. ನಾವು ಬಾಲಕಾರ್ಮಿಕತೆಯ ನಿವಾರಣೆಗೆ ಕೆಲಸ ಮಾಡಬೇಕು. ಬೇರೆ ದಾರಿಯೇ ಇಲ್ಲ ಎಂಬ ವಿಚಾರವನ್ನು ಮನದಟ್ಟು ಮಾಡಬೇಕು.

**ಫಲಿತಾಂಶಗಳು**

- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ಬಗ್ಗೆ ಆಳವಾಗಿ ಚಿಂತಿಸಲು ಆರಂಭಿಸುತ್ತಾರೆ.





### 2.4.3.2 ಉಪ ಚಟುವಟಿಕೆ 2 – "ಬಾಲಕಾರ್ಮಿಕರ ಸ್ಥಾನದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವುದು"

#### 2.4.3.2.1 ಪ್ರಕ್ರಿಯೆ

- ತರಬೇತುದಾರರು ಶಿಬಿರಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬೇಕು. ಒಂದು ಗುಂಪಿಗೆ ಬಾಲಕಾರ್ಮಿಕರಾಗಿ ವರ್ತಿಸುವಂತೆ ತಿಳಿಸಬೇಕು. ಇನ್ನೊಂದು ಗುಂಪಿಗೆ ಇತರ ಸಾಮಾನ್ಯ ಮಕ್ಕಳಂತೆ ವರ್ತಿಸಲು ತಿಳಿಸುವುದು.
- ತರಬೇತುದಾರರು ದಿನದ ಬೇರೆ ಬೇರೆ ಅವಧಿಯನ್ನು ಘೋಷಿಸಿದಾಗ, ಎರಡು ಗುಂಪಿನ ಶಿಬಿರಾರ್ಥಿಗಳು ಅವರು ಪ್ರತಿನಿಧಿಸುತ್ತಿರುವ ಮಕ್ಕಳು ಆ ಸಮಯದಲ್ಲಿ ಯಾವ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ ಎಂಬುದನ್ನು ಅಭಿನಯದ ಮೂಲಕ ತೋರಿಸಬೇಕು. ಉದಾ: "ಬೆಳಿಗ್ಗೆ ಆರು ಘಂಟೆ" ಎಂದ ಕೂಡಲೆ ಬಾಲಕಾರ್ಮಿಕರನ್ನು ಪ್ರತಿನಿಧಿಸುತ್ತಿರುವ ಶಿಬಿರಾರ್ಥಿಗಳು ಮಕ್ಕಳು ಕೆಲಸಕ್ಕೆ ಹೋಗಲು ತಯಾರಾಗುತ್ತಿರುವುದನ್ನು ತೋರಿಸಬೇಕು. ಸಾಮಾನ್ಯ ಮಕ್ಕಳನ್ನು ಪ್ರತಿನಿಧಿಸುತ್ತಿರುವವರು ಮಕ್ಕಳು ಇನ್ನು ಸವಿನಿದ್ರೆಯಲ್ಲಿದ್ದು ಅವರನ್ನು ಪೋಷಕರು ಕೊಂಡಾಟದಿಂದ ಎಬ್ಬಿಸಲು ಪ್ರಯತ್ನಿಸುತ್ತಿರುವುದನ್ನು ಅಭಿನಯದ ಮೂಲಕ ತೋರಿಸಬೇಕು.
- ತರಬೇತುದಾರರು ಬೇರೆ ಬೇರೆ ಸಮಯವನ್ನು ಅಂದರೆ ಬೆಳಿಗ್ಗೆ ಏಳು ಘಂಟೆ, ಹತ್ತು ಘಂಟೆ, ಮಧ್ಯಾಹ್ನ ಹನ್ನೆರಡು ಘಂಟೆ ಹಾಗೂ ಸಂಜೆ ಮೂರು ಘಂಟೆ, ಆರು ಘಂಟೆ, ರಾತ್ರಿ ಒಂಭತ್ತು ಘಂಟೆ ಮಧ್ಯರಾತ್ರಿ ಹನ್ನೆರಡು ಘಂಟೆ ಇತ್ಯಾದಿ ಘೋಷಿಸಿದಾಗ ಎರಡು ಗುಂಪಿನವರು ತಾವು ಪ್ರತಿನಿಧಿಸುತ್ತಿರುವ ಮಕ್ಕಳು ಆ ಸಮಯದಲ್ಲಿ ತೊಡಗಿರುವ ಚಟುವಟಿಕೆಗಳನ್ನು ಅಭಿನಯದ ಮೂಲಕ ತೋರಿಸಬೇಕು.
- ಇದಾದ ನಂತರ ತರಬೇತುದಾರರು ಈ ಕೆಳಗಿನ ಪ್ರಶ್ನೆಗಳನ್ನು ಹಾಕಿ ಚರ್ಚೆಗೆ ಪ್ರಚೋದಿಸಬೇಕು.
  - ➢ ಎರಡು ಗುಂಪಿನ ಮಕ್ಕಳ ದೈನಂದಿನ ಚಟುವಟಿಕೆಗಳಲ್ಲಿರುವ ವ್ಯತ್ಯಾಸಗಳೇನು?
  - ➢ ಈ ವ್ಯತ್ಯಾಸಗಳ ಪರಿಣಾಮಗಳೇನು?
  - ➢ ಬಾಲಕಾರ್ಮಿಕರು ಯಾವುದಾದರೂ ಹಕ್ಕುಗಳನ್ನು ಕಡಿದುಕೊಂಡಿದ್ದಾರೆಯೇ?
  - ➢ ಮೇಲಿನ ಚಟುವಟಿಕೆಗಳಿಂದ ನಾವೇನು ಗ್ರಹಿಸಬಹುದು?

#### 2.4.3.2.2 ಫಲಿತಾಂಶಗಳು

- ಶಿಬಿರಾರ್ಥಿಗಳು ಬಾಲಕಾರ್ಮಿಕರು ಪ್ರತಿದಿನ ಪಡುತ್ತಿರುವ ಕಷ್ಟಕಾರ್ಪಣ್ಯಗಳನ್ನು ಅರ್ಥಮಾಡಿಕೊಳ್ಳುವರು
- ಶಿಬಿರಾರ್ಥಿಗಳು ಬಾಲಕಾರ್ಮಿಕರು ಏನನ್ನು ಕಳೆದುಕೊಳ್ಳುತ್ತಿದ್ದಾರೆಂದು ಅರ್ಥಮಾಡಿಕೊಳ್ಳುವರು.

#### 2.4.3.2.3 ಸೂಚನೆಗಳು

- ಕೆಲವು ಶಿಬಿರಾರ್ಥಿಗಳು ಬಾಲಕಾರ್ಮಿಕರಾಗಿ ಅಭಿನಯಿಸಲು ಶಕ್ತರಾಗದೇ ಇರಬಹುದು. ಅವರಿಗೆ ಬಾಲಕಾರ್ಮಿಕರ ದಿನನಿತ್ಯದ ಕೆಲಸ ಕಾರ್ಯಗಳ ಪರಿಚಯ ಇಲ್ಲದೆ ಇರಬಹುದು. ಅಂತವರು ಕೆಲವು ಬಾಲಕಾರ್ಮಿಕರೊಂದಿಗೆ ಮಾತನಾಡಿ ಅವರ ದಿನನಿತ್ಯದ ಜೀವನವನ್ನು ಅರ್ಥಮಾಡಿಕೊಳ್ಳಬೇಕು.



## 2.5 ಬಾಲಕಾರ್ಮಿಕತೆಯ ವಿಸ್ತಾರ, ಆಳ – ಕಾರಣಗಳು ಮತ್ತು ಪರಿಣಾಮಗಳು, ಅಪಾಯಕಾರಿ ಬಾಲಕಾರ್ಮಿಕತೆ – ನಿಕೃಷ್ಟ ಬಾಲಕಾರ್ಮಿಕತೆ.


ಸಮಯ: 60 ನಿಮಿಷಗಳು

### 2.5.1 ಉದ್ದೇಶಗಳು


- ಬಾಲಕಾರ್ಮಿಕತೆಯ ಎಲ್ಲಾ ಮಟ್ಟದಲ್ಲಿನ ಅಗಾಧತೆಯ ಪರಿಚಯ ಮಾಡಿಕೊಡುವುದರ ಜೊತೆಗೆ ಅವರ ಕ್ಷೇತ್ರದಲ್ಲಿನ ಬಾಲಕಾರ್ಮಿಕತೆಯ ಅಗಾಧತೆಯನ್ನು ಪರಿಚಯಿಸುವುದು.

### 2.5.2 ಪಠ್ಯ


ಎ) ವಿಶ್ವದಲ್ಲಿ ಸುಮಾರು 210 ಮಿಲಿಯನ್ 5–14 ವರ್ಷದ ಮಕ್ಕಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಇದು ಪ್ರಪಂಚದ ಮಕ್ಕಳ ಪ್ರಮಾಣದಲ್ಲಿ ಸುಮಾರು 1/5 ಭಾಗದಷ್ಟಿದೆ.





ಬಿ) ಭಾರತದಲ್ಲಿ 5–14 ವರ್ಷದ 203 ಮಿಲಿಯ ಮಕ್ಕಳಲ್ಲಿ 116 ಮಿಲಿಯ ಮಕ್ಕಳು ಶಾಲೆಯಲ್ಲಿದ್ದರೆ, 12.6 ಮಿಲಿಯನ್ ಮಕ್ಕಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂದು ಅಂದಾಜಿಸಲಾಗಿದೆ. ಉಳಿದ 74 ಮಿಲಿಯನ್ ಮಕ್ಕಳ ಸ್ಥಿತಿ ಗೊತ್ತಿಲ್ಲ.





ಸಿ) ಕರ್ನಾಟಕದಲ್ಲಿ 10 ಮಿಲಿಯನ್ 5–14 ವರ್ಷದ ಮಕ್ಕಳಿದ್ದು ಅವರಲ್ಲಿ 0.85 ಮಿಲಿಯ ಮಕ್ಕಳು ಶಾಲೆಯಿಂದ ಹೊರಗೆ ಇದ್ದಾರೆ.




ಮುಂದುವರಿದ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಸಹ ಬಾಲಕಾರ್ಮಿಕರನ್ನು ನಾವು ಕಾಣಬಹುದು. ಇದು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚಾಗಿದೆ.

ಈ ಕೆಳಗಿನವುಗಳು ಬಾಲಕಾರ್ಮಿಕತೆಯ ಕಾರಣಗಳೆಂದು ಪ್ರಚಲಿತದಲ್ಲಿವೆ. ಆದರೆ ಇವುಗಳನ್ನು ಬಹಳ ಸೂಕ್ಷ್ಮವಾಗಿ ವಿಶ್ಲೇಷಿಸಿದರೆ, ಇವುಗಳಲ್ಲಿ ಹೆಚ್ಚಿನವುಗಳು ಸಬೂಬುಗಳು ಮಾತ್ರ. ಆದರೆ ನಿಜವಾದ ಕಾರಣಗಳು ಅಲ್ಲ.

- ಪೋಷಕರ ಅನಕ್ಷರತೆ.
- ಬಡತನ
- ಶಿಕ್ಷಣ ಸೌಲಭ್ಯಗಳು ಇಲ್ಲದೆ ಇರುವುದು.
- ನಿರುದ್ಯೋಗ
- ಶೋಷಣೆ
- ಮೂಢನಂಬಿಕೆಗಳು
- ಅನಾರೋಗ್ಯ
- ಕಡಿಮೆ ಸಂಬಳ
- ಜೀತ ಪದ್ಧತಿ
- ರಾಜಕೀಯ ಬದ್ಧತೆ ಇಲ್ಲದಿರುವುದು.
- ಅನುಷ್ಠಾನದಲ್ಲಿ ನಿಜವಾದ ಆಸಕ್ತಿ ಇಲ್ಲದಿರುವುದು.

ಈಗಾಗಲೇ ತಿಳಿಸಿದಂತೆ, ಹೆಚ್ಚಿನವು ಮೇಲ್ಮಟ್ಟದ ಕಾರಣಗಳು. ಪೋಷಕರು ಈ ಕಾರಣಗಳಿದ್ದು ಸಹ, ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿದ ಸಾವಿರಾರು ಉದಾಹರಣೆಗಳು ಇವೆ.




ಈಗ ಹಲವಾರು ಸಾಮಾಜಿಕ ಭದ್ರತೆ ಯೋಜನೆಗಳಿದ್ದು, ಪೋಷಕರು ಅವುಗಳ ಲಾಭ ಪಡೆದುಕೊಂಡು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬಹುದು. ಪೋಸಕರಿಗೆ ಮನಸ್ಸಿದ್ದರೆ, ಅವರ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಉತ್ತಮ ಬಾಲ್ಯ ಕೊಡಲು ಹಲವಾರು ಮಾರ್ಗಗಳಿವೆ. ಹಲವಾರು ಸಂದರ್ಭಗಳಲ್ಲಿ ಪೋಷಕರ ಅನಾಸಕ್ತಿಯೇ ಮೂಲಕಾರಣವಾಗಿದೆ. ಅವರು ಶಿಕ್ಷಣ ಅಂದರೆ ಶ್ರೀಮಂತಿಕೆಯ ಸಂಕೇತ, ಬಡವರು ಸಣ್ಣ ಪ್ರಾಯದಿಂದಲೇ ಕೆಲಸ ಮಾಡಲು ಆರಂಭಿಸಬೇಕು ಎಂಬುದಾಗಿ ಯೋಚಿಸುತ್ತಾರೆ. ಅವರಿಗೆ ಈ ಬಗ್ಗೆ ತಿಳುವಳಿಕೆಯ ಅವಶ್ಯಕತೆ ಇದೆ.

### 2.5.2.1 ಬಾಲಕಾರ್ಮಿಕತೆಯ ಪರಿಣಾಮಗಳು

ಬಾಲಕಾರ್ಮಿಕತೆಯ ಪರಿಣಾಮಗಳು ಬಹಳ ಮುಖ್ಯವಾದವು. ಪೋಷಕರು ಬಾಲಕಾರ್ಮಿಕತೆಯನ್ನು ಸರಿಯಾಗಿ ಅಂತರ್ಗತ ಮಾಡಿಕೊಂಡರೆ ಅವರೇ ಖುದ್ದಾಗಿ ತಮ್ಮ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಕಳುಹಿಸುವ ವ್ಯವಸ್ಥೆ ಮಾಡುತ್ತಾರೆ.

#### (ಎ) ಅನಕ್ಷರತೆ

ಬಾಲಕಾರ್ಮಿಕತೆಯಿಂದ ಮಕ್ಕಳು ಅನಕ್ಷರಸ್ಥರಾಗುವರು. ಇದರಿಂದ ಅವರು ಜೀವನವಿಡಿ ಚಿಕ್ಕ ಚಿಕ್ಕ ವಿಚಾರಗಳಿಗೆ ಇತರರನ್ನು ಅವಲಂಬಿಸ ಬೇಕಾಗುವುದು. ಇದು ಅವರ ಅಭಿವೃದ್ಧಿಗೆ ಮಾರಕವಾಗುವುದು.







**(ಬಿ) ಕಡಿಮೆ ಸಂಪಾದನೆ / ಸಂಬಳ**

ಬಾಲಕಾರ್ಮಿಕರು ದೊಡ್ಡವರಾದ ಮೇಲೆ, ಕೌಶಲ್ಯ ರಹಿತ ಕೆಲಸಗಳನ್ನು ಮಾಡಬೇಕಾಗುವುದು. ಇದರಿಂದ ಅವರಿಗೆ ಕಡಿಮೆ ಸಂಬಳ ದೊರಕುವುದು. ಶಿಕ್ಷಣ ಪಡೆದು ಹೆಚ್ಚು ಸಂಪಾದನೆ ಮಾಡಲು ಬಹಳ ಅವಕಾಶಗಳು ಇವೆ.



**(ಸಿ) ಜೀವನವು ಕಷ್ಟಮಯವಾಗಿರುವುದು.** ಇಡೀ ಜೀವಮಾನ ದುಃಖ ಮತ್ತು ನೋವಿನಿಂದ ಕೂಡಿದೆ





**(ಡಿ) ಸರಿಯಾದ ಬೆಳವಣಿಗೆ ಇರುವುದಿಲ್ಲ.**

ಬಾಲಕಾರ್ಮಿಕರು ಚಿಕ್ಕ ವಯಸ್ಸಿನಿಂದಲೇ ಕೆಲಸ ಮಾಡುವುದರಿಂದ ಹಾಗೂ ಅನಾರೋಗ್ಯ ವಾತಾವರಣದಲ್ಲಿ ಕೆಲಸ ಮಾಡುವುದರಿಂದ ಅವರ ಬೆಳವಣಿಗೆ ಸರಿಯಾಗಿ ಆಗುವುದಿಲ್ಲ. ಅವರು ಯೌವ್ವನಾವಸ್ಥೆಯಲ್ಲೇ ಮುದುಕರಂತೆ ಕಾಣುತ್ತಾರೆ.



**(ಈ) ದುರಾಭ್ಯಾಸಗಳಿಗೆ ಬಲಿಯಾಗುವುದು.**

ಬಾಲಕಾರ್ಮಿಕತೆ ಮಕ್ಕಳನ್ನು ದುಶ್ಚಟ ಕಡೆಗೆ ತೆಗೆದುಕೊಂಡು ಹೋಗಬಹುದು. ಅವರು ಕುಡಿತ ಅಥವಾ ಇತರ ದುರಭ್ಯಾಸಗಳಿಗೆ ದಾಸರಾಗಬಹುದು.



**(ಎಫ್) ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಬಹುದು.**


ಬಾಲಕಾರ್ಮಿಕತೆ ಅವರನ್ನು ಸಮಾಜ ವಿರೋಧಿ ಚಟುವಟಿಕೆಯಲ್ಲಿ ತೊಡಗುವಂತೆ ಮಾಡಬಹುದು. ಅವರು ಮಾದಕ ದ್ರವ್ಯಗಳ ಸಾಗಾಟ, ಕಳ್ಳತನ, ದರೋಡೆ, ಸುಲಿಗೆ ಇತ್ಯಾದಿಗಳಲ್ಲಿ ತೊಡಗಬಹುದು.




**(ಜಿ) ಹೆಣ್ಣು ಮಕ್ಕಳು ಬಲಾತ್ಕಾರಕ್ಕೆ ತುತ್ತಾಗಬಹುದು.**




**(ಹೆಚ್) ಬಾಲಕಾರ್ಮಿಕತೆ ಅವರನ್ನು ಕಾಯಿಲೆಗೆ ತುತ್ತಾಗಿಸಬಹುದು**



**(ಐ) ಬಾಲಕಾರ್ಮಿಕತೆ ಮಕ್ಕಳನ್ನು ಹೆಳವರನ್ನಾಗಿಸಬಹುದು (ಅಂಗವಿಕಲರು)**



**(ಜೆ) ತಮ್ಮ ಜೀವನವನ್ನು ಕಳೆದು ಕೊಳ್ಳಬಹುದು**



**(ಕೆ)** ಮುಂದಕ್ಕೆ ಜೀವನದಲ್ಲಿ ಅವರನ್ನು ಸಮಾಜ ಮತ್ತು ಕುಟುಂಬದ ಇತರರು ನಿರಂತರವಾಗಿ ಶೋಷಣೆಗೆ ಒಳಪಡಿಸಬಹುದು – ಕಾರಣ ಅವರ ಅನಕ್ಷರತೆ, ಬಡತನ, ಅಜ್ಞಾನ, ಕೌಶಲ್ಯ ಇಲ್ಲದೆ ಇರುವುದು, ಸರಿಯಾಗಿ ಬೆಳವಣಿಗೆ ಆಗದೆ ಇರುವುದು ಇತ್ಯಾದಿ.

**(ಎಲ್)** ಬಾಲಕಾರ್ಮಿಕತೆಯಿಂದ, ದೊಡ್ಡವರಿಗೆ ಕೆಲಸ ಸಿಗದಾಗುವುದು. ಇದಲ್ಲದೆ ಅವರಿಗೆ ಸಂಬಳ ಕಡಿಮೆ ಆಗುವುದು. ಆದುದರಿಂದ ಬಾಲಕಾರ್ಮಿಕತೆ ದೊಡ್ಡವರ ಕೆಲಸದ ಮೇಲೆ ಸಹ ಪರಿಣಾಮ ಬೀರುವುದು.

**(ಎಂ) ಇತರ ಪರಿಣಾಮಗಳು**

- ಬೇರೆ ಬೇರೆ ರೀತಿಯ ನೋವುಗಳು
- ಒತ್ತಡದಿಂದ ಆಗುವ ಪರಿಣಾಮಗಳು
- ಸಂತಾನ ಹೀನತೆ

### 2.5.3 ವಿಧಾನಗಳು

- ಉಪನ್ಯಾಸ
- ಪ್ರಾತ್ಯಕ್ಷಿಕೆ
- ನಿರ್ದೇಶಿತ ಮಾತುಕತೆ
- ಗುಂಪು ಚರ್ಚೆ



### 2.5.4 ಪರಿಕರಗಳು

- ಕರಿಹಲಗೆ
- ಸೀಮೆಸುಣ್ಣ
- ಚಿತ್ರದ ಕಾರ್ಡುಗಳು
- ಮ್ಯಾನ್ಯುಯೆಲ್‌ನ ಚಿತ್ರಗಳು


### 2.5.5 ಪ್ರಕ್ರಿಯೆ

- ಸಂಪನ್ಮೂಲ ವ್ಯಕ್ತಿಗಳು ವಿಷಯವನ್ನು ಸಣ್ಣ ಉಪನ್ಯಾಸದ ಮೂಲಕ ಮಂಡಿಸುವರು.
- ಸಂಪನ್ಮೂಲ ವ್ಯಕ್ತಿಗಳು ಕೈಪಿಡಿಯಲ್ಲಿ ಕೊಟ್ಟಿರುವ ಗ್ರಾಫಿಕ್ಸ್‌ಗಳನ್ನು ಉಪಯೋಗಿಸಿ, ಬಾಲಕಾರ್ಮಿಕತೆಯ ಅಗಾಧತೆಯ ಪರಿಚಯ ಮಾಡಿಕೊಡುವುದು. ಸಂಪನ್ಮೂಲ ವ್ಯಕ್ತಿಗಳು ಜಿಲ್ಲೆಯ, ಸಾಧ್ಯವಾದರೆ ತಾಲೂಕುಗಳ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ ಉಪಯೋಗಿಸಬೇಕು.
- ಅವರ ಹತ್ತಿರ ತಮ್ಮ ಪ್ರದೇಶದಲ್ಲಿನ ಬಾಲಕಾರ್ಮಿಕತೆಯ ಯೋಜನೆ ಮಾಡಲು ತಿಳಿಸುವುದು. ಅದನ್ನು ಗ್ರಾಫ್‌ನಲ್ಲಿ ಹಾಕಿ ತೋರಿಸಬೇಕು.
- ಕರಿಹಲಗೆಯ ಮೇಲೆ ಒಂದು ಗೆರೆ ಎಳೆದು ಅದನ್ನು 2 ಭಾಗಗಳನ್ನಾಗಿ ವಿಂಗಡಿಸಬೇಕು. ಅದರ ಒಂದು ಭಾಗದಲ್ಲಿ “ನಮ್ಮ ಕನಸಿನ ಶಾಲೆ” ಎಂದು ಬರೆಯಬೇಕು. ಇನ್ನೊಂದು ಭಾಗದಲ್ಲಿ “ನಮ್ಮ ಹಳ್ಳಿಯ ಶಾಲೆ” ಎಂದು ಬರೆಯಬೇಕು. ಸಂಪನ್ಮೂಲ ವ್ಯಕ್ತಿಗಳು ಶಿಬಿರಾರ್ಥಿಗಳ ಹತ್ತಿರ ಅವರ ಕನಸಿನ ಶಾಲೆ ಹೇಗಿರಬೇಕು? ಅದರಲ್ಲಿ ಏನೇನು ಇರಬೇಕು ಎಂಬುದನ್ನು ಕೇಳಿ, ಅವರು ಹೇಳಿದ್ದನ್ನು ಸರಿ ಪಡಿಸಿ, ಕರಿ ಹಲಗೆಯಲ್ಲಿ ಬರೆದಿರುವ “ನಮ್ಮ ಕನಸಿನ ಶಾಲೆ” ಕೆಳಗೆ ಬರೆಯುತ್ತಾ ಹೋಗಬೇಕು.

| ನಮ್ಮ ಕನಸಿನ ಶಾಲೆ | ನಮ್ಮ ಹಳ್ಳಿ ಶಾಲೆ |
|---|---|
| – ಒಳ್ಳೆಯ ಕಟ್ಟಡ | – |
| – ಒಳ್ಳೆಯ ಶೌಚಾಲಯ | – |
| – | – |
| – | – |
| – | – |
| – | – |

- ಚರ್ಚೆಯನ್ನು ಶಿಬಿರಾರ್ಥಿಗಳು “ನಮ್ಮ ಕನಸಿನ ಶಾಲೆಯಲ್ಲಿ” ಹಳ್ಳಿಯ ಎಲ್ಲಾ ಮಕ್ಕಳು ಕಲಿಯುವಂತೆ ಮಾಡಬೇಕು ಎಂದು ಹೇಳುವವರೆಗೆ ಮುಂದುವರೆಸಬೇಕು.
- ನಂತರ ಹಳ್ಳಿಯ ಶಾಲೆಯಲ್ಲಿನ ವ್ಯವಸ್ಥೆಯನ್ನು ಪಟ್ಟಿ ಮಾಡಬೇಕು. ಅದನ್ನು “ನಮ್ಮ ಹಳ್ಳಿಯ ಶಾಲೆ” ಕೆಳಗೆ ಬರೆಯಬೇಕು.





- ಈ ಎರಡು ಪಟ್ಟಿಯಲ್ಲಿ ಬಹಳಷ್ಟು ವ್ಯತ್ಯಾಸ ಕಂಡು ಬರುವುದು. ಸಂಪನ್ಮೂಲ ವ್ಯಕ್ತಿಗಳು ಈ ವ್ಯತ್ಯಾಸ ಏಕೆ ಎಂಬುದನ್ನು ಚರ್ಚಿಸಬೇಕು.
- ನಮ್ಮ ಹಳ್ಳಿಯ ಎಲ್ಲಾ ಮಕ್ಕಳು ಶಾಲೆಗೆ ಹೋಗುತ್ತಿಲ್ಲ ಎಂಬ ವಿಚಾರನ್ನು ತೆಗೆದುಕೊಂಡು ಚರ್ಚೆ ಮುಮದುವರಿಸಬೇಕು.
- ನಮ್ಮ ಹಳ್ಳಿಯ ಎಲ್ಲಾ ಮಕ್ಕಳು ಏಕೆ ಶಾಲೆಗೆ ಹೋಗುತ್ತಿಲ್ಲ? ಅವರೇನು ಮಾಡುತ್ತಿದ್ದಾರೆ? ಅವರೆಲ್ಲಿದ್ದಾರೆ? ಎಂಬ ಪ್ರಶ್ನೆಗಳನ್ನು ಶಿಬಿರಾರ್ಥಿಗಳ ಮುಂದಿಡಬೇಕು. ಇದನ್ನು ಅವರು ಉಪಗುಂಪುಗಳಲ್ಲಿ ಚರ್ಚಿಸಬೇಕು.
- ಉಪಗುಂಪುಗಳು ತಮ್ಮ ಚರ್ಚಾವರದಿಯನ್ನು ದೊಡ್ಡ ಗುಂಪಿನಲ್ಲಿ ಮಂಡಿಸುವ ವ್ಯವಸ್ಥೆ ಮಾಡಬೇಕು.
- ಸಂಪನ್ಮೂಲ ವ್ಯಕ್ತಿಗಳು ಬಾಲಕಾರ್ಮಿಕತೆಯ ಪರಿಣಾಮಗಳಿಗೆ ಸಂಬಂಧಪಟ್ಟ ಚಿತ್ರಣಗಳನ್ನು ಮತ್ತು ಫೋಟೋಗಳನ್ನು ಶಿಬಿರಾರ್ಥಿಗಳ ಮುಂದೆ ಪ್ರದರ್ಶಿಸಬೇಕು. ಅವುಗಳನ್ನು ಒಂದೊಂದಾಗಿ ಪ್ರದರ್ಶಿಸುತ್ತಾ, ಶಿಬಿರಾರ್ಥಿಗಳು ಅವರ ಅನಿಸಿಕೆಗಳನ್ನು ಹೇಳಲು ಪ್ರಚೋದಿಸಬೇಕು.
- ಸಂಪನ್ಮೂಲ ವ್ಯಕ್ತಿಗಳು, ಉದಾಹರಣೆಗಳ ಮೂಲಕ, ಕಾರಣ ಮುಖ್ಯವಲ್ಲ, ಆದರೆ ಪರಿಣಾಮಗಳು ಮುಖ್ಯ ಎಂಬುದನ್ನು ವಿವರಿಸಬೇಕು. ಕಾರಣಗಳಿಗಿಂತ ಪರಿಣಾಮಗಳು ಹೆಚ್ಚು ಹಾನಿಕಾರಕ ಎಂಬುದನ್ನು ವಿವರಿಸಬೇಕು. ಅವುಗಳು ಮಕ್ಕಳ ಜೀವನವನ್ನು ಹಾಳುಮಾಡುತ್ತದೆ ಎಂದು ಮನವರಿಕೆ ಮಾಡಬೇಕು.
- ಸಂಪನ್ಮೂಲ ವ್ಯಕ್ತಿಗಳು ಮಕ್ಕಳು ಎಂದರೆ ಯಾರು? ಬಾಲಕಾರ್ಮಿಕತೆ ಎಂದರೇನು? ಅಪಾಯಕಾರಿ ಬಾಲಕಾರ್ಮಿಕತೆ ಎಂದರೇನು? ಎಂಬುದನ್ನು ಉದಾಹರಣೆಗಳ ಮೂಲಕ ಮತ್ತು ಚಿತ್ರಗಳ ಮೂಲಕ ವಿವರಿಸಬೇಕು.


### 2.5.6 ನಿರೀಕ್ಷಿತ ಫಲಿತಾಂಶಗಳು

- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ಅಗಾಧತೆ ಮತ್ತು ಅದರ ಸಂಪೂರ್ಣ ಮಟ್ಟಗಳನ್ನು ಅರ್ಥ ಮಾಡಿಕೊಳ್ಳುವರು.
- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ಕಾರಣಗಳು ಮತ್ತು ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳುವರು.

### 2.5.7 ಸೂಚನೆಗಳು

- ಸಂಪನ್ಮೂಲ ವ್ಯಕ್ತಿಗಳು ಬಾಲಕಾರ್ಮಿಕತೆಯ ಅಗಾಧತೆಯ ಗ್ರಾಫ್ ತಯಾರಿಸಬೇಕು ಅಥವಾ ಕರ್ನಾಟಕ ಬಾಲಕಾರ್ಮಿಕ ಯೋಜನೆಯು ತಯಾರಿಸಿ ಅದನ್ನು ಸಂಪನ್ಮೂಲ ವ್ಯಕ್ತಿಗಳಿಗೆ ಕಳುಹಿಸಿ ಕೊಡಬೇಕು.
- ಕರ್ನಾಟಕ ಬಾಲಕಾರ್ಮಿಕ ಯೋಜನೆಯು ಬಾಲಕಾರ್ಮಿಕತೆಯ ಕಾರಣಗಳು ಮತ್ತು ಪರಿಣಾಮಗಳ ಚಿತ್ರಗಳನ್ನು ಪೋಸ್ಟರ್ ಗಾತ್ರದಲ್ಲಿ ಮುದ್ರಿಸಿ ಅದನ್ನು ಸಂಪನ್ಮೂಲ ವ್ಯಕ್ತಿಗಳಿಗೆ ಕಳುಹಿಸಿಕೊಡಬೇಕು.





## 2.6 ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯ ವಿಷಯವನ್ನು ಕೈಗೆತ್ತಿಕೊಳ್ಳಬೇಕು ಏಕೆ?

ಸಮಯ: 60 ನಿಮಿಷಗಳು

### 2.6.1 ಉದ್ದೇಶಗಳು

- ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯನ್ನು ಏಕೆ ಕೈಗೆತ್ತಿಕೊಳ್ಳಬೇಕು ಎಂಬ ವಿಷಯವನ್ನು ಮನನ ಮಾಡಿಕೊಳ್ಳುವರು.
- ಯಾವ ರೀತಿಯಲ್ಲಿ ಬಾಲಕಾರ್ಮಿಕತೆ, ಕಾರ್ಮಿಕ ಸಂಘಗಳ ಶಕ್ತಿಯನ್ನು ಕಡಿಮೆ ಮಾಡುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುವರು.

### 2.6.2 ಪಠ್ಯ

ಕಾರ್ಮಿಕ ಸಂಘಟನೆಗಳು, ಬಾಲಕಾರ್ಮಿಕತೆ ಅವರ ಅನುಸಂಧಾನ ಶಕ್ತಿಯನ್ನು ಕಡಿಮೆಗೊಳಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಅವಶ್ಯ. ಬಾಲಕಾರ್ಮಿಕತೆ ಬಹಳ ಕಡಿಮೆ ವೆಚ್ಚದ್ದಾಗಿದೆ. ಇದು ದೊಡ್ಡವರ ಕೆಲಸವನ್ನು ಆಕ್ರಮಿಸಿಕೊಳ್ಳುತ್ತದೆ. ಯಾವುದೇ ಉದ್ಯಮ ಅಥವಾ ಪ್ರದೇಶದಲ್ಲಿ ಬಾಲಕಾರ್ಮಿಕತೆ ಇದ್ದರೆ ಅದು ವೇಗವಾಗಿ ಪಸರಿಸುತ್ತದೆ. ಉದ್ಯಮದ ಸ್ಪರ್ಧೆ ಹೆಚ್ಚು ಹೆಚ್ಚು ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವಂತೆ ಪ್ರಚೋದಿಸುವುದು. ಇವರು ಪ್ರೌಢ ಕಾರ್ಮಿಕರ ಸ್ಥಾನವನ್ನು ಆಕ್ರಮಿಸುತ್ತಾರೆ. ಬಾಲಕಾರ್ಮಿಕತೆಯು ಪ್ರೌಢರ ನಿರುದ್ಯೋಗಕ್ಕೆ ಮತ್ತು ಅರೆ ಉದ್ಯೋಗಕ್ಕೆ ಎಡೆ ಮಾಡಿಕೊಡುತ್ತದೆ. ಹಾಗು ಅವರ ಸಂಬಳ / ಕೂಲಿ ಕಡಿಮೆ ಆಗಲು ಕಾರಣವಾಗುವುದು. ಇಂತಹ ಪರಿಸ್ಥಿತಿಯಲ್ಲಿ ಸಾಂಘಿಕ ಅನುಸಂಧಾನ ಮತ್ತು ಸಾಂಘಿಕ ಪ್ರಕ್ರಿಯೆಗಳು ಕಷ್ಟವಾಗುವುದು. ಎಲ್ಲಿ ಕಾರ್ಮಿಕ ಸಂಘಗಳು ಬಲಹೀನವಾಗಿವೆಯೋ ಮತ್ತು ಕಾರ್ಮಿಕರ ಸಂಚಲನೆ ಪರಿಣಾಮಕಾರಿ ಆಗಿಲ್ಲವೋ, ಅಲ್ಲಿ ಬಾಲಕಾರ್ಮಿಕತೆ ಹೆಚ್ಚಾಗಿ ಇರುವುದು. ಆದುದರಿಂದ ಹೆಚ್ಚಿನ ಬಾಲಕಾರ್ಮಿಕತೆ ಅಸಂಘಟಿತ ಕ್ಷೇತ್ರದಲ್ಲಿದೆ. ಹೆಚ್ಚಿನ ಬಾಲಕಾರ್ಮಿಕರು ಕೂಲಿಯವರ ಮಕ್ಕಳು. ಕಾರ್ಮಿಕ ಸಂಘಟನೆಗಳು ಇದರ ಬಗ್ಗೆ ಆಲೋಚಿಸದೇ ಇದ್ದರೆ ಇನ್ನು ಯಾರು ಅವರ ಬಗ್ಗೆ ಆಲೋಚಿಸುತ್ತಾರೆ? ಆದುದರಿಂದ ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯ ನಿರ್ಮೂಲನ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.

ಕಾರ್ಮಿಕ ಸಂಘಟನೆಗಳು ಬಡತನದ ವಿರುದ್ಧ ಹೋರಾಟ ನಡೆಸುತ್ತಿದ್ದಾವೆ. ಹೋರಾಟ ಅವರ ಬಗ್ಗೆ ಇರಬಹುದು ಅಥವಾ ಅವರ ಕುಟುಂಬದ ಬಗ್ಗೆ ಇರಬಹುದು ಅಥವಾ ಇಡೀ ಸಮಾಜದ ಬಗ್ಗೆ ಇರಬಹುದು. ಕಾರ್ಮಿಕ ಸಂಘಗಳು ಸಾಂಘಿಕ ಅನುಸಂಧಾನದಿಂದ ಅವರ ಜೀವನವನ್ನು ಮತ್ತು ಕೆಲಸ ಮಾಡುವ ಸ್ಥಳವನ್ನು ಉತ್ತಮಪಡಿಸಿಕೊಳ್ಳುತ್ತವೆ. ಹಾಗೆಯೇ ಅವರ ಸಂಬಳ ಇತ್ಯಾದಿ ಸಹ ಜಾಸ್ತಿ ಮಾಡಿಕೊಳ್ಳುತ್ತಾರೆ. ಬಾಲಕಾರ್ಮಿಕತೆ ಈ ಪ್ರಕ್ರಿಯೆಗೆ ತೊಂದರೆ ಕೊಡುವಂತದ್ದು, ಹಾಗೂ ಅಡೆ ತಡೆ ಉಂಟು ಮಾಡುವುದು. ಕಾರ್ಮಿಕ ಸಂಘಟನೆಗಳು ಅಸಂಘಟಿತ ಕ್ಷೇತ್ರಕ್ಕೆ ಪ್ರವೇಶ ಮಾಡಿ ಅಲ್ಲಿ ಕಾರ್ಮಿಕರನ್ನು ಸಂಘಟಿಸುವವರೆಗೆ ಒಗ್ಗಟ್ಟು ಮತ್ತು ಸಾಮಾಜಿಕ ನ್ಯಾಯ ಕಾರ್ಮಿಕ ಸಂಘಟನೆಯ ಮೂಲ ಧ್ಯೇಯಗಳು. ಬಡತನ ಶಾಂತಿ ಮತ್ತು ಅಭ್ಯುದಯಕ್ಕೆ ಅಡ್ಡ ಬರುತ್ತದೆ. ಎಲ್ಲಿ ಸಾಮಾಜಿಕ ನ್ಯಾಯವು ನಿರಾಕರಿಸಲ್ಪಡುತ್ತದೆಯೋ, ಅಲ್ಲಿ ಕಾರ್ಮಿಕ ಸಂಘಟನೆಗಳು ಪ್ರವೇಶ ಮಾಡಿ, ಸಂಬಂಧಪಟ್ಟವರಿಗೆ ನ್ಯಾಯ ದೊರಕಿಸಿಕೊಡಬೇಕು. ಕಾರ್ಮಿಕ ಸಂಘಗಳು ಕಾರ್ಮಿಕ ಹಕ್ಕುಗಳು, ಮಾನವ ಹಕ್ಕುಗಳು ಇತ್ಯಾದಿಯ ರಕ್ಷಕರು. ಬಾಲಕಾರ್ಮಿಕತೆ ಮಾನವ ಹಕ್ಕುಗಳ ಉಲ್ಲಂಘನೆ ಹಾಗೂ ಮಾನವ ಹಕ್ಕುಗಳ ವಿಷಯ. ಆದುದರಿಂದ ಕಾರ್ಮಿಕ ಸಂಘಗಳಿಗೆ ಬಾಲಕಾರ್ಮಿಕತೆಯ ನಿರ್ಮೂಲನದ ನೇರ ಜವಾಬ್ದಾರಿ ಇದೆ.



### 2.6.3 ವಿಧಾನಗಳು

- ಉಪನ್ಯಾಸ
- ನಿರ್ದೇಶಿತ ಗುಂಪು ಚರ್ಚೆ
- ಮೆದುಳು ಮಂಥನ
- ವರದಿ ಓದುವುದು

### 2.6.4 ಪರಿಕರಗಳು

- ಕರಿಹಲಗೆ
- ಸೀಮೆಸುಣ್ಣ


### 2.6.5 ಪ್ರಕ್ರಿಯೆ

ತರಬೇತಿ ವಿಷಯವನ್ನು ಒಂದು ಸಣ್ಣ ಉಪನ್ಯಾಸದ ಮೂಲಕ ಪರಿಚಯಿಸಿರಿ. ಶಿಬಿರಾರ್ಥಿಗಳನ್ನು 4–5 ಗುಂಪುಗಳನ್ನಾಗಿ ವಿಂಗಡಿಸಿರಿ. ಶಿಬಿರಾರ್ಥಿಗಳ ಹತ್ತಿರ ಗುಂಪುಗಳಲ್ಲಿ ಬಾಲಕಾರ್ಮಿಕತೆಯು ಯಾವ ರೀತಿಯಲ್ಲಿ ಕಾರ್ಮಿಕ ಒಕ್ಕೂಟವನ್ನು ಭಾಧಿಸುತ್ತದೆ ಹಾಗೂ ಅದನ್ನು ಬಲಹೀನಗೊಳಿಸುತ್ತದೆ ಎಂಬ ವಿಷಯದ ಮೇಲೆ ಮೆದುಳು ಮಂಥನ ಮಾಡಲು ತಿಳಿಸಿರಿ. ಅದೇ ರೀತಿಯಲ್ಲಿ "ಕಾರ್ಮಿಕ ಸಂಘಗಳು ಬಾಲಕಾರ್ಮಿಕತೆಯ ನಿವಾರಣೆಯನ್ನು ತಮ್ಮ ಜೀವನದ ಗುರಿ ಆಗಿ ತೆಗೆದುಕೊಳ್ಳಬೇಕು" ಎಂಬ ವಿಚಾರದ ಬಗ್ಗೆ ಸಹ ಮೆದುಳು ಮಂಥನ ಮಾಡಲಿ. ಗುಂಪು ಚರ್ಚೆಯ ನಂತರ ಗುಂಪುಗಳ ವರದಿಯನ್ನು ದೊಡ್ಡ ಗುಂಪುನಲ್ಲಿ ಮಂಡಿಸಲು ತಿಳಿಸಿರಿ. ಇನ್ನೊಮ್ಮೆ ಚರ್ಚಿಸಲು ಅವಕಾಶ ಮಾಡಿಕೊಡಿರಿ. ತರಬೇತುದಾರರು ಮುಖ್ಯ ವಿಷಯವನ್ನು ಪಟ್ಟಿ ಮಾಡಿಕೊಳ್ಳುವರು. ಕೊನೆಯಲ್ಲಿ ಇಡೀ ಅವಧಿಯಲ್ಲಿ ಮೂಡಿ ಬಂದ ವಿಷಯಗಳನ್ನು ಪುನರ್‌ಮನನ ಮಾಡಲು ಸಹಾಯ ಮಾಡಬೇಕು. ಈ ಪ್ರಕ್ರಿಯೆಯಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಬಹುದು. ಇದರಿಂದ ಕಾರ್ಮಿಕ ಸಂಘಟನೆಯ ಬಗ್ಗೆ ಅವರ ಆಸಕ್ತಿ ಮತ್ತು ಅರಿವಿನ ಮಟ್ಟ ಗೊತ್ತಾಗುವುದು.

### 2.6.6 ನಿರೀಕ್ಷಿತ ಫಲಿತಾಂಶ

- ಶಿಬಿರಾರ್ಥಿಗಳು ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯ ನಿರ್ಮೂಲನೆಯನ್ನು ಏಕೆ ಕೈಗೆತ್ತಿಕೊಳ್ಳಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವರು
- ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳಿಗೆ, ಬಾಲಕಾರ್ಮಿಕತೆ ಯಾವ ರೀತಿಯಲ್ಲಿ ಕಾರ್ಮಿಕ ಸಂಘಟನೆಗೆ ತೊಂದರೆ ಕೊಡಬಹುದು ಎಂಬ ವಿಚಾರ ಅರ್ಥವಾಗುವುದು.





## 2.7 ಕಾರ್ಮಿಕ ಸಂಘಟನೆಗಳು ಏನು ಮಾಡಬಹುದು? ಅವರಿಗಿರುವ ತುಲನಾತ್ಮಕ ಅನುಕೂಲತೆಗಳು

ಸಮಯ: 60 ನಿಮಿಷಗಳು

### 2.7.1 ಉದ್ದೇಶಗಳು

- ಬಾಲಕಾರ್ಮಿಕತೆಯನ್ನು ನಿವಾರಿಸಲು ಕಾರ್ಮಿಕ ಸಂಘಟನೆಗಳಿಗಿರುವ ತುಲನಾತ್ಮಕ ಅನುಕೂಲತೆಗಳನ್ನು ಅರ್ಥಮಾಡಿಕೊಳ್ಳುವರು
- ಬಾಲಕಾರ್ಮಿಕತೆ ನಿರ್ಮೂಲನಕ್ಕೆ ಕಾರ್ಮಿಕ ಸಂಘಟನೆಗಳು ಏನು ಮಾಡಬಹುದು ಎಂಬುದನ್ನು ಅರ್ಥಮಾಡಿಕೊಳ್ಳುವರು

### 2.7.2 ಪಠ್ಯ

ಕಾರ್ಮಿಕ ಸಂಘಟನೆಗಳು ಕಾರ್ಮಿಕರ / ಕೆಲಸಗಾರರ ಪ್ರತಿನಿಧಿಗಳು. ಸಮುದಾಯದಲ್ಲಿ ಹೆಚ್ಚಿನವರು ಕೆಲಸಗಾರರ ವರ್ಗಕ್ಕೆ ಸೇರಿದವರು. ಅವರಿಗೆ ಸ್ಥಳೀಯ ಮಟ್ಟದಲ್ಲಿ, ವಲಯ ಮಟ್ಟದಲ್ಲಿ, ರಾಷ್ಟ್ರ ಮಟ್ಟದಲ್ಲಿ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅತ್ಯಂತ ದೊಡ್ಡ ಜಾಲ ಇರುವುದು. ಕಾರ್ಮಿಕ ಸಂಘಟನೆಗೆ ಅವರ ಸದಸ್ಯರ ಮೇಲೆ ಒಳ್ಳೆಯ ಪ್ರಭಾವ ಇರುತ್ತದೆ. ಅವರು ತಮ್ಮ ಸದಸ್ಯರನ್ನು ಅವರ ಮಕ್ಕಳನ್ನು ಕೆಲಸಕ್ಕೆ ಕಳುಹಿಸದೆ ಇರುವಂತೆ ಮಾಡಲು ಸಾಧ್ಯ. ಅವರು ಹೆಚ್ಚು ಹೆಚ್ಚು ಕಾರ್ಮಿಕರನ್ನು ಸಂಘಟಿಸಬಹುದು ಮತ್ತು ಸಾಂಘಿಕ ಅನುಸಂಧಾನದಿಂದ ಹೆಚ್ಚು ಸಂಬಳ, ಒಳ್ಳೆಯ ಕೆಲಸದ ಪರಿಸ್ಥಿತಿ, ಒಳ್ಳೆಯ ಜೀವನ ಇತ್ಯಾದಿ ಪಡೆಯಲು ಸಾಧ್ಯ. ಸಾಂಘಿಕ ಅನುಸಂಧಾನದ ಮೂಲಕ ಮಾಲೀಕರ ಮೇಲೆ ಪ್ರಭಾವ ತರಬಹುದು. ಅವರು ಸರಕಾರದ ಮೇಲೆ ಒತ್ತಡ ತಂದು ಉತ್ತಮ ಕಾನೂನುಗಳನ್ನು ಹಾಗೂ ನಿಯಮಗಳನ್ನು ಜಾರಿಗೆ ತರಬಹುದು. ಹಾಗೂ ಕಾರ್ಯಕ್ರಮಗಳನ್ನು ಉತ್ತಮವಾಗಿ ಅನುಷ್ಠಾನ ಮಾಡುವಂತೆ ನೋಡಿಕೊಳ್ಳಬಹುದು.

ಕಾರ್ಮಿಕ ಒಕ್ಕೂಟಗಳು ಕೆಲಸದ ಸ್ಥಳದಲ್ಲಿಯೇ ಇರುವವುಗಳು ಆಗಿರುವುದರಿಂದ, ಬಾಲಕಾರ್ಮಿಕರನ್ನು ಗುರುತಿಸುವಲ್ಲಿ ಅವರಿಗೆ ಹೆಚ್ಚು ಅನುಕೂಲ ಇದೆ. ಅವರಿಗೆ ಇದರ ದುಷ್ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದು ಸುಲಭ ಮತ್ತು ಇದರ ನಿವಾರಣೆಯನ್ನು ಕಾರ್ಮಿಕರಿಗೆ ಶಿಕ್ಷಣ ಕೊಡುವುದರ ಮೂಲಕ ಸಾಧಿಸಬಹುದು.

- ಸತ್ಯಾಂಶಗಳನ್ನು ಕಂಡು ಹಿಡಿಯಲು ಶೋಧನೆ ನಡೆಸುವುದು ಮತ್ತು ಮಾಹಿತಿಯ ದಾಖಲೀಕರಣ
- ಅರಿವನ್ನು ಹೆಚ್ಚಿಸುವು. ಒಟ್ಟುಗೂಡಿಸುವುದು ಮತ್ತು ಆಂದೋಲನ ನಡೆಸುವುದು
- ಕಾನೂನುಗಳ ಅಭಿವೃದ್ಧಿ ಮತ್ತು ಸರಿಯಾದ ಅನುಷ್ಠಾನ
- ಅಂತಾರಾಷ್ಟ್ರೀಯ ಮಾನಗಳನ್ನು ಉಪಯೋಗಿಸುವುದು. ಸರಕಾರ ಈ ಅಂತಾರಾಷ್ಟ್ರೀಯ ಮಾನಗಳನ್ನು ಒಪ್ಪುವಂತೆ ಒತ್ತಾಯ ತರುವುದು ಇತ್ಯಾದಿ
- ಶಿಕ್ಷಣದ ಮೂಲಕ ಬಾಲಕಾರ್ಮಿಕತೆಯ ವಿರುದ್ಧ ಕ್ರಮ
- ಬಾಲಕಾರ್ಮಿಕರ ಪುನರ್ವಸತಿ
- ಬಾಲಕಾರ್ಮಿಕರ ಕುಟುಂಬಗಳಿಗೆ ಆದಾಯ ಹೆಚ್ಚಿಸುವ ಕಾರ್ಯಕ್ರಮಗಳು
- ಸರಕಾರದ ಕಾರ್ಯಕ್ರಮಗಳ ಅನುಷ್ಠಾನ ಮಾಡುವುದು
- ಮಾಲೀಕರ ಜೊತೆಯಲ್ಲಿ ಸಾಂಘಿಕ ಅನುಸಂಧಾನ ನಡೆಸುವುದು
- ವೃತ್ತಿ ತರಬೇತುದಾರರಾಗಿ ಭಾಗವಹಿಸುವುದು.
- ಬಾಲಕಾರ್ಮಿಕತೆ ಕಾರ್ಮಿಕ ಸಂಘಟನೆಯ ಚಟುವಟಿಕೆಗೆ ಒಂದು ಮುಖ್ಯ ವಿಷಯವಾಗಿದ್ದು, ಬಾಲಕಾರ್ಮಿಕತೆ ನಿರ್ಮೂಲನೆ ರಾಷ್ಟ್ರ ಮಟ್ಟದಲ್ಲಿ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಟ್ಟಿಯಾದ ಕಾರ್ಮಿಕ ಸಂಘಟನೆಯ ಚಲನೆ ಬೇಕು ಎಂದು ಘೋಷಿಸುವುದು.
- ಎಲ್ಲಾ ರೀತಿಯ ಬಾಲಕಾರ್ಮಿಕತೆ ನಿರ್ಮೂಲನೆ ಕಾರ್ಮಿಕ ಸಂಘಟನೆ ಗುರಿ ಎಂದು ಘೋಷಿಸುವುದು.
- ಕಾರ್ಮಿಕ ಸಂಘಟನೆಯು ಕಾರ್ಮಿಕ ನೀತಿ ನಿಯಮಗಳನ್ನು ಒಪ್ಪಬೇಕು.



### 2.7.3 ವಿಧಾನಗಳು

- ಉಪನ್ಯಾಸ
- ನಿರ್ದೇಶಿತ ಗುಂಪು ಚರ್ಚೆ
- ವರದಿ ಓದುವುದು

### 2.7.4 ಪರಿಕರಗಳು

- ಕರಿಹಲಗೆ
- ಸೀಮೆಸುಣ್ಣ


### 2.7.5 ವಿಧಾನಗಳು

ಅವಧಿಯ ವಿಷಯವನ್ನು ಒಂದು ಸಣ್ಣ ಉಪನ್ಯಾಸದ ಮೂಲಕ ಮಂಡಿಸಿರಿ. ಶಿಬಿರಾರ್ಥಿಗಳನ್ನು 4–5 ಗುಂಪುಗಳನ್ನಾಗಿ ವಿಂಗಡಿಸಿರಿ. ಈ ಗುಂಪುಗಳಲ್ಲಿ ಕಾರ್ಮಿಕ ಸಂಘಗಳ ಶಕ್ತಿ ಮತ್ತು ಬಲಹೀನತೆಯ ಬಗ್ಗೆ ಚರ್ಚಿಸಿರಿ ಹಾಗೂ ಬಾಲಕಾರ್ಮಿಕತೆಯ ನಿರ್ಮೂಲನೆಯಲ್ಲಿ ಅವರಿಗಿರುವ ತುಲನಾತ್ಮಕ ಅನುಕೂಲತೆಗಳು ಮತ್ತು ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯ ನಿವಾರಣೆಗೆ ಏನು ಮಾಡಬಹುದು ಎಂಬ ವಿಚಾರದ ಬಗ್ಗೆ ಸಮಾಲೋಚಿಸಿರಿ.
ಗುಂಪು ಚರ್ಚೆಯ ವರದಿಯಲ್ಲಿ ದೊಡ್ಡ ಗುಂಪಿನಲ್ಲಿ ಮಂಡಿಸಲು ಸೂಚಿಸಿ. ವರದಿ ಮಂಡನೆ ಆದ ನಂತರ ಅದನ್ನು ಚರ್ಚಿಸಿರಿ.

### 2.7.6 ನಿರೀಕ್ಷಿತ ಫಲಿತಾಂಶಗಳು

- ಶಿಬಿರಾರ್ಥಿಗಳು ಕಾರ್ಮಿಕ ಸಂಘಟನೆಗಳಿಗೆ ಬಾಲಕಾರ್ಮಿಕತೆಯ ನಿವಾರಣೆಯಲ್ಲಿರುವ ತುಲನಾತ್ಮಕ ಅನುಕೂಲತೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ.
- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ನಿವಾರಣೆಗೆ ಕಾರ್ಮಿಕ ಸಂಘಟನೆಗಳು ಏನು ಮಾಡಬಹುದು ಎಂಬುದನ್ನು ಅರ್ಥಮಾಡಿಕೊಳ್ಳುವರು.





## 2.8 ಕಾರ್ಮಿಕ ಸಂಘಟನೆಗಳಿಗಾಗಿ ಕ್ರಿಯಾ ಯೋಜನೆ ತಯಾರಿ

ಸಮಯ: 60 ನಿಮಿಷಗಳು

### 2.8.1 ಉದ್ದೇಶಗಳು

- ಅನುಷ್ಠಾನ ಮಾಡಲು ಸಾಧ್ಯವಿರುವ ಕ್ರಿಯಾಯೋಜನೆಯನ್ನು ತಯಾರಿಸುವುದು.
- ಪ್ರತಿ ಸದಸ್ಯರಿಗೆ ಅನುಕೂಲವಾಗುವಂತೆ ಕ್ರಿಯಾಯೋಜನೆ ತಯಾರಿಸುವುದು.

### 2.8.2 ಪಠ್ಯ

ಹಿಂದಿನ ತರಬೇತಿ ಚಟುವಟಿಕೆಗಳಲ್ಲಿ ಶಿಬಿರಾರ್ಥಿಗಳು ಬಾಲಕಾರ್ಮಿಕರು, ಬಾಲಕಾರ್ಮಿಕತೆ, ಅವುಗಳ ಕಾರಣಗಳು, ಪರಿಣಾಮಗಳು, ಬಾಲಕಾರ್ಮಿಕತೆ ಯಾವ ರೀತಿಯಲ್ಲಿ ಕೆಲಸಗಾರರನ್ನು ಭಾಧಿಸುತ್ತದೆ ಹಾಗೂ ಕಾರ್ಮಿಕ ಸಂಘಗಳಿಗೆ ಇರುವ ತುಲನಾತ್ಮಕ ಅನುಕೂಲತೆಗಳು ಮುಂತಾದವುಗಳ ಬಗ್ಗೆ ತಿಳಿದುಕೊಂಡಿರುವರು. ಅವುಗಳ ಹಿನ್ನಲೆಯಲ್ಲಿ ಸದಸ್ಯರು ಚರ್ಚಿಸಿ ಪುನರ್ಮನನ ಮಾಡಬಹುದು. ಮೆದುಳು ಮಂಥನ ಮಾಡಿ ಚರ್ಚಿಸಿ ನಂತರ ವೈಯಕ್ತಿಕ ಹಾಗೂ ಗುಂಪಿನ ಕ್ರಿಯಾ ಯೋಜನೆಗಳನ್ನು ತಯಾರಿಸಬಹುದು.


### 2.8.3 ವಿಧಾನಗಳು

- ಉಪನ್ಯಾಸ
- ಗುಂಪು ಚರ್ಚೆ
- ಕ್ರಿಯಾಯೋಜನೆ ತಯಾರಿ

### 2.8.4 ಪರಿಕರಗಳು

- ಪೇಪರ್
- ಪೆನ್ನು
- ಕ್ರಿಯಾಯೋಜನೆ ನಮೂನೆ
- ಕರಿಹಲಗೆ
- ಸೀಮೆಸುಣ್ಣ





### 2.8.5 ಪ್ರಕ್ರಿಯೆ

ತರಬೇತುದಾರರು ಹಿಂದಿನ ಅವಧಿಗಳ ವಿಷಯಗಳನ್ನು ಪುನರ್ಮನನ ಮಾಡಬೇಕು. ತರಬೇತುದಾರರು ಕೆಲವು ಮುಖ್ಯ ಪ್ರಶ್ನೆಗಳನ್ನು ಗುಂಪಿನ ಮುಂದಿಡಬಹುದು. ಈ ಪ್ರಶ್ನೆಗಳು ಹಿಂದಿನ ಅವಧಿಗಳಲ್ಲಿ ಬಂದ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತವೆ. ಶಿಬಿರಾರ್ಥಿಗಳನ್ನು 4–5 ಸಣ್ಣ ಸಣ್ಣ ಗುಂಪುಗಳನ್ನಾಗಿ ವಿಂಗಡಿಸಿರಿ. ಗುಂಪಿನಲ್ಲಿ ಅವರು ವೈಯಕ್ತಿಕವಾಗಿ ಹಾಗೂ ಗುಂಪಾಗಿ ಯಾವ ರೀತಿಯಲ್ಲಿ ಬಾಲಕಾರ್ಮಿಕತೆಯನ್ನು ನಿವಾರಿಸಬಹುದು ಎಂಬುದರ ಬಗ್ಗೆ ಚರ್ಚಿಸಲು ತಿಳಿಸಿರಿ. ಪ್ರತಿಯೊಂದು ಗುಂಪು ಹೀಗೆ ಚರ್ಚಿಸಿದ ನಂತರ ಬಾಲಕಾರ್ಮಿಕತೆಯ ನಿವಾರಣೆಗೆ ವೈಯಕ್ತಿಕವಾಗಿ ಹಾಗೂ ಸಾಂಘಿಕವಾಗಿ ಕ್ರಿಯಾಯೋಜನೆಯನ್ನು ತಯಾರಿಸಿ ಇಟ್ಟುಕೊಳ್ಳಬೇಕು. ಕ್ರಿಯಾಯೋಜನೆಯು ನಿರ್ದಿಷ್ಟವಾಗಿರಬೇಕು. ಅದರಲ್ಲಿ ಸಮಯ / ಅವಧಿ, ಸಂಪನ್ಮೂಲ, ಉದ್ದೇಶಗಳು, ಜವಾಬ್ದಾರಿ, ವಿಧಾನಗಳು ಸ್ಪಷ್ಟವಾಗಿರಬೇಕು. ಕ್ರಿಯಾಯೋಜನೆಯು ಅನುಷ್ಠಾನ ಮಾಡಲು ಸಾಧ್ಯವಾಗಬೇಕು. ಸಾಮಾನ್ಯ ವಿಚಾರಗಳನ್ನು ಸೇರಿಸಬಾರದು. ಉದಾ: "ನಾವು ಬಾಲಕಾರ್ಮಿಕತೆಗಾಗಿ ಕೆಲಸ ಮಾಡುತ್ತೇವೆ" "ನಾವು ಕಾನೂನು ಬದಲಿಸಲು ಲಾಬಿ ಮಾಡುತ್ತೇವೆ" ಇತ್ಯಾದಿ.

ಚಟುವಟಿಕೆಗಳು ಹೀಗಿರಬೇಕು

ರಾಮೇನ ಹಳ್ಳಿಯಲ್ಲಿರುವ 200 ಇಟ್ಟಿಗೆ ಗೂಡಿನಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಪ್ರೌಢಕಾರ್ಮಿಕರನ್ನು ಹಾಗೂ ಮಾಲೀಕರನ್ನು ಬಾಲಕಾರ್ಮಿಕತೆ ನಿರ್ಮೂಲನೆ ಬಗ್ಗೆ ಪ್ರಚೋದಿಸುತ್ತೇವೆ.

ಕನಕಾಪುರದ 50 ಜನ ಪೋಷಕರೊಂದಿಗೆ ಸಮಾಲೋಚನೆ ಮಾಡಿ, ಅವರ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಕಳುಹಿಸುವಂತೆ ಮಾಡುವುದು.

### 2.8.6 ನಿರೀಕ್ಷಿತ ಫಲಿತಾಂಶಗಳು

- ನಿರ್ದಿಷ್ಟವಾದ ಹಾಗೂ ಅನುಷ್ಠಾನ ಮಾಡಲು ಸಾಧ್ಯವಾಗುವ ಕ್ರಿಯಾಯೋಜನೆಯನ್ನು ವೈಯಕ್ತಿಕವಾಗಿ ಹಾಗೂ ಸಾಂಘಿಕವಾಗಿ ತಯಾರಿಸುವರು.
- ನಿರ್ದಿಷ್ಟವಾದ ಪರಿವೀಕ್ಷಣಾ ವ್ಯವಸ್ಥೆಯನ್ನು ರೂಪಿಸಿಕೊಳ್ಳುವರು ಹಾಗೂ ಪ್ರಗತಿಯನ್ನು ನಿಗದಿತವಾಗಿ ಸಂಗ್ರಹಿಸಿ ಅದನ್ನು ಕ್ರೋಡಿಕರಿಸುವರು.



## 2.9 ಸಾಂಘಿಕ ಅನುಸಂಧಾನ ಮತ್ತು ಬಾಲಕಾರ್ಮಿಕತೆ

ಸಮಯ: 60 ನಿಮಿಷಗಳು

### 2.9.1 ಉದ್ದೇಶಗಳು

- ಸಾಂಘಿಕ ಅನುಸಂಧಾನದ ಮೂಲಕ ಬಾಲಕಾರ್ಮಿಕತೆಯ ನಿವಾರಣೆಗೆ ಒಂದು ಕಾರ್ಯ ಯೋಜನೆಯನ್ನು ರೂಪಿಸಿಕೊಳ್ಳುವುದು.
- ಯಾವ ಯಾವ ವಲಯಗಳಲ್ಲಿ ಸಾಂಘಿಕ ಅನುಸಂಧಾನ ಸಾಧ್ಯ ಎಂಬುದನ್ನು ಗುರುತಿಸುವುದು.

### 2.9.2 ಪಠ್ಯ

ಸಾಂಘಿಕ ಅನುಸಂಧಾನವು ಸಂಘಟಿತ ಕ್ಷೇತ್ರದಲ್ಲಿ ಸುಲಭವಾಗಿ ಸಾಧ್ಯವಾಗುವುದು. ಕಾರಣ ಅಲ್ಲಿ ಮಾಲೀಕರನ್ನು ಗುರುತಿಸುವುದು ಸುಲಭ. ಆದರೆ ಅಸಂಘಟಿತ ಕ್ಷೇತ್ರಗಳಲ್ಲಿ ಸಾಂಘಿಕ ಅನುಸಂಧಾನದ ಮೂಲಕ ಬಾಲಕಾರ್ಮಿಕತೆಯನ್ನು ನಿವಾರಣೆ ಮಾಡಿದ ಅಸಂಖ್ಯಾತ ಉದಾಹರಣೆಗಳು ಇವೆ. ಉದಾ: ಬೀಡಿ ಉದ್ಯಮ, ಅಗರಬತ್ತಿ ತಯಾರಿಕೆ, ರತ್ನಗಂಬಳಿ, ಬೆಂಕಿಕಡ್ಡಿ ತಯಾರಿಕೆ ಇತ್ಯಾದಿ.

### 2.9.3 ವಿಧಾನಗಳು

- ಗುಂಪು ಚರ್ಚೆ

### 2.9.4 ಪರಿಕರಗಳು

- ಕರಿಹಲಗೆ
- ಸೀಮೆಸುಣ್ಣ



## 2.9.5 ಪ್ರಕ್ರಿಯೆ

ತರಬೇತುದಾರರು ಮೊದಲಿನ ತರಬೇತಿ ಅವಧಿಯ ವಿಷಯಗಳನ್ನು ಪುನರ್‌ಮನನ ಮಾಡಬೇಕು. ಇದರಿಂದ ವಿಚಾರಗಳು ಶಿಬಿರಾರ್ಥಿಗಳ ಮನಸ್ಸಿನಲ್ಲಿ ಆಳವಾಗಿ ಬೇರೂರಲು ಸಹಾಯವಾಗುವುದು.


ಶಿಬಿರಾರ್ಥಿಗಳನ್ನು ಅವರ ಸಂಖ್ಯೆಗೆ ಅನುಗುಣವಾಗಿ ಸಣ್ಣ ಸಣ್ಣ ಗುಂಪುಗಳನ್ನಾಗಿ ವಿಂಗಡಿಸಬೇಕು. ಪ್ರತಿ ಗುಂಪಿನಲ್ಲಿ 5 ರಿಂದ 7 ಸದಸ್ಯರು ಇರಬಹುದು.

ಗುಂಪಿನಲ್ಲಿ ಅವರು, ಅವರ ಉದ್ಯಮದಲ್ಲಿನ ಅವರ ಪೂರೈಕೆಯ ಜಾಲದಲ್ಲಿ, ಉಪಗುತ್ತಿಗೆದಾರರೂ ಸೇರಿಕೊಂಡು ಎಲ್ಲೆಲ್ಲಿ ಬಾಲಕಾರ್ಮಿಕತೆ ಇದೆ, ಅದನ್ನು ಸಾಂಘಿಕಅನುಸಂಧಾನದಿಂದ ನಿವಾರಿಸಬಹುದೇ ಎಂಬುದರ ಬಗ್ಗೆ ಚರ್ಚಿಸಬಹುದು. ಅವರು ಎಷ್ಟರ ಮಟ್ಟಿಗೆ ಅಂದರೆ ಎಷ್ಟು ಬಾಲಕಾರ್ಮಿಕತೆಯನ್ನು ನಿವಾರಿಸಬಹುದು. ಮಾಲೀಕರ ಜೊತೆಯಲ್ಲಿ ಮಾಡುವ ಸಾಂಘಿಕ ಅನುಸಂಧಾನದಿಂದ  ಎಷ್ಟು ಪ್ರಯೋಜನವಾಗುವುದು. ಅವರ ಉದ್ಯಮಗಳಿಗೋಸ್ಕರವಾಗಿ ಈ ಬಗ್ಗೆ ಒಂದು ಸ್ವಯಂ ಘೋಷಿತ ನೀತಿ ನಿಯಮಾವಳಿಗಳ ಕೋಡ್ ಅನ್ನು ರೂಪಿಸಬಹುದೇ? ಅದನ್ನು ಅವರ ಮಾಲೀಕರು ಒಪ್ಪಿಕೊಳ್ಳುವಂತೆ ಮಾಡಬಹುದೇ?... ಇತ್ಯಾದಿಗಳ ಬಗ್ಗೆ ಚರ್ಚಿಸುವುದು

## 2.9.6 ನಿರೀಕ್ಷಿತ ಫಲಿತಾಂಶಗಳು

- ಸಾಂಘಿಕ ಅನುಸಂಧಾನಕ್ಕಾಗಿ ನಿರ್ದಿಷ್ಟ ಕಾರ್ಯಯೋಜನೆಯನ್ನು ತಯಾರಿಸಲು ಶಕ್ತರಾಗುವರು.





## 2.10 ಮೌಲ್ಯಮಾಪನ

ಸಮಯ: 30 ನಿಮಿಷಗಳು

### 2.10.1 ಮೌಲ್ಯಮಾಪನ

- ಸಂಪನ್ಮೂಲ ವ್ಯಕ್ತಿಗಳು ಶಿಬಿರಾರ್ಥಿಗಳಿಗೆ ಮುದ್ರಿತ ಮೌಲ್ಯಮಾಪನ ನಮೂನೆಗಳನ್ನು ವಿತರಿಸಬೇಕು.
- ಶಿಬಿರಾರ್ಥಿಗಳಿಗೆ ಮೌಲ್ಯಮಾಪನ ಮಾಡಲು 5–10 ನಿಮಿಷಗಳ ಕಾಲಾವಧಿಯನ್ನು ನೀಡಬೇಕು.
- ತರಬೇತಿಯ ಕೊನೆಯಲ್ಲಿ ಔಪಚಾರಿಕ ಅಥವಾ ಅನೌಪಚಾರಿಕ ಪದ್ಧತಿಯನ್ನು ಉಪಯೋಗಿಸಿ ಮೌಲ್ಯಮಾಪನ ಮಾಡಿರಿ.


    (ಎ) 2–3 ಶಿಬಿರಾರ್ಥಿಗಳ ಹತ್ತಿರ ತರಬೇತಿಯ ಬಗ್ಗೆ ಅನುಭವ ಹಂಚಿಕೊಳ್ಳಲು ತಿಳಿಸಬಹುದು ಅಥವಾ ಕೆಲವು ಪ್ರಶ್ನೆಗಳನ್ನು ಇಡೀ ಗುಂಪಿಗೆ ಹಾಕಿ ಅವರ ಅನುಭವವನ್ನು ಪಡೆದಿಕೊಳ್ಳಬಹುದು.

    (ಬಿ) ಮೊದಲೇ ತಯಾರಿಸಿದ ಪ್ರಶ್ನಾವಳಿಯ ಹಾಳೆಗಳನ್ನು ಕೊಟ್ಟು ಅವರ ಪ್ರತಿಕ್ರಿಯೆಗಳನ್ನು ಪಡೆಯಬಹುದು.

### 2.10.2 ಮುಕ್ತಾಯ

ಮುಕ್ತಾಯ ಕಾರ್ಯಕ್ರಮದ ನಂತರ ಶಿಬಿರಾರ್ಥಿಗಳು ಸಾಮಾಜಿಕ ಒಪ್ಪಂದ ಪತ್ರಕ್ಕೆ ಸಹಿ ಹಾಕಬೇಕು. ಒಪ್ಪಂದ ಪತ್ರದ ನಮೂನೆಯನ್ನು ಮುಂದಿನ ಪುಟಗಳಲ್ಲಿ ನೀಡಲಾಗಿದೆ. ಕೊನೆಯಲ್ಲಿ ಒಪ್ಪಂದವನ್ನು ಓದಿ ಎಲ್ಲರೂ ಶಪಥ ತೆಗೆದುಕೊಳ್ಳಬೇಕು.





## 2.10.2.1 ಮೌಲ್ಯಮಾಪನ ನಮೂನೆ


| |
|---|
| ಶಿಬಿರಾರ್ಥಿಗಳ ಹೆಸರು |
| ಹುದ್ದೆ ಮತ್ತು ವಿಳಾಸ |

ತರಬೇತಿ ಮೌಲ್ಯಮಾಪನ–ದಯವಿಟ್ಟು ನಿಮಗೆ ಸರಿ ಕಾಣಿಸಿದ ಅಂಶಗಳನ್ನು ಸೂಚಿಸಿರಿ: 4=ಅತೀ ಉನ್ನತ, 3=ಉನ್ನತ, 2=ತೃಪ್ತಿಕರ, 1=ಸಾಮಾನ್ಯ

**1. ಕಾರ್ಯಾಗಾರದ ಆಡಳಿತ ಮತ್ತು ವ್ಯವಸ್ಥೆ**

| ಸಂಖ್ಯೆ | ವಿವರ | 4 | 3 | 2 | 1 |
|---|---|---|---|---|---|
| 1. | ಕಾರ್ಯಾಗಾರವು ತನ್ನ ಉದ್ದೇಶವನ್ನು ಈಡೇರಿಸಿದೆಯೇ? | | | | |
| 2. | ಕಾರ್ಯಾಗಾರದ ನಿರ್ದೇಶಕರ ಪಾತ್ರ | | | | |
| 3. | ನಿಮಗೆ ನಿಮ್ಮ ಕೆಲಸದಲ್ಲಿ ಇದು ಯಾವ ರೀತಿಯಲ್ಲಿ ಉಪಯೋಗಕ್ಕೆ ಬರುವುದು | | | | |
| 4. | ನೀವು ಮುಂದೆ ಕೈಗೆತ್ತಿಕೊಳ್ಳಬಹುದಾದ ಕೆಲಸಗಳಿಗೆ ಯಾವ ರೀತಿಯಲ್ಲಿ ಸಹಾಯವಾಗುವುದು | | | | |
| 5. | ಕಾರ್ಯಾಗಾರದ ವಿಧಾನ ಸಮರ್ಪಕವಾಗಿದೆಯೇ? | | | | |
| 6. | ಇತರ ಶಿಬಿರಾರ್ಥಿಗಳೊಂದಿಗಿನ ನಿಮ್ಮ ಚರ್ಚೆಯಿಂದ ಲಾಭವಾಗಿದೆಯೇ? | | | | |
| 7. | ಕಾರ್ಯಾಗಾರದ ಪರಿಕರಗಳು ಕಾರ್ಯಾಗಾರಕ್ಕೆ ಸಮರ್ಪಕವಾಗಿದೆಯೇ? | | | | |
| 8. | ಉದ್ದೇಶಗಳಿಗೆ ಅನುಗುಣವಾಗಿ ವಿಷಯಗಳನ್ನು ಅಳವಡಿಸಲಾಗಿದೆಯೇ? | | | | |






**2. ನಿಮ್ಮ ವಿವರವಾದ ಅನಿಸಿಕೆಗಳನ್ನು ಸೂಚಿಸಿರಿ.**

| ಯೋಚನೆ ಮಾಡಬೇಕಾದ ವಿಷಯಗಳು | ಸಲಹೆಗಳು ಮತ್ತು ಸೂಚನೆಗಳು |
|---|---|
| ಮೂಲಭೂತ ಸೌಕರ್ಯಗಳು, ಕ್ಯಾಂಪಸ್, ಸೌಲಭ್ಯಗಳು, ವಸತಿಗೃಹ, ಊಟದ ವ್ಯವಸ್ಥೆ ಇತ್ಯಾದಿ | |
| ಕಾರ್ಯಾಗಾರದ ಸೌಲಭ್ಯಗಳು, ಗ್ರಂಥಭಂಡಾರ, ಕಂಪ್ಯೂಟರ್ ಕೇಂದ್ರ, ತರಗತಿ ಕೊಠಡಿ, ದೃಶ್ಯ – ಶ್ರವಣ ಸಾಮಗ್ರಿಗಳು, ಕಾರ್ಯಾಗಾರದ ಪತ್ರಗಳು | |
| ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳು, ನಿರ್ದೇಶಕರು, ಗುಂಪು ಚರ್ಚೆ, ಸೆಮಿನಾರ್ ಇತ್ಯಾದಿಗಳು | |
| ಇತರ ಶಿಬಿರಾರ್ಥಿಗಳೊಂದಿಗಿನ ಚರ್ಚೆ, ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚೆ, ಆಡಳಿತ ಮತ್ತು ಗ್ರಂಥ ಭಂಡಾರ ಸಿಬ್ಬಂದಿಗಳೊಂದಿಗಿನ ಚರ್ಚೆಗೆ ಅವಕಾಶಗಳು | |

**3. ನಿಮಗೆ ಯಾವ ಮೂರು ಚಟುವಟಿಕೆಗಳು ಹೆಚ್ಚು ಉಪಕಾರಿಯಾದವು**

| ಕ್ರ.ಸಂ | ತರಬೇತಿ ಚಟುವಟಿಕೆಯ ಶೀರ್ಷಿಕೆ | ಷರಾ |
|---|---|---|
| 1. | | |
| 2. | | |
| 3. | | |





### 2.10.2.2 ಸಾಮಾಜಿಕ ಒಪ್ಪಂದ

ಈ ಕೆಳಗೆ ಸಹಿ ಮಾಡಿದ, ಬಾಲಕಾರ್ಮಿಕ ಪದ್ದತಿ ನಿವಾರಣೆಯ ಬಗ್ಗೆ ____________________ ರಲ್ಲಿ ____________________ ದಿನಾಂಕದಂದು ನಡೆದ ತರಬೇತಿಯ ಶಿಬಿರಾರ್ಥಿಯಾದ ನಾನು, ನಮ್ಮ ಸಮಾಜದೊಂದಿಗೆ ಹಾಗೂ ರಾಷ್ಟ್ರದೊಂದಿಗೆ ಈ ಕೆಳಗಿನ ಷರತ್ತುಗಳ ಮೇಲೆ ಒಂದು ಸಾಮಾಜಿಕ ಒಪ್ಪಂದ ಮಾಡಿಕೊಂಡಿರುತ್ತೇನೆ.

- ನನ್ನ ಪರಿಸರದಲ್ಲಿ ಬಾಲಕಾರ್ಮಿಕತೆ ಸಂಪೂರ್ಣವಾಗಿ ನಿವಾರಣೆ ಆಗುವ ತನಕ ನಾನು ಬಾಲಕಾರ್ಮಿಕತೆಯ ನಿವಾರಣೆಯ ಬಗ್ಗೆ ನಿರಂತರವಾಗಿ ಕೆಲಸ ಮಾಡುತ್ತೇನೆ.
- ನಾನು ನನ್ನ ಪ್ರದೇಶದಲ್ಲಿನ ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸಿ ಬಾಲಕಾರ್ಮಿಕತೆ ಪುನಃ ಹುಟ್ಟಿಕೊಳ್ಳದಂತೆ ನೋಡಿಕೊಳ್ಳುತ್ತೇನೆ.
- ಯಾವುದೇ ರೂಪದ ಬಾಲಕಾರ್ಮಿಕತೆಯನ್ನು ನಾನು ನಿಷೇಧಿಸುತ್ತೇನೆ
- ಸರಕಾರ, ಸ್ಥಳೀಯ ಸಂಸ್ಥೆಗಳು, ಹಾಗೂ ಸರಕಾರೇತರ ಸಂಸ್ಥೆಗಳು ಈ ಬಗ್ಗೆ ಹಮ್ಮಿಕೊಂಡ ಚಟುವಟಿಕೆಗಳಿಗೆ ಸಹಕಾರ ಕೊಡುತ್ತೇನೆ.

ಈ ಸಾಮಾಜಿಕ ಒಪ್ಪಂದವನ್ನು ದಿನಾಂಕ ______________________________ ರಂದು ಶ್ರೀ ______________________ ಅವರ ಸಮಕ್ಷಮ ಸಹಿ ಮಾಡಿರುತ್ತೇನೆ.

ತರಬೇತುದಾರರ ಸಹಿ
(ಸಮುದಾಯ ಮತ್ತು
ರಾಷ್ಟ್ರದ ಪರವಾಗಿ)


ಶಿಬಿರಾರ್ಥಿಗಳ ಸಹಿ
ದಿನಾಂಕ
ವಿಳಾಸ:____________________
____________________
____________________
____________________





# ಭಾಗ – 3





## 3.1 ಬಾಲಕಾರ್ಮಿಕತೆಯ ಕಾರಣಗಳು

**3.1.1 ಬೇಡಿಕೆಯ ಕಾರಣಗಳು:** ಬೇಡಿಕೆಯ ಕಾರಣಗಳು ಮಾಲಕರಿಗೆ ಸಂಬಂಧಪಟ್ಟಿದ್ದು, ಅವರು ದೊಡ್ಡವರನ್ನು ಬಿಟ್ಟು ಮಕ್ಕಳನ್ನು ಕೆಲಸಕ್ಕೆ ತೊಡಗಿಸಿಕೊಳ್ಳುವುದಕ್ಕೆ ಇರುವ ಬೇಡಿಕೆಯ ಕಾರಣಗಳು.

3.1.1.1 ಮಾಲಕರಲ್ಲಿರುವ ಆಸೆಬುರುಕತನ: ಮಕ್ಕಳನ್ನು ಹೆಚ್ಚು ಹೊತ್ತು ಯಾವುದೇ ಬಿಡುವು ಕೊಡದೆ ದುಡಿಸಿಕೊಳ್ಳಬಹುದೆಂಬ ಆಸೆ ಹಾಗೂ ಮಕ್ಕಳು ಯಾವುದೇ ಸಂಘಟನೆ ಆಗುವುದಿಲ್ಲ ಮತ್ತು ಅವರು ಕೆಲಸಗಳನ್ನು ಚುರುಕಾಗಿ ಮಾಡುತ್ತಾರೆ ಎಂಬ ನಂಬಿಕೆ. ಬಾಲಕಾರ್ಮಿಕರು ಟೀ ಕುಡಿಯಲು ಅಥವಾ ಬೀಡಿ ಸೇದಲು ಸಮಯವನ್ನು ವ್ಯಯ ಮಾಡುವುದಿಲ್ಲ. ಅವರು ನಿರಂತರವಾಗಿ ಕೆಲಸ ಮಾಡುತ್ತಾರೆ. ಅದರಿಂದ ನಾವು ಹೆಚ್ಚು ಸಂಪಾದಿಸಬಹುದು ಎಂಬ ದುರಾಸೆ.

ಪೂರೈಕೆ ಅಂಶಗಳಷ್ಟೇ ಮುಖ್ಯವಾದ ಅಥವಾ ಸುಸಂಬದ್ಧವಾದ ಬಾಲಕಾರ್ಮಿಕತೆಗೆ ಇರುವ ಬೇಡಿಕೆ ಅಂಶಗಳನ್ನು ನಾವು ಹೆಚ್ಚಾಗಿ ಮರೆತುಬಿಡುತ್ತೇವೆ ಅಥವಾ ಗಮನಿಸದೇ ಇರುತ್ತೇವೆ. ಮಕ್ಕಳು ಏಕೆ ಬೇಡಿಕೆಯಲ್ಲಿದ್ದಾರೆ ಎಂಬುದು ಅರ್ಥಮಾಡಿಕೊಳ್ಳಬೇಕಾದ ನಿರ್ಣಾಯಕ ಕಾರಣವಾಗಿದೆ. "ಚುರುಕಿನ ಬೆರಳುಗಳು" ಮತ್ತು "ಕಡಿಮೆ ಉತ್ಪಾದನಾ ವೆಚ್ಚ" ಈ ವಾದಗಳು ಸಾಮಾನ್ಯವಾಗಿ ಬಾಲಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳಲು ಇರುವ ಮುಂದುವರಿದಿರುವ ವಿವರಣೆಗಳು. ಆದರೆ ಅಂತರರಾಷ್ಟ್ರೀಯಕಾರ್ಮಿಕ ಸಂಸ್ಥೆ ನಡೆಸಿದ ಕ್ಷೇತ್ರ ಸಂಶೋಧನೆಯು, "ಚುರುಕಿನ ಬೆರಳುಗಳ" ವಾದವನ್ನು ಸಂಪೂರ್ಣವಾಗಿ ತಪ್ಪುದಾರಿಗೆಳೆಯುವ ವಾದವೆಂದು ತಿಳಿಸಿದೆ.

ಮಾಲೀಕರು ಈ ಕೆಳಗಿನ ಕಾರಣಗಳಿಗಾಗಿ ಬಾಲಕಾರ್ಮಿಕತೆಗೆ ಆದ್ಯತೆ ನೀಡುತ್ತಾರೆ.

ಮಕ್ಕಳು ಹೆಚ್ಚು ವಿನೀತರಾಗಿರುತ್ತಾರೆ ಮತ್ತು ಕಡಿಮೆ ತೊಂದರೆ ನೀಡುವವರಾಗಿರುತ್ತಾರೆ.

ಅವರು ತಮ್ಮ ಹಕ್ಕುಗಳ ಬಗ್ಗೆ ತೀರಾ ಕಡಿಮೆ ಅರಿವು ಇರುವವರಾಗಿರುತ್ತಾರೆ.

ಅವರು ಮಾಡಿದ್ದನ್ನೇ ಮಾಡುವ, ಏಕರೀತಿಯ ಕೆಲಸವನ್ನು ಸುಲಭವಾಗಿ ಒಪ್ಪಿಕೊಂಡು ಮಾಡುತ್ತಾರೆ.

ಅವರು ಹೆಚ್ಚು ನಂಬಿಕೆ ಅರ್ಹರಾಗಿರುತ್ತಾರೆ ಮತ್ತು ಮುಗ್ಧರಾಗಿರುತ್ತಾರಾದ ಕಾರಣ ಕಳ್ಳತನ ಮಾಡುವ ಸಂಭವ ಕಡಿಮೆ ಇರುತ್ತದೆ.

ಅವರು ಕಾರ್ಮಿಕ ಸಂಘಗಳನ್ನು ರಚಿಸುವ ಕಾರ್ಯಕ್ಕೆ ಕೈ ಹಾಕುವುದಿಲ್ಲ.


ಅವರ ದುಡಿಮೆಯ ವೆಚ್ಚ ಕಡಿಮೆ ಅನ್ನುವುದರ ಜೊತೆಗೆ ಕೆಲಸಕ್ಕೆ ಗೈರುಹಾಜರಾಗುವ ಸಂಭವವೂ ಕಡಿಮೆ

**3.1.1.2 ಕಡಿಮೆ ಸಂಬಳ:** ಮಕ್ಕಳು ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಾರೆ. ಕಡಿಮೆ ಉತ್ಪಾದನೆ ಇರುವ ಕೆಲಸಗಳಲ್ಲಿ ಮಕ್ಕಳನ್ನು ಉಪಯೋಗಿಸುತ್ತಾರೆ.

**3.1.1.3 ನಂಬಿಕೆಗಳು:** ಕೆಲವು ಕೆಲಸಗಳನ್ನು ಮಾಡಲು ಮಕ್ಕಳ ಸಣ್ಣ ಸಣ್ಣ ಬೆರಳುಗಳಿಗೆ ಮಾತ್ರ ಸಾಧ್ಯ ಎಂಬ ನಂಬಿಕೆ. ಉದಾ: ಜಮಖಾನ ತಯಾರಿ ಮತ್ತು ರೇಷ್ಮೆ ಉದ್ದಿಮೆಯಲ್ಲಿ ಹೆಚ್ಚಾಗಿ ಮಕ್ಕಳನ್ನೇ ತೊಡಗಿಸಿಕೊಳ್ಳುತ್ತಾರೆ. ಸಣ್ಣ ಹೆಣ್ಣು ಮಕ್ಕಳು ಮಾತ್ರ (ಅವರು ದೊಡ್ಡವರಾಗುವುದಕ್ಕಿಂತ ಮೊದಲು) ಹತ್ತಿಯನ್ನು ಕೀಳಲು ಸಾಧ್ಯ ಎಂಬ ನಂಬಿಕೆ.

**3.1.1.4 ಕಡಿಮೆ ವೆಚ್ಚ:** ಕಡಿಮೆ ವೆಚ್ಚದ ಹಾಗೂ ಕಡಿಮೆ ಉತ್ಪಾದನೆಯ ತಾಂತ್ರಿಕ ಪ್ರಕ್ರಿಯೆಗಳಲ್ಲಿ ಮಕ್ಕಳನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಾರೆ. ಉದಾ: ರೇಷ್ಮೆ ನೂಲು ನೇಯುವುದು.





**3.1.1.5 ಬಾಲಕಾರ್ಮಿಕ ಕಾನೂನುಗಳು ಸರಿಯಾಗಿ ಅನುಷ್ಠಾನವಾಗದೆ ಇರುವುದು:** ಬಾಲಕಾರ್ಮಿಕ ಕಾನೂನನ್ನು ಸರಿಯಾಗಿ ಅನುಷ್ಠಾನ ಮಾಡದೆ ಇರುವುದರಿಂದ ಬಾಲಕಾರ್ಮಿಕರನ್ನು ತೊಡಗಿಸಿಕೊಳ್ಳುವಿಕೆ ದಿನೇ ದಿನೇ ಹೆಚ್ಚಾಗುತ್ತಿದೆ. ಒಂದು ಕೇಸನ್ನು ಸರಿಯಾಗಿ ಅನುಷ್ಠಾನ ಮಾಡದಿದ್ದರೆ ಇದು ಅಸಂಖ್ಯಾತ ಮಾಲಕರಿಗೆ ಮಕ್ಕಳನ್ನು ಕೆಲಸದಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುತ್ತದೆ.

**3.1.2 ಪೂರೈಕೆಯ ಕಾರಣಗಳು:** ಕುಟುಂಬಗಳು ತಮ್ಮ ಮಕ್ಕಳನ್ನು ಬಾಲಕಾರ್ಮಿಕತೆಗೆ ತಳ್ಳುವಂತೆ ಮಾಡುವ ಶಕ್ತಿಗಳನ್ನು ಪೂರೈಕೆಯ ಕಾರಣಗಳು ಎಂದು ವರ್ಗೀಕರಿಸಲಾಗುತ್ತದೆ.

ತಂದೆ–ತಾಯಿಗಳು ತಮ್ಮ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವಂತೆ ಒತ್ತಾಯಪಡಿಸುತ್ತಾರೆ. ಕಾರಣ ಮಾಲಕರು ಮಕ್ಕಳಿಗೆ ಆಹಾರ, ವಸತಿ ಇತ್ಯಾದಿಗಳನ್ನು ನೀಡಿ ಕಾಪಾಡುತ್ತಿದ್ದಾರೆ ಎನ್ನುವಂಥ ಸಾಮಾನ್ಯವಾಗಿ ಮಂಡಿಸಬಹುದಾದ ವಿವರಣೆಗಳು, ಮಾಲಕರಿಗೆ ಇದು ಅನುಕೂಲಕರವಾದ ವಾದವಾಗಿದೆ. ಆದರೆ ನಿಜವಾದ ಕಾರಣಗಳು ಸಂಪೂರ್ಣವಾಗಿ ಬೇರೆಯೇ ಆಗಿವೆ.

**3.1.2.1 ಬಡತನವೇ ಕಾರಣವೆಂಬ ವಾದ:** ಬಾಲಕಾರ್ಮಿಕತೆಯು ಬಹು ಜಟಿಲವಾದ ವಿಷಯವಾಗಿದ್ದು, ಸಮಾಜದ ಆರ್ಥಿಕ ಹಾಗೂ ಸಾಂಸ್ಕೃತಿಕ ವೈಲಕ್ಷಣಗಳಲ್ಲಿ ಇದು ಆಳವಾಗಿ ಬೇರೂರಿದೆ. ಬಾಲಕಾರ್ಮಿಕತೆಗೆ ಬಡತನವೇ ಮುಖ್ಯ ಕಾರಣವೆಂದು ನಂಬಿದ್ದಾಗ್ಯೂ, ಬಡತನವೇ ಅವಶ್ಯವಾಗಿ ಬಾಲಕಾರ್ಮಿಕತೆಯನ್ನುಂಟು ಮಾಡುತ್ತದೆಯೆಂದು ಹೇಳಲಾಗುವುದಿಲ್ಲ. ಒಂದು ದೇಶದ ಅತೀ ದಾರಿದ್ರ್ಯವಿರುವ ಪ್ರದೇಶದಲ್ಲಿ ಬಾಲಕಾರ್ಮಿಕತೆ ಅತ್ಯಧಿಕವಾಗಿದ್ದರೆ, ಅದೇ ದೇಶದ ಅಷ್ಟೇ ದಾರಿದ್ರ್ಯವಿರುವ ಇನ್ನೊಂದು ಭಾಗದಲ್ಲಿ ಅದು ಅತ್ಯಧಿಕ ಪ್ರಮಾಣದಲ್ಲಿಲ್ಲದೆ ಇರಬಹುದು. ಈ ರೀತಿಯ ವಿಷಯಕ್ಕೆ ಕೇರಳ ರಾಜ್ಯವು ಒಂದು ಅತ್ಯುತ್ತಮ ಉದಾಹರಣೆಯಾಗಿದೆ.

ಸಾಕ್ಷರತೆ ಮತ್ತು ಶಿಕ್ಷಣವು ಬಾಲಕಾರ್ಮಿಕತೆಯ ವ್ಯಾಪ್ತಿಯೊಂದಿಗೆ ನೇರ ಸಂಪರ್ಕವನ್ನು ಹೊಂದಿದೆಯೆಂಬುದೂ ಕೂಡ ಕೇರಳ ರಾಜ್ಯದ ನಿದರ್ಶನದಿಂದ ಸೂಚಿತವಾಗುತ್ತದೆ. ಕೇವಲ 34,800 ಬಾಲಕಾರ್ಮಿಕರು ಇಡೀ ಕೇರಳ ರಾಜ್ಯದಲ್ಲಿದ್ದಾರೆ. ಇದು ಅದರ ಒಟ್ಟು ಮಕ್ಕಳ ಸಂಖ್ಯೆಯಲ್ಲಿ ಶೇಕಡಾ ಒಂದಕ್ಕಿಂತ ಕಡಿಮೆ ಇದೆ. ಅದೇ ಆಂಧ್ರಪ್ರದೇಶ ರಾಜ್ಯದಲ್ಲಿ ಶೇಕಡಾ 7 ರಷ್ಟು ಮಕ್ಕಳು ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ.


ಬಾಲಕಾರ್ಮಿಕತೆ, ಶಾಲೆಗೆ ಹೋಗದಿರುವ ಮಕ್ಕಳ ಪ್ರಮಾಣ ಮತ್ತು ಕಡುಬಡತನದ ರೇಖೆಗಿಂತ ಕೆಳಗೆ ಜೀವಿಸುವ ವ್ಯಕ್ತಿಗಳ ಶೇಕಡಾವಾರು – ಇವುಗಳಲ್ಲಿರುವ ನಿರ್ಣಾಯಕ ಸ್ಥಿತಿಯ ಪರಸ್ಪರ ಸಂಬಂಧದತ್ತ ಗಮನಹರಿಸುವುದು ಯೋಗ್ಯವಾಗಿದೆ. ಬಾಲಕಾರ್ಮಿಕರ ಪಟ್ಟಿಯಲ್ಲಿ ಆಂಧ್ರಪ್ರದೇಶ ಮೊದಲನೆಯ ಸ್ಥಾನದಲ್ಲಿದ್ದರೆ, ಬಿಹಾರ ಮತ್ತು ಒರಿಸ್ಸಾ ರಾಜ್ಯಗಳು ಬಡತನದ ಪಟ್ಟಿಯಲ್ಲಿ ಮೇಲಿನ ಸ್ಥಾನಗಳಲ್ಲಿವೆ. ಆದುದರಿಂದ ಬಾಲಕಾರ್ಮಿಕತೆಗೆ ಕಾರಣ ಬಡತನಮಾತ್ರವಲ್ಲದೆ ಇತರ ಕಾರಣಗಳೂ ಇವೆ ಎಂಬುದು ನಿಶ್ಚಯ.

ಬಾಲಕಾರ್ಮಿಕತೆಯ ಹೆಚ್ಚಿನ ವ್ಯಾಪ್ತಿಗೆ ಕಾರಣೀಭೂತವಾಗಿರುವ ಇತರ ಪ್ರಮುಖ ಕಾರಣಗಳನ್ನು ಈ ಕೆಳಗೆ ನೀಡಲಾಗಿದೆ.

**3.1.2.2 ಪ್ರತ್ಯಕ್ಷಾನುಭವ, ನಂಬಿಕೆ ಮತ್ತು ಮನೋಭಾವನೆಗಳು:**

ತಂದೆ – ತಾಯಿಗಳ ಪ್ರತ್ಯಕ್ಷಾನುಭವ ಮತ್ತು ಸಾಮಾಜಿಕ ಮನೋಭಾವನೆಗಳು ಬಾಲಕಾರ್ಮಿಕ ಸಮಸ್ಯೆಯ ಮೇಲೆ ಗಾಢವಾದ ಪರಿಣಾಮ ಬೀರಿದೆ. ಅದರ ಫಲಿತಾಂಶಗಳ ಬಗ್ಗೆ ಸಾಕಷ್ಟು ಅರಿವಿಲ್ಲದ ಕಾರಣದಿಂದ ಬಾಲಕಾರ್ಮಿಕತೆಯು ಸ್ಥಳೀಯ ಸಂಪ್ರದಾಯ ಮತ್ತು ಪದ್ಧತಿಗಳಲ್ಲಿ ಎಷ್ಟು ಆಳವಾಗಿ ಬೇರುಬಿಟ್ಟಿದೆಯೆಂದರೆ, ತಂದೆ ತಾಯಿಗಳು ಮತ್ತು ಮಕ್ಕಳಿಬ್ಬರೂ ಇದು ಕಾನೂನುಬಾಹಿರವೆಂದಾಗಲೀ ಅಥವಾ ಮಕ್ಕಳ ಹಿತಾಸಕ್ತಿಗೆ ಮಾರಕವಾಗಿದೆಯೆಂದಾಗಲೀ ಅರಿತುಕೊಳ್ಳಲಾಗದಷ್ಟು **ಮಟ್ಟಿಗೆ.**





### 3.1.2.3 ತಂದೆ–ತಾಯಿಗಳ ಅನಕ್ಷರತೆ

ತಂದೆ–ತಾಯಿಗಳ ಸಾಕ್ಷರತೆ ಬಾಲಕಾರ್ಮಿಕತೆಗೆ ನೆರವಾಗುವ ಅತೀ ಮುಖ್ಯವಾದ ಅಂಶವಾಗಿದೆ. ತಂದೆ–ತಾಯಿಗಳ ಸಾಕ್ಷರತೆ, ಬಹುಮುಖ್ಯವಾಗಿ ತಾಯಿಯ ಸಾಕ್ಷರತಾ ಮಟ್ಟವು ಆ ಕುಟುಂಬದ ಬಾಲಕಾರ್ಮಿಕತೆಯ ವ್ಯಾಪ್ತಿಯೊಂದಿಗೆ ನೇರ ಸಂಪರ್ಕವನ್ನು ಹೊಂದಿದೆ. ಆ ಕುಟುಂಬ ಎಷ್ಟು ಬಡತನವನ್ನು ಅನುಭವಿಸುತ್ತಿರಲಿ, ತಂದೆ–ತಾಯಿಗಳು ಕಲಿತವರಾಗಿದ್ದರೆ, ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿಯೇ ತೀರುತ್ತಾರೆ ಮತ್ತು ತಮ್ಮ ಮಗು ಪ್ರಬುದ್ಧ ಜೀವನ ನಡೆಸುವಂತಾಗಲು ಬೇಕಾದ ಕನಿಷ್ಠ ಶಿಕ್ಷಣವನ್ನು ನೀಡಿಯೇ ತೀರುತ್ತಾರೆ ಇದಕ್ಕೆ ವ್ಯತಿರಿಕ್ತವಾಗಿ ಅನಕ್ಷರಸ್ಥ ತಂದೆ–ತಾಯಿಗಳ ವಿಷಯದಲ್ಲಾಗುವುದೂ ಸತ್ಯವೇ ಆಗಿರುತ್ತದೆ. ಆರ್ಥಿಕ ಸ್ಥಾನಮಾನ ಮತ್ತು ಆದಾಯಗಳಿಕೆಯ ಮಟ್ಟ ಏನಾದರಾಗಲೀ, ಅನೇಕ ಅನಕ್ಷರಸ್ಥ ತಂದೆ–ತಾಯಿಗಳು. ಸಮುದಾಯದಲ್ಲಿ ಚಾಲ್ತಿಯಲ್ಲಿರುವ ಸಂಪ್ರದಾಯ ಮತ್ತು ರೂಢಿಗನುಗುಣವಾಗಿ ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸಲು ಬಯಸುತ್ತಾರೆ.

### 3.1.2.4 ಕುಟುಂಬದ ಕಸುಬು ಮತ್ತು ತುಂಡು ದರ ಮಜೂರಿಗಳು:

ಕೆಲವು ಪ್ರದೇಶಗಳಲ್ಲಿ ಮತ್ತು ಕೆಲವು ಕುಟುಂಬಗಳಲ್ಲಿ ಮಕ್ಕಳು ತಂದೆ–ತಾಯಿಗಳು ತುಳಿದ ಹಾದಿಯನ್ನೇ ಕ್ರಮಿಸುವ ಸಂಪ್ರದಾಯ ಬೆಳೆದು ಬಂದಿರುತ್ತದೆ. ತಂದೆ–ತಾಯಿಗಳು ಅಪಾಯಕರವಾದ ಕಸುಬುಗಳಲ್ಲಿದ್ದರೆ ಮಕ್ಕಳು ಸಹ ಅದೇ ಕಸುಬುಗಳಲ್ಲಿ ನಿರತರಾಗುವ ಸಂಭವವೇ ಹೆಚ್ಚು. ಕುಟುಂಬದ ಕಸುಬು ಮಕ್ಕಳನ್ನು ಸಹ ಕುಟುಂಬದ ಕಲೆ ಮತ್ತು ಕರಕುಶಲ ಕಲೆಗೆ ಎಳೆದು ತರುತ್ತಾರೆ. ಮಕ್ಕಳಿಗೆ ಬಾಲ್ಯದಿಂದಲೇ ಅವರ ಕುಟುಂಬದ ಕರಕುಶಲತೆಯ ಬಗ್ಗೆ ತರಬೇತಿ ನೀಡಿದಲ್ಲಿ ಅವರು ಹರೆಯಕ್ಕೆ ಬರುವ ವೇಳೆಗೆ ತಮ್ಮ ಸ್ವಂತ ಕಾಲ ಮೇಲೆ ನಿಲ್ಲಬಲ್ಲವರಗುತ್ತಾರೆಂಬ ನಂಬಿಕೆ ಕೆಲವು ಕುಟುಂಬಗಳಲ್ಲಿವೆ, ತುಂಡು ದರದ ಆಧಾರದ ಮೇಲೆ ಸಂದಾಯಮಾಡುವಂತಹ ಕೈಗಾರಿಕೆ ಮತ್ತು ಕಸುಬುಗಳಲ್ಲಿ, ಕುಟುಂಬದ ಇತರ ಸದಸ್ಯರಿಗೆ ಸಹಾಯಮಾಡುವಂತೆ ಪದೇ ಪದೇ ಮಕ್ಕಳಿಗೆ ಹೇಳುತ್ತಾರೆ.

### 3.1.2.5 ಸಾಂಸ್ಕೃತಿಕ ಪದ್ಧತಿಗಳು:

ಭಾರತೀಯ ಸಮಾಜದ ಹಿಂದೂ ಜಾತಿಗೆ ಸೇರಿದವರಲ್ಲಿ ಕೆಲವು ಆಳವಾಗಿ ಬೇರೂರಿದಂಥ ಸಾಮಾಜಿಕ ಪದ್ಧತಿಗಳು ಬೆಳೆದುಕೊಂಡು ಬಂದಿವೆ. ಭಾರತದಲ್ಲಿ ಸಾಮಾಜಿಕ ರಚನೆ ಹೇಗೆ ರೂಪುಗೊಂಡಿದೆಯೆಂದರೆ ಕೆಲವು ಉದ್ಯೋಗಗಳು ವಂಶಪಾರಂಪರೆಯಾಗಿ ಮತ್ತು ಅದೇ ನಿರ್ದಿಷ್ಟ ಕಾತಿಗೆ ಸೇರಿದವರು ಮಾತ್ರ ಸೀಮಿತವಾಗಿರುತ್ತದೆ. ಇದಕ್ಕೆ ಉದಾಹರಣೆಯಾಗಿ ಆಂಧ್ರಪ್ರದೇಶ ರಾಜ್ಯವನ್ನೇ ತೆಗೆದುಕೊಳ್ಳೋಣ. ಒಂದು ಬ್ರಾಹ್ಮಣ ಕುಟುಂಬ, ತಾವು ಎಷ್ಟೇ ಬಡವರಾಗಿರಲಿ, ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸಲು ಇಷ್ಟಪಡುವುದಿಲ್ಲ. ಆದರೆ ಹಿಂದುಳಿದ ವರ್ಗಕ್ಕೆ ಸೇರಿದ ಒಮದು ಕುಟುಂಬವು ಕುಟುಂಬದ ಜೀವನಾಧಾರಕ್ಕಾಗಿ ಮಕ್ಕಳ ಗಳಿಕೆ ಸಂಪೂರ್ಣವಾಗಿ ಬೇಕೇಬೇಕು ಅಥವಾ ಯವುದೇ ಅವಶ್ಯಕತೆ ಇಲ್ಲದಿದ್ದಾಗ್ಯೂ, ವಾಡಿಕೆಯಂತೆ ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸುತ್ತಾರೆ. ಮಕ್ಕಳನ್ನು ಉದ್ಯೋಗಕ್ಕೆ ಕಳುಹಿಸುವುದೂ ಕೂಡ ಜಾತಿಯೊಂದಿಗೆ ನಿಕಟವಾಗಿಯೇ ಜತೆಗೂಡುತ್ತದೆ ಮತ್ತು ಬಹುಪಾಲು ಬಾಲಕಾರ್ಮಿಕರು ಹಿಂದುಳಿದ ವರ್ಗಗಳಿಂದ, ಅನುಸೂಚಿತ ಜಾತಿ ಮತ್ತು ಪಂಗಡಗಳಿಂದ ಬಂದಿರುವುದು ಅನುಭವದಿಂದ ತಿಳಿದುಬರುತ್ತದೆ. ಇಮತಹ ಕುಟುಂಬಗಳಲ್ಲಿ ಬಾಲಕಾರ್ಮಿಕತೆ ಇರುವುದಕ್ಕೆ ಕಾರಣ ಬಡತನವೆಂದು ಯಾರಾದರು ತಿಳಿದುಕೊಂಡರೆ, ಇದು ಸನ್ನಿವೇಶಗಳಡಿ ಇದೆಯೋ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿರುವುದೆನ್ನುವುದು ಅರಿವಿಗೆ ಬರುತ್ತದೆ.



### 3.1.2.6 ಲಿಂಗ ಪಕ್ಷಪಾತ:

ಭಾರತೀಯ ಸಮಾಜದಲ್ಲಿ ಲಿಂಗ ತಾರತಮ್ಯ ಅತೀ ಹೆಚ್ಚು ಚಾಲ್ತಿಯಲ್ಲಿದೆ. ಕೆಲವು ಕುಟುಂಬಗಳಲ್ಲಿ ಹೆಣ್ಣು ಮಗುವಿಗೆ ಅತೀ ಕಡಿಮೆ ಮೌಲ್ಯನೀಡುತ್ತಾರೆ ಮತ್ತು ಹೆಣ್ಣು ಮಗುವಿಗೆ ಶಿಕ್ಷಣ ನೀಡಿದರೆ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ತಂದೆ-ತಾಯಿ ಭಾವಿಸುತ್ತಾರೆ. ಆದಕಾರಣ ಅವರು ಗಂಡುಮಕ್ಕಳನ್ನು ಶಾಲೆಗೆ ಕಳುಹಿಸಲು ಬಯಸುತ್ತಾರೆ ಮತ್ತು ಹೆಣ್ಣು ಮಕ್ಕಳು ಎಲ್ಲ ರೀತಿಯ ಗೃಹಕೃತ್ಯದಲ್ಲಿ ತೊಡಗಿಸಿಕೊಳ್ಳುವಂತೆ ನೋಡಿಕೊಳ್ಳುತ್ತಾರೆ. ನಿಧಾನವಾಗಿ ಹೆಣ್ಣು ಮಕ್ಕಳು ಅಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳನ್ನು ಮುಖ್ಯವಾಗಿ ಅವಲಂಭಿಸಿ ಆ ಪ್ರದೇಶದ ಮಹಿಳೆಯರು ಸಾಮಾನ್ಯವಾಗಿ ಅನುಸರಿಸುವಂಥ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.


### 3.1.2.7 ಕುಟುಂಬದ ಗಾತ್ರ:

ಬಾಲಕಾರ್ಮಿಕತೆಗೆ ಇನ್ನೊಂದು ಕಾರಣ ದೊಡ್ಡ ಕುಟುಂಬಗಳು, ಬಡತನ, ಅನಕ್ಷರತೆ, ಕಡಿಮೆ ವರಮಾನ, ಮಕ್ಕಳನ್ನು ಸಾಕಲು ಕಡಿಮೆ ಸಾಮರ್ಥ್ಯ ಇವುಗಳ ವಿಷವರ್ತುಲದಲ್ಲಿ ಸಿಕ್ಕಿಕೊಂಡಿರುವ ಅನಕ್ಷರಸ್ಥ ಹಾಗೂ ತಿಳುವಳಿಕೆ ಸಾಲದ ತಂದೆ-ತಾಯಿಗಳು, ಪ್ರತಿಯೊಂದು ಮಗುವನ್ನು ಒಬ್ಬ ವರಮಾನಗಳಿಸುವ ಸದಸ್ಯನೆಂದು ಕಾಣುತ್ತಾರೆ ಮತ್ತು ಮಗುವನ್ನು ಕೆಲಸಕ್ಕೆ ಕಳುಹಿಸಲು ಅಪೇಕ್ಷಿಸುತ್ತಾರೆ. ಆದುದರಿಂದ ಭಾರೀ ಪ್ರಮಾಣದ (ಮ್ಯಾಕ್ರೋ) ಜನಸಂಖ್ಯಾ ಸ್ಫೋಟವು ಬಾಲಕಾರ್ಮಿಕತೆಗೆ ಕಾರಣವಾಗಿದೆ.

### 3.1.2.8 ತಂದೆ-ತಾಯಿಗಳ ಅಭ್ಯಾಸಗಳು

ಬಾಲಕಾರ್ಮಿಕತೆ ಕಾರಣಗಳಲ್ಲಿ ತಂದೆ ತಾಯಿಗಳ ಅಭ್ಯಾಸಗಳೂ ಸೇರಿವೆ. ತಂದೆ-ತಾಯಿಗಳಿಗೆ ಇರುವ ಕೆಟ್ಟ ಚಟಗಳು, ಅದರಲ್ಲೂ ಮುಖ್ಯವಾಗಿ ತಂದೆಯ ಚಟವು ಮಕ್ಕಳನ್ನು ಕೆಲಸಕ್ಕೆ ದೂಡುತ್ತದೆ ಎಂಬುದು ಹಲವಾರು ಅಧ್ಯಯನಗಳಿಂದ ಬೆಳಕಿಗೆ ಬಂದ ಸಂಗತಿಯಾಗಿದೆ. ಮಕ್ಕಳನ್ನು ಕಾರ್ಮಿಕ ಮಾರುಕಟ್ಟೆಗೆ ದೂಡುವುದರಲ್ಲಿ ಕುಡಿತದ ಚಟ ಒಂದು ಮುಖ್ಯ ಕಾರಣವಾಗಿದೆ. ಕುಟುಂಬದ ವಯಸ್ಕ ವರಮಾನ ಗಳಿಸುವ ಸದಸ್ಯನಿಗೆ ಏಟಾದಲ್ಲಿ ಅಥವಾ ಕಾಯಿಲೆಯಾದಲ್ಲಿ, ದೂರಮಾಡುವಿಕೆ ಅಥವಾ ವಿಚ್ಛೇದನಾ ಫಲಿತಾಂಶವಾಗಿ ಉಂಟಾದ ಒಡಕು, ಬಾಲಕಾರ್ಮಿಕತೆಗೆ ಬಹುಪಾಲು ಕಾರಣವಾಗಿರುತ್ತದೆ.





## 3.2 ಬಾಲಕಾರ್ಮಿಕತೆಯ ಪರಿಣಾಮಗಳು

**3.2.1 ಮಾನವ ಹಕ್ಕುಗಳ ಉಲ್ಲಂಘನೆ:** ಬಾಲಕಾರ್ಮಿಕತೆ ಮಕ್ಕಳ ಹಕ್ಕುಗಳ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕ್ರಿಯೆಯಾಗಿದೆ.

**3.2.2 ಅಂತಾರಾಷ್ಟ್ರೀಯ ಕಾರ್ಮಿಕ ಮಾನಗಳ ಉಲ್ಲಂಘನೆ:** ಬಾಲಕಾರ್ಮಿಕತೆ ಅಂತಾರಾಷ್ಟ್ರೀಯ ಕಾರ್ಮಿಕ ಮಾನಗಳ ಉಲ್ಲಂಘನೆಯಾಗಿದ್ದು, ಇದು ವ್ಯಾಪಾರ ಮತ್ತು ಸಾಮಾಜಿಕ ಬಹಿಷ್ಕಾರಗಳಿಗೆ ಎಡೆಮಾಡಿ ಕೊಡಬಹುದು.

**3.2.3 ಅನಕ್ಷರತೆ** : ಮಕ್ಕಳು ಬಾಲಕಾರ್ಮಿಕರಾಗುವುದರಿಂದ, ಅವರು ಶಿಕ್ಷಣದಿಂದ ವಂಚಿತರಾಗಿ ಅನಕ್ಷರಸ್ಥರಾಗುವರು. ಅವರು ಅನಕ್ಷರಸ್ಥರಾಗುವುದರಿಂದ ಜೀವನವಿಡಿ ಇನ್ನೊಬ್ಬರ ಮೇಲೆ ಅವಲಂಬಿತರಾಗಬೇಕಾಗುವುದು. ಅನಕ್ಷರತೆ ಅವರ ಅಭಿವೃದ್ಧಿಗೆ ಅಡ್ಡಿಬರುವುದು.

**3.2.4 ಬಡತನ** : ಶಿಕ್ಷಣ ಇಲ್ಲದೆ ಇರುವುದರಿಂದ ಅವರ ಅಭಿವೃದ್ಧಿ ಕುಂಠಿತವಾಗುವುದು, ಬಡತನದಲ್ಲಿ ಜೀವನ ನಡೆಸಬೇಕಾಗುವುದು. ಶಿಕ್ಷಣದಿಂದ ಉತ್ತಮ ಸಂಪಾದನೆ ಮಾಡಲು ಸಾಧ್ಯವಾಗುವುದು.

**3.2.5 ಅನಾರೋಗ್ಯ / ಕಾಯಿಲೆಗಳು** : ಬಾಲಕಾರ್ಮಿಕರು ಹಲವಾರು ಕಾಯಿಲೆಗಳಿಗೆ ತುತ್ತಾಗುವ ಸಂಭವ ಇರುವುದು. ಹೆಚ್ಚಿನವರು ಅನಾರೋಗ್ಯಕರವಾದ ವಾತಾವರಣದಲ್ಲಿ ಕೆಲಸ ಮಾಡುವುದರಿಂದ ಕಾಯಿಲೆಗಳಿಗೆ ತುತ್ತಾಗುವುದು.

**3.2.6 ಕುಂಠಿತ ಬೆಳವಣಿಗೆ** : ಬಾಲಕಾರ್ಮಿಕತೆಯಿಂದ ಮಕ್ಕಳ ಬೆಳವಣಿಗೆ ಕುಂಠಿತವಾಗುವುದು. ಅವರ ದೇಹ ಬೇಗನೆ ಮುಪ್ಪಾಗುವುದು.

**3.2.7 ಅವಘಡಗಳು – ಊನಾಗುವಿಕೆ** : ಬಾಲಕಾರ್ಮಿಕರು ಅಸುರಕ್ಷಿತ ವಾತಾವರಣದಲ್ಲಿ ಕೆಲಸ ಮಾಡಬೇಕಾದುದರಿಂದ, ಅವರು ಅವಘಡಗಳಿಗೆ ಸಿಕ್ಕಿ ತಮ್ಮ ಅಂಗಾಂಗಳನ್ನು ಊನಗೊಳಿಸಿಕೊಳ್ಳುವ ಸಂಭವ ಹೆಚ್ಚಾಗಿರುತ್ತದೆ.

**3.2.8 ಅವಘಡಗಳು – ಸಾವು** : ಬಾಲಕಾರ್ಮಿಕರು ದೊಡ್ಡವರ ಹಾಗೆ ಜಾಗರೂಕರಾಗಿರುವುದಿಲ್ಲ. ಇದರಿಂದ ಅವರು ಅಪಾಯಕಾರಿ ವಾತಾವರಣದಲ್ಲಿ ಕೆಲಸ ಮಾಡುವಾಗ ಜೀವ ಕಳೆದುಕೊಳ್ಳುವ ಸಂಭವ ಇರುವುದು.


**3.2.9 ದುರಾಭ್ಯಾಸಗಳಿಗೆ ಒಳಗಾಗುವುದು** : ಬಾಲಕಾರ್ಮಿಕರು ಮನೆಯಿಂದ ಹೊರಗೆ ಬೇರೆಯವರ ಜೊತೆಯಲ್ಲಿ ಕೆಲಸ ಮಡುವಾಗ ದುರಾಭ್ಯಾಸಗಳಿಗೆ ದಾಸರಾಗುವ ಸಂಭವ ಇರುತ್ತದೆ.

**3.2.10 ಅಪರಾಧಿಗಳಾಗುವುದು** : ಬಾಲಕಾರ್ಮಿಕರು, ಅಪರಾಧಿಗಳ ಸಂಪರ್ಕಕ್ಕೆ ಬಂದು ಅಪರಾಧಿಗಳಾಗುವ ಸಂಭವ ಹೆಚ್ಚು ಇರುವುದು. ಅವರು ಸಮಾಜ ದ್ರೋಹಿಗಳಾಗುವ ಸಂಭವ ಇರುವುದು.

**3.2.11 ಉದ್ಯೋಗದ ಕೊರತೆ:** ಬಾಲಕಾರ್ಮಿಕತೆ ದೇಶದಲ್ಲಿ ದೊಡ್ಡವರ ಉದ್ಯೋಗದ ಕೊರತೆಯನ್ನು ಹುಟ್ಟು ಹಾಕುತ್ತದೆ.

**3.2.12 ಕೌಶಲ್ಯರಹಿತರನ್ನಾಗಿಸುವುದು:** ಬಾಲಕಾರ್ಮಿಕತೆ ಮಕ್ಕಳನ್ನು ಕೌಶಲ್ಯರಹಿತ ವ್ಯಕ್ತಿಗಳನ್ನಾಗಿ ರೂಪಿಸುವುದು





## 3.3 ಬಾಲಕಾರ್ಮಿಕತೆಯ ಪ್ರಮಾಣ

### 3.3.1 ಆರ್ಥಿಕ ಚಟುವಟಿಕೆಯಲ್ಲಿ ತೊಡಗಿರುವ ಮಕ್ಕಳು

#### 3.3.1.1 ಜಾಗತಿಕ:

ಸುಮಾರು 211 ಮಿಲಿಯನ್ 6–14 ವರ್ಷದ ಮಕ್ಕಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರಬಹುದು ಎಂದು ಅಂದಾಜಿಸಲಾಗಿದೆ. ಪ್ರಪಂಚದ ಈ ವಯೋಮಿತಿಯಲ್ಲಿ ಇದು ಎಲ್ಲಾ ಮಕ್ಕಳ ಸಂಖ್ಯೆಯ ಶೇ.20 ಆಗಬಹುದು ಎಂದು ಅಂದಾಜಿಸಲಾಗಿದೆ. ಇವರಲ್ಲಿ ಸುಮಾರು 73 ಮಿಲಿಯನ್ ಮಕ್ಕಳನ್ನು 10ವರ್ಷಕ್ಕಿಂತ ಕೆಳಗಿನವರು. 5–17 ವರ್ಷದ ಪ್ರಾಯದ ಮಕ್ಕಳನ್ನು ತೆಗೆದುಕೊಂಡರೆ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುವವರು ಸುಮಾರು 352 ಮಿಲಿಯನ್ ಎಂದು ಅಂದಾಜಿಸಲಾಗಿದೆ. 5–14 ವರ್ಷದ ಬಾಲಕಾರ್ಮಿಕರಲ್ಲಿ ಲಿಂಗ ವ್ಯತ್ಯಾಸ ಹೆಚ್ಚು ಇರುವುದಿಲ್ಲ. ಆದರೆ ಹೆಚ್ಚಿನ ಪ್ರಾಯದ ಮಕ್ಕಳಲ್ಲಿ ಹುಡುಗರು ಹೆಚ್ಚು ಕೆಲಸ ಮಾಡುತ್ತಿರುವುದು ಕಂಡು ಬಂದಿದೆ.


#### 3.3.1.2 ಭಾರತ:

ಭಾರತದ ಮಕ್ಕಳ ಸಂಖ್ಯೆ 398 ಮಿಲಿಯನ್ ಎಂದು ಅಂದಾಜಿಸಲಾಗಿದ್ದು, ಅವರಲ್ಲಿ 203 ಮಿಲಿಯನ್ 5–14 ವರ್ಷ ವಯೋಮಿತಿಯವರು ಆಗಿರುತ್ತಾರೆ. ಇವರಲ್ಲಿ 116 ಮಿಲಿಯನ್ ಶಾಲೆಯಲ್ಲಿ ಇದ್ದಾರೆ. 12.6 ಮಿಲಿಯನ್ ಮಕ್ಕಳು ಪೂರ್ಣಾವಧಿಯ ಕೆಲಸಗಳಲ್ಲಿ ಇದ್ದಾರೆ. ಉಳಿದ 74 ಮಿಲಿಯನ್ ಮಕ್ಕಳ ಸ್ಥಿತಿಗತಿ ಗೊತ್ತಿರುವುದಿಲ್ಲ. ಇವರು ಕುಟುಂಬದ ಹೊಲಗದ್ದೆಗಳಲ್ಲಿ ಕೆಲಸಮಾಡುತ್ತಿರಬಹುದು ಅಥವಾ ತಮ್ಮ ಪೋಷಕರ ಜೊತೆಯಲ್ಲಿ ಅಥವಾ ಮನೆಗೆಲಸದವರಾಗಿ ಅಥವಾ ಜೀತದಾಳಾಗಿ ಅಥವಾ ಯಾವುದೇ ಕೆಲಸಮಾಡಿಕೊಂಡಿರಬಹುದು.

### 3.3.2 ಭಾರತ ಮತ್ತು ಕರ್ನಾಟಕ ರಾಜ್ಯದಲ್ಲಿ ಬಾಲಕಾರ್ಮಿಕತೆ

| | 1971 | 1981 | 1991 | 2001 |
|---|---|---|---|---|
| ಭಾರತ | 10753985 | 13640870 | 11285349 | 12666377 |
| ಕರ್ನಾಟಕ (35 ರಾಜ್ಯಗಳಲ್ಲಿ 7ನೇ ದೊಡ್ಡ ರಾಜ್ಯವಾಗಿದೆ) | 808719 | 1311530 | 976247 | 822615 |
| ಭಾರತಕ್ಕೆ ಹೋಲಿಸಿದಾಗ ಕರ್ನಾಟಕದ % | 7.5% | 8.29% | 8.65% | 6.49% |





**3.3.3 ರಾಜ್ಯವಾರು ಬಾಲಕಾರ್ಮಿಕರ ಹಂಚಿಕೆ (ಕೆಲವು ದೊಡ್ಡ ರಾಜ್ಯಗಳಲ್ಲಿ ಮತ್ತು 5–14 ವರ್ಷ ಪ್ರಾಯದವರೆಗೆ)**

| ರಾಜ್ಯಗಳು | 1981 | 1991 | 2001 |
|---|---|---|---|
| ಆಂಧ್ರ ಪ್ರದೇಶ | 1.95 | 1.66 | 1.36 |
| ಬಿಹಾರ್ | 1.10 | 0.94 | 1.12 |
| ಗುಜರಾತ್ | 0.62 | 0.52 | 0.49 |
| ಹರಿಯಾಣ | 0.19 | 0.11 | 0.25 |
| ಕರ್ನಾಟಕ | 1.13 | 0.98 | 0.85 |
| ಕೇರಳ | 0.09 | 0.03 | 0.03 |
| ಮಧ್ಯಪ್ರದೇಶ | 1.70 | 1.35 | 1.07 |
| ಮಹಾರಾಷ್ಟ್ರ | 1.56 | 1.07 | 0.76 |
| ಒರಿಸ್ಸಾ | 0.70 | 0.45 | 0.38 |
| ಪಂಜಾಬ್ | 0.22 | 0.14 | 0.18 |
| ರಾಜಸ್ಥಾನ್ | 0.82 | 0.77 | 1.26 |
| ತಮಿಳುನಾಡು | 0.98 | 0.58 | 0.42 |
| ಉತ್ತರ ಪ್ರದೇಶ | 1.43 | 1.41 | 1.93 |
| ಪಶ್ಚಿಮ ಬಂಗಾಳ | 0.61 | 0.71 | 0.86 |
| ಭಾರತ | 13.64 | 11.29 | 12.59 |

### 3.3.4 ಕರ್ನಾಟಕದಲ್ಲಿ ಬಾಲಕಾರ್ಮಿಕತೆ

**ಹೆಣ್ಣು ಮಗು ಹೆಚ್ಚು ಶೋಷಣೆಗೆ ಒಳಪಡುತ್ತದೆ.... "ಕೆಲಸ ಮತ್ತು ದಿನನಿತ್ಯದ ಮನೆಗೆಲಸದ ಮಧ್ಯೆ ಹೆಣ್ಣುಮಗು ಇಡೀ ದಿನ ಕೆಲಸ ಮಾಡುವುದು"**


ಭಾರತದಲ್ಲಿ ಮಕ್ಕಳು ವಿವಿಧ ರೀತಿಯ ಕೆಲಸಗಳನ್ನು ಮಾಡುತ್ತಾರೆ. ಲಿಂಗದ ಆಧಾರದಲ್ಲಿ ಕೆಲಸಗಳನ್ನು ವರ್ಗೀಕರಿಸಲಾಗಿರುತ್ತದೆ. ಕೃಷಿ ಕ್ಷೇತ್ರದಲ್ಲಿ, ಮನೆಯಲ್ಲಿ, ಬೇರೆ ಬೇರೆ ಅಸಂಘಟಿತ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳು ಮಾಡುವ ಕೆಲಸ ಮತ್ತು ಗಂಡು ಮಕ್ಕಳು ಮಾಡುವ ಕೆಲಸ ಎಂಬುದಾಗಿ ಪ್ರತ್ಯೇಕಿಸಲಾಗಿದೆ. ಮನೆಯ ಹೆಚ್ಚಿನ ಕೆಲಸಗಳು ಹೆಚ್ಚಾಗಿ ಹೆಣ್ಣು ಮಕ್ಕಳ ಮೇಲೆ ಬೀಳುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಹೆಣ್ಣು ಮಕ್ಕಳು ಮನೆಯಲ್ಲಿನ ಸಣ್ಣ ಮಕ್ಕಳನ್ನು ನೋಡಿಕೊಳ್ಳುವುದರ ಜೊತೆಗೆ ಅಡುಗೆಯನ್ನು ಮಾಡಬೇಕಾಗುವುದು, ಶುಚಿ ಮಾಡಬೇಕಾಗುವುದು, ಸೌದೆಯನ್ನು ತರಬೇಕಾಗುವುದು, ಇದಲ್ಲದೆ ದೊಡ್ಡವರಿಗೆ ಸಹಾಯವಾಗುವಂತಹ ಹಲವಾರು ಕೆಲಸಗಳನ್ನು ಮಾಡಬೇಕಾಗುವುದು.

ಅಸಂಘಟಿತ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳನ್ನು ಕಡಿಮೆ ಸಂಬಳದ, ಸಂಬಳವಿಲ್ಲದ ಅಥವಾ ಕೌಶಲ್ಯರಹಿತ ಕೆಲಸಗಳಲ್ಲಿ ತೊಡಗಿಸಿಕೊಳ್ಳಲಾಗುತ್ತದೆ. ಇದರಿಂದ ಅವರಿಗೆ ಯಾವ ರೀತಿಯ ಕೌಶಲ್ಯ ಸಂಪಾದನೆ ಆಗುವುದಿಲ್ಲ. ಆದರೆ ಗಂಡು ಮಕ್ಕಳು ಮಾಡುವ ಕೆಲಸಗಳು ಹೆಚ್ಚಾಗಿ ಒಂದು ರೀತಿಯ ಅಪ್ರೆಂಟಿಶಿಪ್ ತರಬೇತಿಯಾಗಿದ್ದು, ಅವರಿಗೆ ಕೌಶಲ್ಯ ಸಂಪಾದನೆಗೆ ಅವಕಾಶ ಇರುತ್ತದೆ.

ಕರ್ನಾಟಕದಲ್ಲಿ ಈ ಕೆಳಗಿನ ಕ್ಷೇತ್ರಗಳಲ್ಲಿ ಬಾಲಕಾರ್ಮಿಕತೆಯನ್ನು ಹೆಚ್ಚಾಗಿ ಕಾಣಬಹುದಾಗಿದೆ.

- ಕೃಷಿ, ಜಾನುವಾರು ಸಾಕಾಣಿಕೆ, ತೋಟಗಾರಿಕೆ ಮತ್ತು ಮೀನುಗಾರಿಕೆ
- ಬೀಡಿ ತಯಾರಿ
- ಜೀತ ಪದ್ಧತಿ
- ಅಗರ ಬತ್ತಿ ತಯಾರಿಕೆ







- ನಗರಗಳಲ್ಲಿ ಚಿಂದಿ ಆಯುವಿಕೆ
- ಗಣಿಗಳಲ್ಲಿ ಮಕ್ಕಳು ಕೆಲಸ ಮಾಡುವುದು
- ಹೋಟೆಲ್‌ಗಳಲ್ಲಿ ಡಾಬಾ ತಿಂಡಿ ತಿನಿಸುಗಳ ಅಂಗಡಿಗಳಲ್ಲಿ
- ರಸ್ತೆಗಳಲ್ಲಿ ಬೆಲೂನ್ ಚೆಂಡುಗಳು ಇತ್ಯಾದಿಗಳನ್ನು ಮಾರಾಟ ಮಾಡುವಲ್ಲಿ/ ರಸ್ತೆ ಮಾರಾಟಗಾರರು
- ಬೇಡುವುದು ಮತ್ತು ರಸ್ತೆ ಬದಿಯ ಸರ್ಕಸ್‌ನಲ್ಲಿ
- ಮಾಂಸ ಮಾರುವ ಅಂಗಡಿಗಳಲ್ಲಿ/ ಖಸಾಯಿ ಖಾನೆಗಳಲ್ಲಿ
- ಮನೆಗೆಲಸದವರಾಗಿ
- ವೇಶ್ಯವಾಟಿಕೆಗಳಲ್ಲಿ
- ಗ್ಯಾರೇಜುಗಳಲ್ಲಿ ಮತ್ತು ವಾಹನ ರಿಪೇರಿ ಸಂಸ್ಥೆಗಳಲ್ಲಿ
- ಕೃಷಿ, ತೋಟದುತ್ಪನ್ನ ಮತ್ತು ಆಹಾರದ ಸಂಸ್ಕರಣಾ ಕ್ಷೇತ್ರಗಳಲ್ಲಿ
- ಕಟ್ಟಡಗಳ ನಿರ್ಮಾಣಗಳಲ್ಲಿ
- ಇಟ್ಟಿಗೆ ಗೂಡುಗಳಲ್ಲಿ
- ರೇಷ್ಮೆ ಮತ್ತು ಸಣ್ಣ ಸಣ್ಣ ಅಸಂಘಟಿತ ಘಟಕಗಳಲ್ಲಿ

### 3.3.5 ಪ್ರಾಂತ್ಯ ಮಟ್ಟದ ಬಾಲಕಾರ್ಮಿಕತೆಯ ಪ್ರಮಾಣ

**ಕೆಲವು ದೊಡ್ಡ ರಾಜ್ಯಗಳಲ್ಲಿನ ಕೆಲಸಮಾಡುತ್ತಿರುವ ಮಕ್ಕಳ ಅನುಪಾತದ ಮೇರೆಗೆ ಬಾಲಕಾರ್ಮಿಕತೆಯ ಶ್ರೇಣಿಕರಣ**

| ರಾಜ್ಯಗಳು | 1983 | 1993/94 | 1999/00 |
|---|---|---|---|
| ಆಂಧ್ರ ಪ್ರದೇಶ | 01 | 01 | 01 |
| ಬಿಹಾರ್ | 12 | 11 | 12 |
| ಗುಜರಾತ್ | 10 | 10 | 04 |
| ಹರಿಯಾಣ | 11 | 12 | 13 |
| ಕರ್ನಾಟಕ | 03 | 03 | 03 |
| ಕೇರಳ | 14 | 14 | 14 |
| ಮಧ್ಯಪ್ರದೇಶ | 07 | 06 | 05 |
| ಮಹಾರಾಷ್ಟ್ರ | 08 | 07 | 09 |
| ಒರಿಸ್ಸಾ | 05 | 05 | 07 |
| ಪಂಜಾಬ್ | 04 | 13 | 11 |
| ರಾಜಸ್ಥಾನ್ | 02 | 02 | 02 |
| ತಮಿಳುನಾಡು | 06 | 04 | 08 |
| ಉತ್ತರ ಪ್ರದೇಶ | 09 | 09 | 10 |
| ಪಶ್ಚಿಮ ಬಂಗಾಳ | 13 | 08 | 06 |







ನಾವು ಗ್ರಾಹಕರಾಗಿ ಯಾವಾಗಲಾದರೂ ನಾವು ಖರೀದಿಸುತ್ತಿರುವ ಆಭರಣಗಳು, ಬಟ್ಟೆಗಳು, ಕುಡಿಯುತ್ತಿರುವ ಟೀ ಇತ್ಯಾದಿಗಳು ಎಲ್ಲಿಂದ ಬಂದಿವೆ? ಯಾರು ತಯಾರಿಸುತ್ತಿದ್ದಾರೆ ಎಂಬ ಬಗ್ಗೆ ಯೋಚಿಸುತ್ತಿದ್ದೇವೆಯೆ?

ನಾವು ಉಪಯೋಗಿಸುವ ಬಟ್ಟೆಗಳು, ಆಭರಣಗಳು, ಅಲಂಕಾರಿಕ ವಸ್ತುಗಳು, ಟೀ ಮುಂತಾದವುಗಳು ಹೆಚ್ಚಾಗಿ ಬಾಲಕಾರ್ಮಿಕರನ್ನೊಳಗೊಂಡು ತಯಾರಿಸಲ್ಪಟ್ಟ ವಸ್ತುಗಳಾಗಿವೆ. ಇಲ್ಲಿ 5 ವರ್ಷದಷ್ಟು ಕಡಿಮೆ ಪ್ರಾಯದ ಮಕ್ಕಳು ಇಡೀ ದಿವಸ ಅಪಾಯಕಾರಿ ಪರಿಸ್ಥಿತಿಯಲ್ಲಿ ತಮ್ಮ ಜೀವವನ್ನು ಅಪಾಯಕ್ಕೆ ಒಡ್ಡಿ ಕಡಿಮೆ ಸಂಬಳದ ಮೇಲೆ ರಕ್ತ ಸುರಿಸಿ ದುಡಿಯುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ತಮ್ಮ ಕೆಲಸಕ್ಕೆ ದಾಸರಾಗಿದ್ದು, ಗುಲಾಮರಾಗಿ, ಜೀತದಾಳಾಗಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಬಿಡುಗಡೆ ಅಥವಾ ಸ್ವಾತಂತ್ರ್ಯ ಕನಸಿನ ಗಂಟಾಗಿರುತ್ತದೆ. ಇವರ ಪೋಷಕರು ತೆಗೆದುಕೊಂಡಿದ್ದಾರೆ ಎನ್ನುವ ಸಾಲವನ್ನು ತೀರಿಸಿದಾಗ ಮಾತ್ರ ಇವರಿಗೆ ಮುಕ್ತಿ. ಈ ಹಿಂದೆ ಕೆಲವೊಮ್ಮೆ ಮಕ್ಕಳು ದೊಡ್ಡವರಾದ ನಂತರ ಅವರ ತಮ್ಮಂದಿರಿಗೆ ಅಥವಾ ತಂಗಿಯಂದಿರಿಗೆ ವಿಸ್ತರಿಸಲ್ಪಡುತ್ತದೆ. ಕಾರಣ ದೊಡ್ಡ ಮಕ್ಕಳು ಈ ಕೆಲಸಗಳನ್ನು ಮಾಡಲು ಅಶಕ್ತರಾಗುತ್ತಾರೆ ಯಾ ಕಾಯಿಲೆಯನ್ನು ಹೊಂದಿರುತ್ತಾರೆ ಯಾ ಸತ್ತಿರುತ್ತಾರೆ ಅಥವಾ ಊನಗೊಂಡಿರುತ್ತಾರೆ.

### 3.3.6 ಪ್ರಮುಖವಾದ ಬಾಲಕಾರ್ಮಿಕತೆಯ ಪ್ರಕಾರಗಳು

| **ಕಾನೂನಿನ ಚೌಕಟ್ಟಿನೊಳಗೆ ಸುಮಾರು 6–8% ಬಾಲಕಾರ್ಮಿಕರು ಒಳಪಡುತ್ತಾರೆ. ಈ ಕೆಳಗಿನ ಕಾನೂನುಗಳು ಮಕ್ಕಳನ್ನು ಕಾನೂನಿನ ಚೌಕಟ್ಟಿನೊಳಗೆ ತರುತ್ತವೆ.** | **ಕಾನೂನಿನ ಪರಿದಿಯ ಹೊರಗೆ** | |
|---|---|---|
| | **ಗ್ರಾಮೀಣ ಪ್ರದೇಶದಲ್ಲಿ ಕೃಷಿ ಮತ್ತು ಸಂಬಂಧಿತ ಇತರ ಚಟುವಟಿಕೆಗಳು. (70% ರಷ್ಟು ಬಾಲಕಾರ್ಮಿಕತೆ)** | **ನಗರ ಪ್ರದೇಶ ಅಸಂಘಟಿತ ಕ್ಷೇತ್ರಗಳು** |
| ▪ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾನೂನು 1986.<br>▪ ಕಾರ್ಖಾನೆಗಳ ಕಾನೂನು 1948<br>▪ ಪ್ಲಾಂಟೇಷನ್ ಕಾರ್ಮಿಕ ಕಾನೂನು. 1951<br>▪ ಗಣಿ ಕಾನೂನು 1952<br>▪ ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾನೂನು 1966<br>▪ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಕೀರ್ಣಗಳ ಕಾನೂನು 1961<br>▪ ಬಾಲಾಪರಾಧಿಗಳ ನ್ಯಾಯ ಕಾನೂನು 2000 | **ಹುಡುಗಿಯರು**<br>▪ ಸೌದೆ ತರುವುದು ಮತ್ತು ಜಾನುವಾರುಗಳಿಗೆ ಆಹಾರಗಳನ್ನು ಸಂಗ್ರಹಿಸುವುದು<br>▪ ನೀರನ್ನು ತರುವುದು<br>▪ ಕಳೆ ತೆಗೆಯುವುದು<br>▪ ಆಹಾರ ಸಂಸ್ಕರಣೆ<br>▪ ಕೋಳಿ ಸಾಕಣೆ<br>▪ ಸಣ್ಣ ಮಕ್ಕಳನ್ನು ನೋಡಿಕೊಳ್ಳುವುದು<br>**ಹುಡುಗರು**<br>▪ ಉಳುವುದು ಮತ್ತು ತೋಡುವುದು<br>▪ ಜಾನುವಾರುಗಳನ್ನು ಮೇಯಿಸುವುದು<br>▪ ವಸ್ತುಗಳ ಸಾಗಾಟ<br>▪ ಪೈರು ಕಟಾವು ಮತ್ತು ಕಾಳು ಬಿಡಿಸುವುದು<br>▪ ಮಾರಾಟ ಮತ್ತು ಖರೀದಿ<br>▪ ಉಪಕರಣಗಳಿಗೆ ಸಂಬಂಧಪಟ್ಟ ಕೆಲಸಗಳು | ▪ ಕಟ್ಟಡಗಳ ನಿರ್ಮಾಣ<br>▪ ಸಾಮಾನು ಸಾಗಾಟ<br>▪ ಮನೆಗೆಲಸ<br>▪ ಚರ್ಮದ ಕೆಲಸ<br>▪ ರಸ್ತೆ ಬದಿ ಮಾರಾಟಗಾರರು<br>▪ ಹೋಟೆಲ್ ಇತ್ಯಾದಿಗಳ ಸಹಾಯಕರು<br>▪ ಗ್ಯಾರೇಜ್‌ಗಳಲ್ಲಿ<br>▪ ಶೂ ಪಾಲಿಶ್<br>▪ ಕಸ ಗುಡಿಸುವುದು<br>▪ ಚಿಂದಿ ಆಯುವಿಕೆ<br>▪ ವೇಶ್ಯಾವಾಟಿಕೆಗಳಲ್ಲಿ<br>▪ ಬೀಡಿ ತಯಾರಿಕೆ<br>▪ ಹಪ್ಪಳ ತಯಾರಿಕೆ<br>▪ ಅಗರಬತ್ತಿ ತಯಾರಿಕೆ<br>▪ ಕಸೂತಿ ಕೆಲಸ<br>▪ ಹೊಸೈರಿ |





## 3.4 ಮಕ್ಕಳ ಹಕ್ಕುಗಳ ಬಗ್ಗೆ ನಡೆದ ಸಂಯುಕ್ತ ರಾಷ್ಟ್ರ ಸಂಘದ ಸಮಾವೇಶ 1989 (ಭಾರತವು ಸಮಾವೇಶದ ನಡವಳಿಕೆಗೆ ಸಹಿ ಮಾಡಿದೆ)

ಈ ಸಮಾವೇಶವು ಮಕ್ಕಳ ವಿಶೇಷವಾದ ಅಭದ್ರ ಪರಿಸ್ಥಿತಿಯನ್ನು ಗುರುತಿಸಿದೆ ಹಾಗೂ ಮಕ್ಕಳಿಗೆ ವಿಶೇಷ ನೆರವು ಮತ್ತು ಸಹಾಯದ ಅವಶ್ಯಕತೆಯನ್ನು ಗುರುತಿಸಿ ಅದನ್ನು ಗಮನಿಸುತ್ತದೆ. ಇದು ಒಂದು ರೀತಿಯಲ್ಲಿ ಮಕ್ಕಳನ್ನು ಸಶಸ್ತ್ರಗೊಳಿಸುವ ಪ್ರಕ್ರಿಯೆ ಆಗಿದ್ದು, ಎಲ್ಲಾ ಮಕ್ಕಳು ರಕ್ಷಣೆಯ ವಾತಾವರಣದಲ್ಲಿ ಜೀವಿಸಲು ಹಾಗೂ ತಮ್ಮ ಜೀವನದಲ್ಲಿ ಸಂಪೂರ್ಣವಾಗಿ ಬೆಳೆಯಲು ಅವಕಾಶ ಕಲ್ಪಿಸಿಕೊಡುವುದು.

ಈ ಸಮಾವೇಶದಲ್ಲಿ ಮಕ್ಕಳಿಗೆ ನಾಗರೀಕ, ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಹಕ್ಕುಗಳನ್ನು ಒದಗಿಸಲಾಗಿದೆ. ಈ ನಾಲ್ಕು ಹಕ್ಕುಗಳು ಈ ಕೆಳಗಿನಂತೆ ಇವೆ.

**ಬದುಕುವ ಹಕ್ಕು:** ಇದು ಈ ಕೆಳಗಿನ ಹಕ್ಕುಗಳನ್ನು ಒಳಗೊಂಡಿರುತ್ತದೆ

- ಜೀವಿಸುವ ಹಕ್ಕು
- ಉನ್ನತ ಮಟ್ಟದ ಆರೋಗ್ಯದ ಹಕ್ಕು
- ಉನ್ನತ ಮಟ್ಟದ ಜೀವನದ ಹಕ್ಕು
- ಹುಟ್ಟಿದ ಕೂಡಲೇ ಹೆಸರು ಪಡೆಯುವ ಹಕ್ಕು
- ರಾಷ್ಟ್ರದ ಪೌರತ್ವ ಪಡೆಯುವ ಹಕ್ಕು
- ತಿಳಿದುಕೊಳ್ಳುವ ಹಕ್ಕು
- ತನ್ನ ಪೋಷಕರಿಂದ ಪೋಷಿಸಿಕೊಳ್ಳುವ ಹಕ್ಕು

**ರಕ್ಷಣೆಯ ಹಕ್ಕು:** ಇದು ಈ ಕೆಳಗಿನ ಹಕ್ಕುಗಳನ್ನು ಒಳಗೊಂಡಿರುತ್ತದೆ

- ಎಲ್ಲಾ ರೀತಿಯಲ್ಲಿ ಶೋಷಣೆಯಿಂದ ಸ್ವಾತಂತ್ರ್ಯದ ಹಕ್ಕು
- ಬೈಗುಳದಿಂದ ಮುಕ್ತಿಯ ಹಕ್ಕು
- ಅನಾಗರೀಕ ನಡತೆಯ ವಿರುದ್ಧದ ಹಕ್ಕು
- ಯುದ್ಧದ ಸಂದರ್ಭದಲ್ಲಿ ಮತ್ತು ತುರ್ತು ಪರಿಸ್ಥಿತಿಯಲ್ಲಿ ವಿಶೇಷ ರಕ್ಷಣೆಯ ಹಕ್ಕು.

**ಅಭಿವೃದ್ಧಿಯ ಹಕ್ಕು:** ಇದರಲ್ಲಿ ಈ ಕೆಳಗಿನ ಹಕ್ಕುಗಳು ಸೇರಿವೆ.

- ಶಿಕ್ಷಣದ ಹಕ್ಕು
- ಎಳೆ ಪ್ರಾಯದಲ್ಲಿ ಅಭಿವೃದ್ಧಿಯಾಗುವ ಹಕ್ಕು
- ಸಾಮಾಜಿಕ ಭದ್ರತೆಯ ಹಕ್ಕು
- ವಿರಾಮದ ಹಕ್ಕು
- ಸಾಂಸ್ಕೃತಿಕ ಹಕ್ಕು

**ಭಾಗವಹಿಸುವ ಹಕ್ಕು :** ಇದು ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ

- ಮಕ್ಕಳ ವಿಚಾರಗಳಿಗೆ ಮನ್ನಣೆ ಪಡೆಯುವ ಹಕ್ಕು
- ವಿಚಾರಗಳನ್ನು ಪ್ರತಿಪಾದಿಸುವ ಹಕ್ಕು
- ಎಲ್ಲಾ ಅಗತ್ಯವಿರುವ ಮಾಹಿತಿಗಳನ್ನು ಪಡೆಯುವ ಹಕ್ಕು
- ಯೋಚಿಸುವ ಸ್ವಾತಂತ್ರ್ಯದ ಹಕ್ಕು
- ಧರ್ಮದ ಸ್ವಾತಂತ್ರ್ಯ ಹಕ್ಕು
- ಆತ್ಮ ಸಾಕ್ಷಿಯ ಹಕ್ಕು



## 3.5 ಅಂತರರಾಷ್ಟ್ರಿಯ ಕಾರ್ಮಿಕ ಯೋಜನೆ ಮತ್ತು ಬಾಲಕಾರ್ಮಿಕತೆ

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಇದು 1919 ರಲ್ಲಿ ಸ್ಥಾಪನೆ ಆಯಿತು. ಅಂದಿನಿಂದ ಬಾಲಕಾರ್ಮಿಕತೆಯ ನಿರ್ಮೂಲನೆ ಬಗ್ಗೆ ಕೆಲಸ ಮಾಡುತ್ತಿದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ತನ್ನ ಮೊದಲನೇ ಸಮಾವೇಶದಲ್ಲಿಯೇ 14 ವರ್ಷಕ್ಕಿಂತ ಕೆಳಗಿನ ಪ್ರಾಯದ ಮಕ್ಕಳು ದುಡಿಯುವುದನ್ನು ನಿಷೇಧಿಸಿದೆ.

### 3.5.1 ಕನಿಷ್ಠ ಪ್ರಾಯದ ಸಮಾವೇಶ 1973


ಬಾಲಕಾರ್ಮಿಕತೆಯ ಬಗ್ಗೆ ವ್ಯವಸ್ಥೆ ಮಾಡಿದ ಅತ್ಯಂತ ಮಹತ್ವದ ಸಮಾವೇಶ ಇದಾಗಿದೆ. ಇದರಲ್ಲಿ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಕನಿಷ್ಠ ವಯಸ್ಸನ್ನು ನಿರ್ಧಾರ ಮಾಡಲು ಒತ್ತು ಕೊಡಲು ತೀರ್ಮಾನಿಸಲಾಗಿತ್ತು. ಎಲ್ಲಾ ಸದಸ್ಯ ರಾಷ್ಟ್ರಗಳು ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು ರಾಷ್ಟ್ರೀಯ ನೀತಿಯನ್ನು ಹಮ್ಮಿಕೊಳ್ಳುವಂತೆ ಕೋರಲು ನಿರ್ಣಯವನ್ನು ಕೈಗೊಳ್ಳಲಾಗಿದೆ. ಕಾರ್ಮಿಕರ ಕನಿಷ್ಠ ವಯಸ್ಸು ಕಡ್ಡಾಯ ಶಿಕ್ಷಣದ ಗರಿಷ್ಠ ವಯೋಮಿತಿಯಷ್ಟು ಇರುವುದು ಅವಶ್ಯಕ, ಆದರೆ ಯಾವ ಸಂದರ್ಭದಲ್ಲಿಯೂ ಅದು 15 ವರ್ಷಕ್ಕಿಂತ ಕಡಿಮೆ ಇರಬಾರದು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಶಿಕ್ಷಣದ ವ್ಯವಸ್ಥೆ ಮತ್ತು ಅವಕಾಶಗಳು ಕಡಿಮೆ ಇರುವುದರಿಂದ ಅಲ್ಲಿ ಗರಿಷ್ಠ ವಯೋಮಿತಿ 14 ಇರಬಹುದು, ಉಳಿದ ರಾಷ್ಟ್ರಗಳಲ್ಲಿ ಅದು ಆರಂಭದಲ್ಲಿ 15 ಆಗಿರಬೇಕು ಮತ್ತು ನಿಧಾನವಾಗಿ ವಯೋಮಿತಿಯನ್ನು 18 ರವರೆಗೆ ಏರಿಸಬೇಕು. ಕಾರ್ಮಿಕರಾಗಲು ಕನಿಷ್ಠ ವಯೋಮಿತಿ ಸ್ಥಿರವಾಗಿ ನಿಲ್ಲಬಾರದು ಅದು ಹೆಚ್ಚುತ್ತಾ ಹೋಗುವುದು ಅವಶ್ಯಕ.

### 3.5.2 ನಿಕೃಷ್ಠ ರೀತಿಯ ಬಾಲಕಾರ್ಮಿಕತೆಯ ಸಮಾವೇಶ 1999

ಈ ಸಮಾವೇಶದಲ್ಲಿ ಎಲ್ಲಾ ರೀತಿಯ ನಿಕೃಷ್ಠ ಪರಿಸ್ಥಿಯ ಬಾಲಕಾರ್ಮಿಕತೆಯನ್ನು ಕೂಡಲೇ ನಿಲ್ಲಿಸುವಂತೆ ನಿರ್ಣಯ ತೆಗೆದುಕೊಳ್ಳಲಾಯಿತು. ಇದನ್ನು 18 ವರ್ಷಕ್ಕಿಂತ ಕಡಿಮೆ ಇರುವ ಎಲ್ಲಾ ಮಕ್ಕಳಿಗೂ ಅನ್ವಯಿಸಲಾಯಿತು. ಸಮಾವೇಶದಲ್ಲಿ ನಿಕೃಷ್ಠ ರೀತಿಯ ಬಾಲಕಾರ್ಮಿಕತೆ ಎಂದರೆ ಏನು? ಎಂಬುದಕ್ಕೆ ವಿವರಣೆಯನ್ನು ಕೊಡಲಾಯಿತು. ಗುಲಾಮಗಿರಿಯ ಎಲ್ಲಾ ಪ್ರಕಾರಗಳು ಹಾಗೂ ಇದೇ ರೀತಿಯ ಮಕ್ಕಳ ಮಾರಾಟ ಮತ್ತು ಮಕ್ಕಳ ಸಾಗಾಣಿಕೆ, ಮಕ್ಕಳನ್ನು ಯುದ್ಧಗಳಲ್ಲಿ ತೊಡಗಿಸಿಕೊಳ್ಳುವುದು, ಕಡ್ಡಾಯವಾಗಿ ಕೆಲಸಮಾಡಿಸುವುದು, ಮಕ್ಕಳನ್ನು ವೇಶ್ಯಾವೃತ್ತಿಯಲ್ಲಿ ತೊಡಗಿಸುವುದು, ಮಕ್ಕಳನ್ನು ಅಶ್ಲೀಲ ಚಿತ್ರ ತಯಾರಿಸಲು ಬಳಸಿಕೊಳ್ಳುವುದು ಇತ್ಯಾದಿ.

ಈ ಸಮಾವೇಶದಲ್ಲಿ "ಅಪಾಯಕಾರಿ ಕೆಲಸ" ಎಂದರೆ ಏನೆಂಬುದನ್ನು ಸಹ ವಿವರಿಸಲಾಗಿದೆ. ಇದರ ಪ್ರಕಾರ ದೈಹಿಕ, ಮಾನಸಿಕ ಹಾಗೂ ಲೈಂಗಿಕವಾಗಿ ಮಕ್ಕಳನ್ನು ದುರುಪಯೋಗ ಗೊಳಿಸುವುದು, ಭೂಮಿ ಅಡಿಯಲ್ಲಿನ ಕೆಲಸ, ನೀರಿನ ಅಡಿಯಲ್ಲಿ ಕೆಲಸ ಹಾಗೂ ಅಪಾಯಕಾರಿ ಎತ್ತರದಲ್ಲಿನ ಕೆಲಸ, ಅಪಾಯಕಾರಿ ಯಂತ್ರಗಳೊಂದಿಗೆ ಕೆಲಸ ಇತ್ಯಾದಿ ಅಪಾಯಕಾರಿ ಕೆಲಸವೆಂದು ಪರಿಗಣಿಸಲಾಯಿತು.





### 3.5.3 ಅಂತರರಾಷ್ಟ್ರೀಯ ಬಾಲಕಾರ್ಮಿಕ ನಿರ್ಮೂಲನ ಕಾರ್ಯಕ್ರಮ (ಐ.ಪಿ.ಇ.ಸಿ)

ಈ ಕಾರ್ಯಕ್ರಮವು 60 ಕ್ಕಿಂತ ಹೆಚ್ಚು ರಾಷ್ಟ್ರಗಳಲ್ಲಿ ಅನುಷ್ಠಾನವಾಗುತ್ತಿದ್ದು, ಈ ಕಾರ್ಯಕ್ರಮದ ಮೂಲಕ ಆ ರಾಷ್ಟ್ರಗಳ ಬಾಲಕಾರ್ಮಿಕತೆಯ ನಿರ್ಮೂಲನ ರಾಷ್ಟ್ರೀಯ ಕಾರ್ಯಕ್ರಮಗಳಿಗೆ ಅಗತ್ಯವಾದ ನೆರವು, ತಾಂತ್ರಿಕ ಸಲಹೆ, ಸಹಕಾರ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ.

**ಐ.ಪಿ.ಇ.ಸಿ ಕಾರ್ಯಕ್ರಮದ ಆದ್ಯತೆಗಳು:**

- ಜೀತದಲ್ಲಿರುವ ಮಕ್ಕಳು
- ಅಪಾಯಕಾರಿ ಕೆಲಸದಲ್ಲಿ ತೊಡಗಿರುವ ಮಕ್ಕಳು
- ಅಪಾಯಕ್ಕೆ ಸಿಗಬಹುದಾದ ಹಾಗು ದುರ್ಬಲ ವರ್ಗದ ಮಕ್ಕಳು


ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು, ಬಾಲಕಾರ್ಮಿಕರನ್ನು ಕೆಲಸದ ಸ್ಥಳಗಳಿಂದ ಬಿಡಿಸಲು, ಅವರನ್ನು ಪುನರ್‌ವಸತಿ ಗೊಳಿಸಲು ಅಪಾಯಕಾರಿ ಕ್ಷೇತ್ರದಿಂದ ಬಾಲಕಾರ್ಮಿಕರನ್ನು ಬಿಡಿಸಲು, ಕೆಲಸ ಮಾಡುವ ಸ್ಥಳದ ಪರಿಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಈ ಯೋಜನೆ ಸಹಾಯ ಮಾಡುವುದು.

**ಐ.ಪಿ.ಇ.ಸಿ ಮುಖ್ಯ ಚಟುವಟಿಕೆಗಳು:**

- ಪೋಷಕರನ್ನು ಪ್ರೇರೇಪಿಸಿ ಅವರು ಬಾಲಕಾರ್ಮಿಕತೆಯ ವಿರುದ್ಧವಾಗಿ ಕೆಲಸ ಮಾಡುವಂತೆ ಮಾಡುವುದು.
- ಸಮಸ್ಯೆಯ ಬಗ್ಗೆ ಅರಿವು ಕೊಡಲು ಸಾಂಸ್ಥಿಕ ವ್ಯವಸ್ಥೆಯನ್ನು ಮಾಡುವುದು ಮತ್ತು ಪರಿಸ್ಥಿತಿಯನ್ನು ವಿಶ್ಲೇಷಿಸುವುದು.
- ಬಾಲಕಾರ್ಮಿಕರನ್ನು ಬಿಡಿಸುವ, ಪುನರ್ವಸತಿಗೊಳಿಸುವ ಮತ್ತು ಅಭಿವೃದ್ಧಿ ಪಡಿಸುವ ಕಾನೂನುಗಳನ್ನು ರಚಿಸುವುದು, ಅಭಿವೃದ್ಧಿ ಪಡಿಸುವುದು, ಪ್ರಚಾರ ಮಾಡುವುದು ಮತ್ತು ಅದನ್ನು ಜಾರಿಗೊಳಿಸುವುದು.

ಐ.ಪಿ.ಇ.ಸಿ ನಮ್ಮ ದೇಶದಲ್ಲಿ ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಕರ್ನಾಟಕ ಬಾಲಕಾರ್ಮಿಕ ಯೋಜನೆ ಸಹ ಒಂದಾಗಿರುತ್ತದೆ.





## 3.6 ಕರ್ನಾಟಕ ಬಾಲಕಾರ್ಮಿಕ ಯೋಜನೆ

ಈ ಯೋಜನೆ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮತ್ತು ಇಟಲಿ ಸರಕಾರದ ದ್ವಿಪಕ್ಷಿಯ ತಾಂತ್ರಿಕ ಸಹಕಾರದ ಪ್ರಕ್ರಿಯೆಯ ಫಲಿತಾಂಶವಾಗಿದೆ. ಇದು ಮೂರು ವರ್ಷಗಳ ಯೋಜನೆ ಆಗಿದ್ದು 2005 ರಲ್ಲಿ ಅಸ್ಥಿತ್ವಕ್ಕೆ ಬಂದಿರುತ್ತದೆ. ಇದರ ಮುಖ್ಯ ಗುರಿ ಕರ್ನಾಟಕ ರಾಜ್ಯದ ಬೀದರ್, ಮತ್ತು ಚಾಮರಾಜ ನಗರ ಜಿಲ್ಲೆಗಳಲ್ಲಿ ಬಾಲಕಾರ್ಮಿಕತೆಯ ನಿರ್ಮೂಲನೆ ಮತ್ತು ಬಾಲಕಾರ್ಮಿಕರ ಪುನರ್‌ವಸತಿಗೊಳಿಸುವುದಾಗಿದೆ.

ಇದು ಒಂದು ಬಾಲಕಾರ್ಮಿಕತೆಯ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಸಂಪೂರ್ಣವಾದ ಯೋಜನೆಯಾಗಿದ್ದು, ನಾಲ್ಕು ಹಂತಗಳಲ್ಲಿ ಅನುಷ್ಠಾನವಾಗುವುದು. ಸಮುದಾಯ, ಕ್ಷೇತ್ರಮಟ್ಟ, ಜಿಲ್ಲಾಮಟ್ಟ ಮತ್ತು ರಾಜ್ಯಮಟ್ಟದಲ್ಲಿ ಅನುಷ್ಠಾನವಾಗುವುದು. ಇದರಿಂದ ಎಲ್ಲಾ ಮಟ್ಟದಲ್ಲಿ ಯೋಜನೆಯ ಪರಿಣಾಮ ಉಂಟಾಗುವುದು.

**ಯೋಜನೆಯ ತಂತ್ರಗಳು:**


- ಸಮುದಾಯ, ಕ್ಷೇತ್ರ ಮತ್ತು ಸಣ್ಣ ಮಟ್ಟದ ಸೇವಾ ಕ್ಷೇತ್ರದಲ್ಲಿ ಚಟುವಟಿಕೆಗಳನ್ನು ಗುರುತಿಸುವುದು.
- ಈ ಚಟುವಟಿಕೆಗಳ ಅಭಿವೃದ್ಧಿ, ಅನ್ವೇಷಣೆ ಇತ್ಯಾದಿಗಳನ್ನು ಹಮ್ಮಿಕೊಳ್ಳುವುದು.
- ಈ ಕ್ಷೇತ್ರಗಳಲ್ಲಿ ಉತ್ತಮವಾದ ಚಟುವಟಿಕೆಗಳನ್ನು ಗುರುತಿಸಿ ಇತರ ಕಡೆಗಳಲ್ಲಿ ಪ್ರಸಾರ ಮಾಡುವುದು ಮತ್ತು ಇವುಗಳ ಮೂಲಕ ಸಮುದಾಯಗಳನ್ನು ಸಶಕ್ತಗೊಳಿಸುವುದು.

ರಾಜ್ಯ ಮಟ್ಟದಲ್ಲಿ ಈ ಯೋಜನೆಯಿಂದ ದೊರಕುವ ಮಾಹಿತಿ ಮತ್ತು ಅನುಭವವನ್ನು ರಾಜ್ಯದ ಯೋಜನೆಯೊಂದಿಗೆ ಹಂಚಿಕೊಳ್ಳಲು ಅವಕಾಶ ಇದೆ. ಇದರಿಂದ ರಾಜ್ಯದ ನೀತಿಗಳು ಮತ್ತು ಯೋಜನೆಗಳು ಹೆಚ್ಚು ಉಪಯುಕ್ತವಾಗಲು ಸಾಧ್ಯವಿದೆ. ಈ ಯೋಜನೆಯಿಂದ ಆಗುವ ಸಂಶೋಧನೆ, ಸಾಕ್ಷಾಧಾರ ಮಾಹಿತಿಗಳನ್ನು ಪ್ರಸರಿಸುವ ಪ್ರಕ್ರಿಯೆ ಮುಂತಾದವುಗಳು. ಕರ್ನಾಟಕ ರಾಜ್ಯ ಬಾಲಕಾರ್ಮಿಕ ಕ್ರಿಯಾಯೋಜನೆಯನ್ನು ಪರಿಷ್ಕರಿಸಲು ಆಸ್ಪದ ಇದೆ.

ಕ್ಷೇತ್ರ ಮಟ್ಟದಲ್ಲಿ ಯೋಜನೆಯು ಬಾಲಕಾರ್ಮಿಕತೆಯ ಬೇಡಿಕೆ ಮತ್ತು ಪೂರೈಕೆಗಳನ್ನು ಗಮನದಲ್ಲಿಟ್ಟುಕೊಂಡಿದೆ. ಬೇಡಿಕೆಯ ವಿಭಾಗದಲ್ಲಿ, ಬಾಲಕಾರ್ಮಿಕತೆಯ ಕಾರಣಗಳನ್ನು ಅನ್ವೇಷಣೆ ಮಾಡಲು ಪ್ರಯತ್ನಿಸುತ್ತಿದೆ ಹಾಗೂ ಮಾಲೀಕರ ಮತ್ತು ಕಾರ್ಮಿಕ ಸಂಘಟನೆಗಳ ಜೊತೆಯಲ್ಲಿ ಕೆಲಸ ಮಾಡುತ್ತಾ ಬಾಲಕಾರ್ಮಿಕ ರಹಿತ ತಾಂತ್ರಿಕತೆಯನ್ನು ಪರಿಚಯಿಸಲು ಮತ್ತು ಕೆಲಸ ಮಾಡುವ ವಾತಾವರಣವನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸುವುದು.

ಪೂರೈಕೆ ವಿಭಾಗದಲ್ಲಿ ಬಾಲಕಾರ್ಮಿಕತೆಯನ್ನು ತಡೆಯಲು ಪೋಷಕರಿಗೆ ಮತ್ತು ಹೆಚ್ಚು ಪ್ರಾಯದ ಬಾಲಕಾರ್ಮಿಕರಿಗೆ ಜೀವನಾಧಾರಗಳನ್ನು ಒದಗಿಸಲು, ಶಿಕ್ಷಣ ಮತ್ತು ಸಾಮಾಜಿಕ ಭದ್ರತೆಗಳನ್ನು ಒದಗಿಸಲಾಗುವುದು. ಅದೇ ರೀತಿಯಲ್ಲಿ ವಿವಿಧ ಭಾಗೀದಾರರ ಮನಸ್ಸನ್ನು ಬದಲಾಯಿಸಲು ಸಹ ಪ್ರಯತ್ನಿಸಲಾಗುವುದು.






**ಕರ್ನಾಟಕ ಬಾಲಕಾರ್ಮಿಕ ಯೋಜನೆಯ ಧ್ಯೇಯಗಳು**

1. ಶಿಕ್ಷಣ ಮತ್ತು ಅರಿವಿನ ಮೂಲಕ ಬಾಲಕಾರ್ಮಿಕತೆ ಆಗದಂತೆ ನೋಡಿಕೊಳ್ಳುವುದು. ಮತ್ತು ಬಾಲಕಾರ್ಮಿಕರನ್ನು ಬಿಡುಗಡೆ ಗೊಳಿಸುವುದು
2. ಸ್ವ ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ ಮೂಲಕ ಗಳಿಕೆಯ ಶಕ್ತಿಯನ್ನು ಹೆಚ್ಚಿಸುವುದು.
3. ಸ್ವ ಸಹಾಯ ಸಂಘಗಳ ಮೂಲಕ ಸಾಮಾಜಿಕ ಬದಲಾವಣೆ ಹಾಗೂ ಸ್ವ ಸಹಾಯ ಸಂಘಗಳ ಒಕ್ಕೂಟ ರಚನೆ.
4. ಸಶಕ್ತಿಗಾಗಿ ಮತ್ತು ಸರಕಾರದ ಕಾರ್ಯಕ್ರಮಗಳ ಲಾಭ ಪಡೆಯಲು ಸಾಂಘಿಕ ಅನುಸಂಧಾನ ನಡೆಸುವುದು.
5. ಹದಿಹರೆಯದವರಿಗೆ ವೃತ್ತಿ ಶಿಕ್ಷಣದ ತರಬೇತಿ.
6. ಸ್ಥಳೀಯ ಉದ್ಯಮಗಳಲ್ಲಿ ಕೆಲಸ ಮಾಡುವ ವಾತಾವರಣವನ್ನು ಉತ್ತಮಪಡಿಸುವುದು.
7. ಸಮುದಾಯದ ಪರಿವೀಕ್ಷಣೆ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದು. ಸಮುದಾಯದ ಪರಿವೀಕ್ಷಣೆ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಸಂಘ ಸಂಸ್ಥೆಗಳ ಶಕ್ತಿಯನ್ನು ಅಭಿವೃದ್ಧಿ ಪಡಿಸುವುದು. ಸ್ವ ಸಹಾಯ ಸಂಘಗಳು, ಮಹಿಳಾ ಮಂಡಲಗಳು, ಯುವಕ ಮಂಡಲಗಳು, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು, ಅಂಗನವಾಡಿ ಸಭೆ, ಹಾಲಿನ ಸೊಸೈಟಿ, ಅರಣ್ಯ ಸಮಿತಿ, ನೀರಾವರಿ ಸಮಿತಿ, ಗ್ರಾಮ ಪಂಚಾಯತ್ ಮುಂತಾದ ಸಂಸ್ಥೆಗಳ ಶಕ್ತಿಯನ್ನು ಹೆಚ್ಚಿಸಿ ಅವರನ್ನು ಬಾಲಕಾರ್ಮಿಕತೆಯ ನಿರ್ಮೂಲನೆಯ ಪರಿವೀಕ್ಷಣೆಯಲ್ಲಿ ತೊಡಗಿಸಿಕೊಳ್ಳುವುದು.
8. ತಳಮಟ್ಟದ ಸಂಸ್ಥೆಗಳನ್ನು, ಕ್ಷೇತ್ರ, ಜಿಲ್ಲಾ ಮತ್ತು ರಾಜ್ಯಮಟ್ಟದ ಸಂಸ್ಥೆಗಳಂತೆ ಬಲವರ್ಧನೆಗೊಳಿಸುವುದು.
9. ಸಂಶೋಧನೆ, ವಿನೂತನ ಕ್ರಮಗಳ ಅನ್ವೇಷಣೆಗಳಿಗೆ ಪ್ರೋತ್ಸಾಹ ನೀಡುವುದು. ಸೇತುಬಂಧ ಶಾಲೆ, ಕಲಿಕೆಯ ಸಾಮಗ್ರಿಗಳ ಅಭಿವೃದ್ಧಿ, ತಾಂತ್ರಿಕತೆಗೆ ಸಂಬಂಧಪಟ್ಟ ವಿಷಯಗಳು, ವೃತ್ತಿ ಶಿಕ್ಷಣ, ಬಾಲಕಾರ್ಮಿಕತೆಯ ಅನೌಪಚಾರಿಕ ವಿಷಯಗಳು, ಮಕ್ಕಳ ಸಾಗಾಟ ವ್ಯವಸ್ಥೆ ಇತ್ಯಾದಿಗಳ ಬಗ್ಗೆ ಸಲಹೆಗಳನ್ನು ವ್ಯವಸ್ಥೆ ಮಾಡುವುದು.





### 3.6.1 ಯೋಜನೆಯ ಪ್ರತಿಫಲಗಳು

- ಸಮುದಾಯದವರಿಗೆ ಬಲವರ್ಧನೆ ಮಾಡಿದರೆ ಮತ್ತು ಸರಿಯಾದ ಮಾಹಿತಿ ಒದಗಿಸಿದರೆ, ಯೋಜನೆಯಿಂದ ಒದಗಿಸಲ್ಪಡುವ ಕಾರ್ಯಕ್ರಮಗಳು ಸ್ವಯಂ ನಡೆದುಕೊಂಡು ಹೋಗಲು ದಾರಿ ಆಗುವುದು. ಬಾಲಕಾರ್ಮಿಕತೆ ಬಗ್ಗೆ ಸಮುದಾಯಕ್ಕೆ ಮಾಹಿತಿ ಮತ್ತು ಅರಿವು ಕೊಡಲು ಹೊಸ ಹೊಸ ಮಾದರಿಗಳನ್ನು ಉಪಯೋಗಿಸಲಾಗುವುದು. ಬಾಲಕಾರ್ಮಿಕತೆ ನಿರ್ಮೂಲನದ ಬಗ್ಗೆ ಇರುವ ಉತ್ತಮವಾದ ಪೋಸ್ಟರ್‌ಗಳನ್ನು ಉಪಯೋಗಿಸಲಾಗುತ್ತಿದೆ. ಇದಲ್ಲದೆ ಈ ಕೆಳಗಿನ ಐ.ಇ.ಸಿ ವಸ್ತುಗಳ ಪ್ರಕಾರಗಳನ್ನು ಉಪಯೋಗಿಸಲಾಗುವುದು.
  - ಗೋಡೆ ಬರಹ
  - ಡಾಕ್ಯುಮೆಂಟರಿ ವಿಡಿಯೋ ಸಿನೆಮಾಗಳು
  - ಗೊಂಬೆಗಳ ಆಟ
  - ಬೀದಿನಾಟಕ

ಬೀದಿ ನಾಟಕ ಮತ್ತು ಗೊಂಬೆ ಆಟಗಳು ಶಾಲಾ ಮಕ್ಕಳ ಮತ್ತು ಬಾಲಕಾರ್ಮಿಕರ ಮನಸ್ಸನ್ನು ಪರಿವರ್ತಿಸಲು ಸಹಕಾರಿ ಆಗುವುದು. ಬಾಲಕಾರ್ಮಿಕತೆಯ ನಿರ್ಮೂಲನೆ ಬಗ್ಗೆ ಇರುವ ಬೀದಿ ನಾಟಕಗಳ ಹೊತ್ತಿಗೆಗಳನ್ನು ಹೊರತರಲಾಗಿದೆ. ಇವನ್ನು ಆಸಕ್ತರು ಉಪಯೋಗಿಸಬಹುದಾಗಿದೆ.

- ಸಮುದಾಯದ ಪರಿವೀಕ್ಷಣೆ ವ್ಯವಸ್ಥೆಯನ್ನು ರೂಪಿಸಲಾಗುವುದು. ಈ ಕೆಳಗಿನ ಸಂಸ್ಥೆಗಳ ಸದಸ್ಯರು ಮುಖ್ಯ ಪಾತ್ರ ವಹಿಸಬಹುದು.
  - ಎಸ್.ಡಿ.ಎಂ.ಸಿ ಸದಸ್ಯರು
  - ಮಹಿಳಾ ಮಂಡಲ ಸದಸ್ಯರು
  - ಯುವಕ ಮಂಡಲ ಸದಸ್ಯರು
  - ಅಂಗನವಾಡಿ ಸಮಿತಿ
  - ಸ್ವ ಸಹಾಯ ಸಂಘಗಳ ಸದಸ್ಯರು
  - ಗ್ರಾಮ ಪಂಚಾಯತ್ ಸದಸ್ಯರು

ಇವರು ಬಿಡುಗಡೆ ಹೊಂದಿದ ಮತ್ತು ಪುನರ್ವಸತಿ ಆಗಿರುವ ಬಾಲಕಾರ್ಮಿಕರ ಶಿಕ್ಷಣದ ಅಭಿವೃದ್ಧಿ ಇತ್ಯಾದಿಗಳನ್ನು ಪರಿವೀಕ್ಷಣೆ ಮಾಡುವರು.

- ಯೋಜನೆಯು ಕುಟುಂಬವನ್ನು ಒಂದು ಘಟಕವಾಗಿ ತೆಗೆದುಕೊಂಡು, ಕುಟುಂಬದ ಅಭಿವೃದ್ಧಿಯ ಕಡೆಗೆ ಗಮನ ಕೊಡುತ್ತಿದೆ. ಇದರಿಂದ ಬಾಲಕಾರ್ಮಿಕರನ್ನು ಕೆಲಸದಿಂದ ಬಿಡುಗಡೆ ಮಾಡಿದಾಗ, ಕುಟುಂಬದ ಇತರ ಸದಸ್ಯರು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಲಾಭವನ್ನು ಪಡೆಯಬಹುದಾಗಿದೆ. ಯೋಜನೆಯ ಲಾಭವು ಇಡೀ ಕುಟುಂಬಕ್ಕೆ ಸಿಗುವುದರಿಂದ, ಕುಟುಂಬದ ಇತರ ಸದಸ್ಯರು ಸಹ ಲಾಭ ಪಡೆಯಲು ಅವಕಾಶ ಇದೆ.
- ಕುಟುಂಬಕ್ಕೆ ಜೀವನಾಧಾರ ಒದಗಿಸುವ ಕಸುಬುಗಳನ್ನು/ ಉಪಕಸುಬುಗಳನ್ನು ನಡೆಸಿ ಹೆಚ್ಚು ಸಂಪಾದಿಸುವ ಅಥವಾ ಸಂಪಾದನೆ ಹೆಚ್ಚು ಮಾಡುವಂತಾಗುವುದು (ದುರ್ಬಲ ವರ್ಗದ ಪೋಷಕರಿಗೆ ಮತ್ತು ಹದಿಹರೆಯದ ಯುವಕರಿಗೆ)




- ಯೋಜನೆಯು ಉದ್ಯೋಗ ಮತ್ತು ಉದ್ಯೋಗಸತ್ವವನ್ನು ಮೂರು ಹಂತಗಳಲ್ಲಿ ಪ್ರಯತ್ನಿಸುತ್ತಿದೆ. ಪ್ರಾಥಮಿಕ ಹಂತ (ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸಗಳು) ದ್ವಿತೀಯ ಹಂತ (ಉತ್ಪಾದನೆ ಮತ್ತು ಮಾರಾಟ) ಮತ್ತು ತೃತೀಯ ಹಂತ (ಸೇವಾಕ್ಷೇತ್ರ), ಯೋಜನೆಯು ಈ ಮೂರು ವಿಭಾಗಗಳಲ್ಲಿ ಅನುಷ್ಠಾನ ಗೊಳಿಸಬಹುದಾದ ಅನುಕೂಲಕರವಾದ, ಪಾಲಿಸಬಹುದಾದ ಮತ್ತು ಉಪಯೋಗಿಸಬಹುದಾದ ವೃತ್ತಿ ಶಿಕ್ಷಣದ ಬಗ್ಗೆ ಸಂಶೋಧನೆ ನಡೆಸುವುದು.
- ಬಾಲಕಾರ್ಮಿಕತೆಯ ಕಾರಣಗಳು ಮತ್ತು ಪರಿಣಾಮಗಳ ಬಗ್ಗೆ ಸರಿಯಾದ ಚಿತ್ರಣ ಇರುವುದಿಲ್ಲ. ಕಾರ್ಮಿಕ ಕಾನೂನಿನ ಪ್ರಕಾರ 14 ವರ್ಷಗಳ ನಂತರ ಮಕ್ಕಳು ಕೆಲಸಮಾಡಬಹುದಾಗಿದೆ. ಆದರೆ ವೃತ್ತಿಶಿಕ್ಷಣವು 10+2 ಹಂತದಲ್ಲಿ ಮಾತ್ರ ಸಿಗುತ್ತದೆ. ಅಂದರೆ 18+ ವರ್ಷಗಳ ನಂತರ ಕಾರ್ಮಿಕರಾದರೆ, ಅವರು ಯಾವುದಾದರೂ ವೃತ್ತಿ ಶಿಕ್ಷಣದ ಲಾಭ ಪಡೆದುಕೊಳ್ಳಬಹುದು ಇಲ್ಲದೆ ಇದ್ದರೆ ಅವರು ಕೌಶಲ್ಯರಹಿತ ಕಾರ್ಮಿಕರಾಗಬೇಕಾಗುವುದು. ಅವರಿಗೆ ಉತ್ತಮ ಸಂಪಾದನೆ ಇರುವುದಿಲ್ಲ. ಇದರಿಂದ ಅವರು ಬಡತನದಿಂದ ಜೀವನ ಸವೆಸಬೇಕಾಗುವುದು. ಇದನ್ನು ತಪ್ಪಿಸಲು 14–18 ವರ್ಷದೊಳಗೆ ವೃತ್ತಿ ಶಿಕ್ಷಣ ದೊರಕಿಸುವ ವ್ಯವಸ್ಥೆ ಆಗಬೇಕು.
- ಸೇತುಬಂಧ ಶಾಲೆಯಲ್ಲಿ ಕಲಿಸಲು ಅನುಕೂಲಕರವಾದ ಮತ್ತು ಅವಶ್ಯಕವಾದ ಕಲಿಕಾ ವಸ್ತುಗಳನ್ನು ತಯಾರಿಸುವುದು.
- ಮಕ್ಕಳ ಚಲನವಲನಗಳನ್ನು ಗಮನದಲ್ಲಿ ಇಡುವ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿ ಉಪಯೋಗಿಸುವ ವ್ಯವಸ್ಥೆ ಆಗಬೇಕು.
- ಸಾಮಾಜಿಕ ಭದ್ರತೆ ಮತ್ತು ಬಾಲಕಾರ್ಮಿಕ ಪಾಲಿಸಿಗಳ ಬಗ್ಗೆ ಸಂಶೋಧನೆಯನ್ನು ಔಪಚಾರಿಕ ರಂಗದಲ್ಲಿನ ಬಾಲಕಾರ್ಮಿಕತೆಯ ನಿವಾರಣೆಗೆ ತಾಂತ್ರಿಕತೆಯನ್ನು ಅಭಿವೃದ್ಧಿಗೊಳಿಸುವುದು ಮತ್ತು ಮಾಲೀಕರ ಮನವೊಲಿಸುವುದು.
- ತನಗೆ ವಹಿಸಿದ ಕೆಲಸವನ್ನು ನಿರ್ವಹಿಸಲು, ಯೋಜನೆಯು ಕಾರ್ಮಿಕರ ಸಂಘಟನೆ, ಮಾಲೀಕರ ಸಂಘಟನೆ, ಸರ್ಕಾರೇತರ ಸಂಸ್ಥೆಗಳು, ಸಂಘ ಸಂಸ್ಥೆಗಳು ಎಲ್ಲಾ ಹಂತ ಸರ್ಕಾರಿ ನೌಕರರು ಸೇರಿ ಕೆಲಸ ಮಾಡುವುದು.

ಈ ಯೋಜನೆಯಿಂದ

- ➢ 9–14 ವರ್ಷದ 5000 ಬಾಲಕಾರ್ಮಿಕ ಮಕ್ಕಳನ್ನು ಗುರುತಿಸಿ ಅವರನ್ನು ಬಿಡುಗಡೆಗೊಳಿಸಿ, ಸೇತುಬಂಧ ಶಾಲೆಗೆ ಸೇರಿಸುವುದು. ಇದಕ್ಕಾಗಿ ಸೇತುಬಂಧ ಶಾಲೆಗಳನ್ನು ತೆರೆಯಲಾಗುವುದು.
- ➢ 14–18 ವರ್ಷದ 4000 ಹದಿಹರೆಯದವರಿಗೆ ವೃತ್ತಿಶಿಕ್ಷಣ ಒದಗಿಸುವುದು. ಇದರಿಂದ ಅವರಿಗೆ ಕೆಲಸ ಸಿಗುವ ಅವಕಾಶ ಹೆಚ್ಚಾಗುವುದು.
- ➢ 1000 ಜನರಿಗೆ (ಬಾಲಕಾರ್ಮಿಕರ ಮನೆಯವರು) ವೃತ್ತಿ ಶಿಕ್ಷಣ ಒದಗಿಸುವುದು.
- ➢ 180 ಸ್ವ ಸಹಾಯ ಸಂಘಗಳನ್ನು ಒಕ್ಕೂಟಗೊಳಿಸುವುದು. ಇದರಿಂದ ಸಾಂಘಿಕವಾಗಿ ಅವರು ತಮ್ಮನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಕಾರಿ ಆಗುವುದು.
- ➢ 100 ಜನ ಮಾಲೀಕರಿಗೆ ತಮ್ಮ ವ್ಯಾಪಾರ ವಹಿವಾಟುಗಳನ್ನು ಅಭಿವೃದ್ಧಿಗೊಳಿಸಲು ಸಹಕಾರ ಕೊಡುವುದು.





## 3.7 ಭಾರತದ ಸಂವಿಧಾನದಲ್ಲಿರುವ ಮಕ್ಕಳ ಹಕ್ಕುಗಳ ಬಗ್ಗೆ ಹಾಗೂ ಬಾಲಕಾರ್ಮಿಕತೆಗೆ ಸಂಬಂಧಪಟ್ಟಂತೆ ಇರುವ ವಿಶೇಷ ಪ್ರಾವಿಷನ್‌ಗಳು

ಭಾರತದ ಸಂವಿಧಾನದಲ್ಲಿ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಒದಗಿಸುವ ಬಗ್ಗೆ, ಮಕ್ಕಳಿಗೆ ರಕ್ಷಣೆ ಒದಗಿಸುವ ಬಗ್ಗೆ, ಸಂವಿಧಾನದಲ್ಲಿ ಹಲವಾರು ಪ್ರಾವಿಷನ್‌ಗಳನ್ನು ಮಾಡಿರುತ್ತಾರೆ.

ಅವುಗಳು ಈ ಕೆಳಗಿನಂತಿವೆ

**ಆರ್ಟಿಕಲ್ – 23** – ಇದು ಮಾನವ ಸಾಗಾಟ ಮತ್ತು ಕಡ್ಡಾಯ ಕೆಲಸದ ಬಗ್ಗೆ ಇದೆ. ಇದರಲ್ಲಿ ಮಾನವ ಸಾಗಾಟ, ಬೇಡುವುದು (ಭಿಕ್ಷೆ ಎತ್ತುವುದು) ಕಡ್ಡಾಯ ಕೆಲಸ ಇತ್ಯಾದಿ ನಿಷೇಧಿಸಲಾಗಿದೆ. ಇವನ್ನು ಉಲ್ಲಂಘಿಸಿದರೆ ಕಾನೂನಿನಂತೆ ಶಿಕ್ಷೆಗೆ ಒಳಪಡಿಸಬಹುದು.


**ಆರ್ಟಿಕಲ್ – 24** – ಮಕ್ಕಳನ್ನು ಕಾರ್ಖಾನೆಗಳಲ್ಲಿ ಕೆಲಸಕ್ಕೆ ತೊಡಗಿಸಿಕೊಳ್ಳುವುದರ ನಿಷೇಧದ ಬಗ್ಗೆ ಇದೆ. ಇದರ ಪ್ರಕಾರ 14 ವರ್ಷದ ಕೆಳಗಿನ ಮಕ್ಕಳನ್ನು ಯಾವುದೇ ಕಾರ್ಖಾನೆಗಳಲ್ಲಿ, ಗಣಿಗಳಲ್ಲಿ ಅಥವಾ ಯಾವುದೇ ಅಪಾಯಕಾರಿ ಕೆಲಸದಲ್ಲಿ ತೊಡಗಿಸಿ ಕೊಳ್ಳುವುದನ್ನು ನಿಷೇಧಿಸಲಾಗಿದೆ.

**ಆರ್ಟಿಕಲ್ – 39 (ಇ) ಮತ್ತು (ಎಫ್)** – ಇದು ಸರ್ಕಾರ ಅನುಸರಿಸಬೇಕಾದ ಕೆಲವು ನಿಯಮಗಳ ಬಗ್ಗೆ ಇದೆ. ಇದರ ಪ್ರಕಾರ ಸರಕಾರ ಈ ಕೆಳಗಿನವುಗಳನ್ನು ಒದಗಿಸಬೇಕಾಗಿದೆ.

- ಕಾರ್ಮಿಕರ ಆರೋಗ್ಯ ಮತ್ತು ಶಕ್ತಿಯ ಬಗ್ಗೆ ನಿಯಮಗಳನ್ನು ರೂಪಿಸಬೇಕು (ಪುರುಷರು ಮತ್ತು ಮಹಿಳೆಯರು)
- ಎಳೆ ಪ್ರಾಯದ ಮಕ್ಕಳ ವಯಸ್ಸನ್ನು ದುರುಪಯೋಗಪಡಿಸಿಕೊಳ್ಳಬಾರದು.
- ನಾಗರೀಕರಿಗೆ ಅವರ ಪ್ರಾಯ ಮತ್ತು ಶಕ್ತಿಗೆ ಅನುಗುಣವಾಗದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಾರದು.
- ಮಕ್ಕಳಿಗೆ ಅವರು ಆರೋಗ್ಯಕರವಾಗಿ ಬೆಳೆಯಲು ಅವಶ್ಯಕವಾದ ಎಲ್ಲಾ ಸವಲತ್ತುಗಳನ್ನು, ಸಹಕಾರವನ್ನು ಒದಗಿಸಬೇಕು. ಅವರು ಮರ್ಯಾದೆಯಲ್ಲಿ ಹಾಗೂ ಸ್ವಾತಂತ್ರ್ಯದಲ್ಲಿ ಬೆಳೆಯಲು ಅವಕಾಶ ಮಾಡಿಕೊಡಬೇಕು.

**ಆರ್ಟಿಕಲ್ – 21(ಎ)** – 6–14 ವರ್ಷದ ಎಲ್ಲಾ ಮಕ್ಕಳಿಗೆ ವೆಚ್ಚವಿಲ್ಲದ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸಬೇಕು.





## 3.8 ಪ್ರಸ್ತುತ ವಿವಿಧ ಕಾನೂನುಗಳಲ್ಲಿ ಇರುವ ಕಾನೂನು ಬದ್ದ ಅವಕಾಶಗಳು

**1. ಮಕ್ಕಳ (ಕೂಲಿಗಳಾಗಿ ಒತ್ತೆ ಇಡುವುದು) ಕಾಯಿದೆ, 1993**

ಈ ಕಾನೂನು ಮಕ್ಕಳನ್ನು ಒತ್ತೆ ಇಡುವುದನ್ನು ಪ್ರತಿಬಂಧಿಸುತ್ತದೆ.

**2. ಕಾರ್ಖಾನೆಗಳ ಕಾಯಿದೆ, 1948**

1948 ರ ಕಾರ್ಖಾನೆಗಳ ಕಾಯಿದೆಯ 67 ನೆಯ ಪರಚ್ಛೇಧದ ಪ್ರಕಾರ, 14 ವರ್ಷ ಪೂರ್ಣಗೊಳ್ಳದ ಯಾವ ಮಗುವನ್ನೂ ಯಾವುದೇ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಬಿಡುವ ಹಾಗಿಲ್ಲ.

**3. ಪ್ಲಾಂಟೇಶನ್ ಲೇಬರ್ ಆ್ಯಕ್ಟ್, 1951**

ಈ ಕಾಯಿದೆಯ 24 ನೆಯ ಪರಿಚ್ಛೇಧವು ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಳ್ಳುವುದನ್ನು ನಿಷೇಧಿಸುತ್ತದೆ. ಇದು 5 ಅಥವಾ ಅದಕ್ಕಿಂತ ಹೆಚ್ಚು ಹೆಕ್ಟೇರ್ ಇರುವ 15 ಅಥವಾ ಹೆಚ್ಚು ಮಂದಿ ಕಾರ್ಮಿಕರಿರುವ ಚಹಾ, ಕಾಫಿ, ರಬ್ಬರ್, ಏಲಕ್ಕಿ ಇತ್ಯಾದಿ ಎಲ್ಲ ರೀತಿಯ ತೋಟಗಾರಿಕೆಗಳಿಗೂ ಅನ್ವಯಿಸುತ್ತದೆ.

**4. ಗಣಿಗಳ ಕಾಯಿದೆ, 1952**

ಈ ಕಾಯಿದೆ ಹೀಗೆ ಹೇಳುತ್ತದೆ. “ನೆಲಮಟ್ಟದಿಂದ ಕೆಳಗೆ ಅಥವಾ ತೆರೆದ ಬಯಲಿನಲ್ಲಿ ನಡೆಯುತ್ತಿರುವ ಗಣಿಗಾರಿಕೆಯಲ್ಲಿ ಯಾವುದೇ ಮಗುವನ್ನು ಕೆಲಸಕ್ಕೆ ನೇಮಿಸುವಂತಿಲ್ಲ”

**5. ಮರ್ಚೆಂಟ್ ಶಿಪ್ಪಿಂಗ್ ಆ್ಯಕ್ಟ್, 1958**

ಇದರ 21 ನೆಯ ಪರಿಚ್ಛೇಧದ ಪ್ರಕಾರ, ಯಾವುದೇ ಮಗುವನ್ನು , ಯಾವುದೇ ರೀತಿಯಲ್ಲಿ, ಯಾವುದೇ ಮೋಟಾರು ಸಾರಿಗೆ ಸಂಸ್ಥೆಗಳಲ್ಲಿ ಕೆಲಸ ಮಾಡಲು ಬಿಡುವ ಹಾಗಿಲ್ಲ.

**6. ಅಪ್ರೆಂಟಿಸ್‌ಶಿಪ್ ಆ್ಯಕ್ಟ್, 961**

ಇದರ 3ನೇ ಪರಿಚ್ಛೇದ ಹೀಗೆ ಹೇಳುತ್ತದೆ. “ವರ್ಷ ಮೀರಿದ ಹೊರತು, ಹಾಗೂ ನಿಗದಿತ ದೈಹಿಕ ಹಾಗೂ ಶೈಕ್ಷಣಿಕ ಸಾಮರ್ಥ್ಯ ಹೊಂದಿದ ಯಾರೊಬ್ಬರೂ ಯಾವುದೇ ರೀತಿಯ ನಿಗದಿತ ವೃತ್ತಿಗಳಲ್ಲಿ ಅಪ್ರೆಂಟಿಸ್‌ಶಿಪ್ ತರಬೇತಿ ಪಡೆಯುವ ಹಾಗಿಲ್ಲ.”

**7. ಬೀಡಿ ಮತ್ತು ಸಿಗಾರ್ ನೌಕರರ ಕಾಯಿದೆ, 1966**

ಈ ಕಾಯಿದೆಯ 24ನೆಯ ಪರಿಚ್ಛೇಧ ಹೀಗಿದೆ. “ಯಾವುದೇ ಕೈಗಾರಿಕೆಗಳ ಆವರಣದಲ್ಲಿ ಯಾವುದೇ ಮಗುವಿನ ಅಗತ್ಯ ಇರಕೂಡದು ಹಾಗೂ ಕೆಲಸ ಮಾಡಲು ಅವಕಾಶ ಕೊಡಬಾರದು.”

ಕೈಗಾರಿಕಾ ಆವರಣ ಎಂದರೇನೆಂಬುದನ್ನು 2(1) ವಿಧಿಯು ವಿವರಿಸಿದೆ.



**8. ಜೀತ ಕಾರ್ಮಿಕ ಪದ್ಧತಿ ನಿರ್ಮೂಲನಾ ಕಾಯಿದೆ, 1966**


ಈ ಕಾಯಿದೆಯ 4 ನೆಯ ಪರಿಚ್ಛೇಧ ಹೀಗೆ ಹೇಳುತ್ತದೆ. "ಜೀತಪದ್ಧತಿಯನ್ನು ರದ್ದುಗೊಳಿಸಲಾಗಿದೆ. ಈ ಕಾಯಿದೆ ಜಾರಿಗೆ ಬಂದ ಮೇಲೆ ಯಾವೊಬ್ಬನೂ ಯಾರನ್ನೂ ಜೀತಕ್ಕೆ ಅಥವಾ ಬಲವಂತದ ಕೆಲಸಕ್ಕೆ ಹಚ್ಚುವ ಹಾಗಿಲ್ಲ. ಹಾಗೂ ಜೀತಕ್ಕೆಂದು ಯಾವುದೇ ಮುಂಗಡ ಕೊಡುವಂತಿಲ್ಲ."

**9. ಬಾಲಕಾರ್ಮಿಕ ತಡೆ ಹಾಗೂ ನಿಯಂತ್ರಣ ಕಾಯಿದೆ, 1986**

ಈ ಕಾಯಿದೆಯ 3ನೇ ಪರಿಚ್ಛೇಧವು ಶೆಡ್ಯೂಲ್‌ನಲ್ಲಿ ನಮೂದಿಸಿದ ಕೆಲವು ವೃತ್ತಿಗಳಲ್ಲಿ ಹಾಗೂ ಪ್ರಕ್ರಿಯೆಗಳಲ್ಲಿ ಮಕ್ಕಳು ಕೆಲಸ ಮಾಡುವುದನ್ನು ನಿಷೇಧಿಸಿದೆ. ಈ ಕಾಯಿದೆಯು ಕಾರ್ಖಾನೆಗಳ ಕಾಯಿದೆ, 1948 ರಲ್ಲಿ ನಿರೂಪಿಸಿರುವ ಕಾರ್ಖಾನೆಗಳನ್ನು ಹೊರತುಪಡಿಸಿ, ಉಳಿದ ಕಾರ್ಖಾನೆಗಳಿಗೆ ಅನ್ವಯವಾಗುತ್ತದೆ.

ಬಾಲಕಾರ್ಮಿಕ ಕಾಯಿದೆಯ ಅಡಿಯಲ್ಲಿ ಬರುವ ಎಲ್ಲ ಅಪರಾಧಗಳು ಹಾಗೂ ಕಾರ್ಖಾನೆಗಳ ಕಾಯಿದೆ, 1948, ಗಣಿ ಕಾಯಿದೆ 1952, ಮರ್ಚೆಂಟ್ ಶಿಪ್ಪಿಂಗ್ ಕಾಯಿದೆ 1958 ಮತ್ತು ಮೋಟಾರು ಸಾರಿಗೆ ಕೆಲಸಗಾರರ ಕಾಯಿದೆ 1961 ಇವುಗಳಿಗೆ ಸಂಬಂಧಿಸಿದ ಬಾಲಕಾರ್ಮಿಕ ನಿಯಮಗಳ ಉಲ್ಲಂಘನೆಯ ಈ ಕಾಯಿದೆಯ 14ನೆಯ ಪರಿಚ್ಛೇಧದ ಪ್ರಕಾರ ಮೊಕದ್ದಮೆಗೆ ಅರ್ಹವಾಗಿರುತ್ತದೆ.





## 3.9 ಹದಿಹರೆಯದ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾನೂನು 2000

18 ವರ್ಷ ಮೀರದ ವ್ಯಕ್ತಿಗಳನ್ನು ಹದಿ ಹರೆಯದವರು ಎಂದು ಕರೆಯಲಾಗುವುದು.

### 3.9.1 ಹದಿಹರೆಯದ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾನೂನು 2000

ಇದು ಕಾನೂನಿನೊಂದಿಗೆ ಘರ್ಷಣೆಯಲ್ಲಿರುವ ಹದಿಹರೆಯದ ಹಾಗೂ ಮಕ್ಕಳ ಪಾಲನೆ ಮತ್ತು ರಕ್ಷಣೆಗೆ ಅವಶ್ಯಕವಾಗಿರುವ ಸಂಬಂಧ ಕಾನೂನುಗಳ ಕ್ರೋಢಿಕರಣ ಮತ್ತು ತಿದ್ದುಪಡಿಯ ಕಾನೂನು ಆಗಿದೆ. ಇದು ಮಕ್ಕಳಿಗೆ ಉತ್ತಮವಾದ ಪಾಲನೆ, ರಕ್ಷಣೆ ಹಾಗೂ ಚಿಕಿತ್ಸೆಯನ್ನು ಒದಗಿಸುತ್ತಿದೆ. ಮಕ್ಕಳಿಗೆ ಸಂಬಂಧಪಟ್ಟ ನಿರ್ಣಯ / ತೀರ್ಪುಗಳನ್ನು ತೆಗೆದುಕೊಳ್ಳುವಾಗ "ಮಕ್ಕಳ ಸ್ನೇಹಿ" ವಿಧಾನವನ್ನು ಅನುಸರಿಸುವುದು ಮತ್ತು ಈ ಕಾನೂನಿನ ಚೌಕಟ್ಟಿನಲ್ಲಿ ಸ್ಥಾಪಿಸಲ್ಪಟ್ಟ ಸಂಸ್ಥೆಗಳ ಮುಖಾಂತರ ಅವರ ಪುನರ್ವಸತಿಗೆ ವ್ಯವಸ್ಥೆ ಮಾಡುವುದು.

ಇದು ಕ್ರಿಮಿನಲ್ ನ್ಯಾಯಕ್ಕಿಂತ ಭಿನ್ನವಾಗಿದ್ದು, ಇದು ಮಕ್ಕಳ ಅಭಿವೃದ್ಧಿಯ ಬಗ್ಗೆ ಹೆಚ್ಚು ಒತ್ತು ಕೊಡುವುದು. ಇಲ್ಲಿ ಸರಕಾರ ಹೆಚ್ಚು ಹೆಚ್ಚು ಸುಗಮಕಾರರಾಗಿ ಕೆಲಸ ಮಾಡುತ್ತಿದ್ದ ಕಾನೂನಿನ ಅನುಷ್ಠಾನಕ್ಕೆ ಹೆಚ್ಚು ಹೆಚ್ಚು ಸರಕಾರೇತರ ಸಂಸ್ಥೆಗಳನ್ನು ಹಾಗೂ ಸ್ಥಳೀಯ ಸಂಸ್ಥೆಗಳನ್ನು ತೊಡಗಿಸಿಕೊಳ್ಳುತ್ತಿದೆ. ಕಾನೂನಿನೊಂದಿಗೆ ಘರ್ಷಣೆಯಲ್ಲಿರುವ ಹಾಗೂ ಪಾಲನೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳ ಲಾಲನೆ, ಪಾಲನೆ, ರಕ್ಷಣೆ, ಅಭಿವೃದ್ಧಿ, ಪುನರ್ವಸತಿ ಇತ್ಯಾದಿಗಳ ಬಗ್ಗೆ ಹೆಚ್ಚು ಹೆಚ್ಚು ಸಮುದಾಯವನ್ನು ಹಾಗೂ ಕುಟುಂಬವನ್ನು ತೊಡಗಿಸಿಕೊಳ್ಳುವುದು ಈ ಕಾನೂನಿನ ವಿಶೇಷವಾಗಿದೆ.

ಈ ಕಾನೂನನ್ನು ಸಂಯುಕ್ತ ರಾಷ್ಟ್ರ ಸಂಘದ, ಮಕ್ಕಳ ಹಕ್ಕುಗಳ ಸಮಾವೇಶದ ನಿರ್ಣಯಕ್ಕೆ ಅನುಗುಣವಾಗಿ ರಚಿಸಲಾಗಿದೆ. ಇದನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಹದಿಹರೆಯದ ಕಾನೂನು 1986 ರಲ್ಲಿ ಒದಗಿಸಿರುವ ಸೌಕರ್ಯಗಳನ್ನು ಉಪಯೋಗಿಸಿಕೊಂಡು ಅನುಷ್ಠಾನ ಮಾಡಬೇಕಾಗಿದೆ.

ಕಾನೂನನ್ನು 2000 ರಲ್ಲಿ ಜಾರಿ ಮಾಡಿದ್ದರೂ ಸಹ, ಹಲವಾರು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಇನ್ನೂ ಅನುಷ್ಠಾನ ಮಾಡಬೇಕಾಗಿದೆ. ಅನುಷ್ಠಾನದ ಹಂತದಲ್ಲಿ, ಹದಿಹರೆಯದ ನ್ಯಾಯದ ವ್ಯವಸ್ಥೆಯ ಮಕ್ಕಳಿಗೆ ಹಾಗೂ ಅವರ ಪರವಾಗಿ ವ್ಯವಹರಿಸುವ ಪೋಲೀಸರು, ಸರಕಾರೇತರ ಸಂಸ್ಥೆಗಳು, ಸಾಮಾಜಿಕ ಕಾರ್ಯಕರ್ತರು, ಪೋಷಕರು ಅಥವಾ ಯಾವುದೇ ವ್ಯಕ್ತಿಗಳಿಗೆ ಸುಲಭವಾಗಿ ಸಿಗುವಂತಾಗಬೇಕು. ಕುಟುಂಬಗಳಿಗೆ ಹಾಗೂ ಸರಕಾರೇತರ ಸಂಸ್ಥೆಗಳಿಗೆ ಸಂಬಂಧ ಕಲ್ಪಿಸಬಹುದಾದ ಅನೌಪಚಾರಿಕ ಸ್ವರೂಪದ ಸೌಕರ್ಯ ರಚನೆಯ ಬೇಡಿಕೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

2001 ರ ಕಾನೂನಲ್ಲಿರುವ ಹೆಚ್ಚಿನ ವ್ಯಾಖ್ಯಾನಗಳು, ವಿಷಯಗಳು 1986 ರ ಕಾನೂನಿನಲ್ಲಿ ನಮೂದಿಸಿದವುಗಳೇ ಆಗಿವೆ. ಕೆಲವೊಂದು ವ್ಯಾಖ್ಯಾನಗಳ ಅರ್ಥವನ್ನು ವಿಸ್ತರಿಸಲಾಗಿದೆ ಹಾಗೂ ಕೆಲವೊಂದು ಹೊಸ ವ್ಯಾಖ್ಯಾನಗಳನ್ನು ಸಂಯುಕ್ತ ರಾಷ್ಟ್ರ ಸಂಘದ ಮಕ್ಕಳ ಹಕ್ಕುಗಳ ಸಮಾವೇಶದ ನಿರ್ಣಯಗಳನ್ನು ಗಮನಕ್ಕೆ ತೆಗೆದುಕೊಂಡು ಅಳವಡಿಸಲಾಗಿದೆ. ಉಪನಿಯಮ(ಇ) "ಪಾಲನೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳ" ವ್ಯಾಖ್ಯಾನವನ್ನು ಕೊಡುತ್ತಿದೆ. ಹಿಂದೆ 1986 ರ ಕಾನೂನಿನಲ್ಲಿ ಇವರನ್ನು ಗಣನೆಗೆ ತೆಗೆದುಕೊಳ್ಳದೆ ಇರುವ ಮಕ್ಕಳು ಎಂದು ಕರೆಯಲಾಗುತ್ತಿತ್ತು. ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳ ವ್ಯಾಖ್ಯಾನ ಮತ್ತು ಸ್ಕೋಪ್ ಅನ್ನು ವಿಸ್ತರಿಸಲಾಗಿದೆ. ಮಕ್ಕಳ ಹಕ್ಕುಗಳ ಸಮಾವೇಶದ ನಿರ್ಣಯಗಳಿಗೆ ಅನುಗುಣವಾಗಿ, ಕಾನೂನಿನಲ್ಲಿ ಹದಿಹರೆಯದ ವ್ಯಕ್ತಿ ಅಥವಾ ಮಕ್ಕಳ ವಯೋಮಿತಿಯನ್ನು ಎಲ್ಲಾ ಸಂದರ್ಭಗಳಲ್ಲಿ ಒಂದೇ ಇರಬೇಕು ಎಂಬುದಾಗಿ ಪರಿಗಣಿಸಲಾಗಿದೆ. ಅದು 18 ವರ್ಷ ತುಂಬಿರಬಾರದು.



ಹಳೆ ಕಾನೂನಿನಲ್ಲಿ ಇದ್ದ ಅಪರಾಧಿ ಬಾಲಕರು / ಹದಿಹರೆಯದವರು ಬದಲಾಗಿ ಹೊಸ ಕಾನೂನಿನಲ್ಲಿ "ಕಾನೂನಿನೊಂದಿಗೆ ಘರ್ಷಣೆಯಲ್ಲಿರುವ ಬಾಲಕ / ಹದಿಹರೆಯದವರು" ಎಂಬುದನ್ನು ಸೇರಿಸಲಾಗಿದೆ. ಅಪರಾಧಿ ಎಂಬ ಶಬ್ದವನ್ನು ಕೈ ಬಿಡಲಾಗಿದೆ. ಇದರಿಂದ ಕಾನೂನು ಹೆಚ್ಚು ಸ್ನೇಹಯುತವಾಗಿದೆ. ಹೊಸ ಕಾನೂನಿನಲ್ಲಿ ಸ್ಥಳೀಯ ಸಂಸ್ಥೆಗಳನ್ನು ಸೇರಿಸಲಾಗಿದೆ. ಇವುಗಳಲ್ಲಿ ಮುಖ್ಯವಾದವುಗಳು ಗ್ರಾಮ ಪಂಚಾಯತ್, ಜಿಲ್ಲಾ ಪಂಚಾಯತ್ ಸಂಸ್ಥೆಗಳು.

**3.9.2 ಬಾಲಕಾರ್ಮಿಕರ / ಹದಿಹರೆಯದವರ ಶೋಷಣೆ (26):** ಈ ನಿಯಮದ ಪ್ರಕಾರ ಯಾರಾದರೂ ಹದಿಹರೆಯದವರನ್ನು ಅಪಾಯಕಾರಿ ಕೆಲಸದಲ್ಲಿ ತೊಡಗಿಸಿದ್ದು, ಅವರನ್ನು ಜೀತದಾಳಾಗಿ ಇಟ್ಟುಕೊಂಡಿದ್ದು, ಅವರ ಸಂಪಾದನೆಯನ್ನು ಅವರಿಗೆ ಕೊಡುತ್ತಿಲ್ಲದಿದ್ದರೆ ಅಥವಾ ಅವರ ಸಂಪಾದನೆಯನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರೆ ಅಂತವರಿಗೆ ಕಾನೂನಿನ ಒಳಗೆ ಮೂರು ವರ್ಷ ಜೈಲುವಾಸ ಮತ್ತು ದಂಡ ವಿಧಿಸಬಹುದಾಗಿದೆ.


### 3.9.3 ಮಕ್ಕಳ ಕಲ್ಯಾಣ ಸಮಿತಿ

1. ಈ ಕಾನೂನಿನಲ್ಲಿ, ರಾಜ್ಯ ಸರಕಾರಕ್ಕೆ ಜಿಲ್ಲೆಗಳಿಗೆ ಅಥವಾ ಜಿಲ್ಲೆಗಳ ಸಮೂಹಕ್ಕೆ, ರಾಜ್ಯ ಪತ್ರದಲ್ಲಿ ನಮೂದಿಸಿ ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಲು ಅವಕಾಶ ಇದೆ. ಈ ಕಲ್ಯಾಣ ಸಮಿತಿಗಳು ಕಾನೂನಿನ ಚೌಕಟ್ಟಿನಲ್ಲಿ ಅವುಗಳಿಗೆ ಹತ್ತಿರವಾದ ಅಧಿಕಾರವನ್ನು "ಪಾಲನೆ ಮತ್ತು ರಕ್ಷಣೆಯ" ಅವಶ್ಯಕತೆ ಇರುವ ಮಕ್ಕಳ ಅನುಕೂಲಕ್ಕಾಗಿ ಉಪಯೋಗಿಸಬೇಕು.
2. ಈ ಸಮಿತಿಯಲ್ಲಿ ಒಬ್ಬ ಅಧ್ಯಕ್ಷರು ಹಾಗೂ ನಾಲ್ಕು ಜನ ಸದಸ್ಯರಿದ್ದು, ಅದರಲ್ಲಿ ಒಬ್ಬರು ಮಹಿಳೆಯರು ಹಾಗೂ ಇನ್ನೊಬ್ಬರು ಮಕ್ಕಳಿಗೆ ಸಂಬಂಧಪಟ್ಟ ವಿಷಯಗಳ ತಜ್ಞರು ಆಗಿರಬೇಕು.
3. ಅಧ್ಯಕ್ಷರ ಮತ್ತು ಸದಸ್ಯರ ಅರ್ಹತೆ ಮತ್ತು ಅವರ ಅಧಿಕಾರವನ್ನು ಸರಕಾರ ನಿಗದಿಪಡಿಸಬೇಕು.
4. ಸರಕಾರವು ಸದಸ್ಯರ ನೇಮಕವನ್ನು ಸರಿಯಾದ ವಿಚಾರಣೆಯ ನಂತರ ರದ್ದು ಪಡಿಸಬಹುದಾಗಿದೆ.
   - i. ಈ ಕಾನೂನಿನ ಪ್ರಕಾರ ದತ್ತವಾದ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದರೆ.
   - ii. ವ್ಯಕ್ತಿಯು "ನೈತಿಕತೆಯ ಕೀಳುತನ" ಕ್ಕಾಗಿ ಶಿಕ್ಷೆಗೆ ಒಳಪಟ್ಟಿದ್ದರೆ, ಹಾಗೂ ಅವರ ಶಿಕ್ಷೆ ಖಾಯಂ ಆಗಿದ್ದರೆ ಮತ್ತು ಅವರಿಗೆ ಕ್ಷಮೆ ಸಿಗದೆ ಇದ್ದರೆ.
   - iii. ಯಾವುದೇ ಸರಿಯಾದ ಕಾರಣಗಳು ಇಲ್ಲದೆ ಮೂರು ಸಭೆಗಳಿಗೆ ನಿರಂತರವಾಗಿ ಗೈರು ಹಾಜರಿಯಾಗಿದ್ದರೆ.
5. ಸಮಿತಿಯು ಬೆಂಚ್ ಮ್ಯಾಜಿಸ್ಟ್ರೇಟ್ ಆಗಿ ಕೆಲಸ ಮಾಡಬೇಕಾಗಿದೆ. ಅವರಿಗೆ ಸಿ.ಆರ್.ಸಿ.ಸಿ 1973 ರಲ್ಲಿ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಒಂದನೇ ದರ್ಜೆ ನ್ಯಾಯಾಂಗ ಮ್ಯಾಜಿಸ್ಟ್ರೇಟಿಗೆ ಕೊಟ್ಟ ಅಧಿಕಾರ ಇದೆ.

### 3.9.4 ಸಮಿತಿಯ ಅಧಿಕಾರಗಳು

1. ಸಮಿತಿಗೆ ಮಕ್ಕಳ ಪಾಲನೆ, ರಕ್ಷಣೆ, ಚಿಕಿತ್ಸೆ, ಅಭಿವೃದ್ಧಿ ಮತ್ತು ಪುನರ್ವಸತಿಗೆ ಸಂಬಂಧಪಟ್ಟಂತೆ ಪೂರ್ಣ ಅಧಿಕಾರ ಇದೆ. ಅವರ ನಿರ್ಣಯವೇ ಆ ಮಟ್ಟದಲ್ಲಿ ಅಂತಿಮ ನಿರ್ಣಯ.
2. ಇಂತಹ ಸಮಿತಿಗೆ ಅವರ ಅಧಿಕಾರ ವ್ಯಾಪ್ತಿಯ ಪ್ರದೇಶದ ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ಕೇಸುಗಳನ್ನು ಕೈಗೆತ್ತಿಕೊಳ್ಳುವ ಅಧಿಕಾರ ಅವರಿಗೆ 2000 ಕಾನೂನಿನ ಪ್ರಕಾರ ಇದೆ.





## 3.10 ಬಾಲಕಾರ್ಮಿಕತೆಯ ಬಗ್ಗೆ ಭಾರತದ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳು

ಭಾರತದ ಸರ್ವೋಚ್ಚ ನ್ಯಾಯಾಲಯವು ದಿನಾಂಕ 10–12–1996 ರಂದು ಸಿವಿಲ್ ದಾವೆ ಸಂಖ್ಯೆ 465/1986 ರ ಬಗ್ಗೆ ತನ್ನ ತೀರ್ಪನ್ನು ಕೊಡುತ್ತಾ, ಅಪಾಯಕಾರಿ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಕ್ಕಳನ್ನು ಕೆಲಸದ ಸ್ಥಳದಿಂದ ಬಿಡಿಸಿ ಅವರನ್ನು ಪುನರ್ವಸತಿಗೊಳಿಸುವ ಬಗ್ಗೆ ಹಾಗೂ ಅಪಾಯಕಾರಿ ಅಲ್ಲದ ಕ್ಷೇತ್ರಗಳಲ್ಲಿ ಬಾಲಕಾರ್ಮಿಕತೆಯನ್ನು ಯಾವ ರೀತಿಯಲ್ಲಿ ಗುರುತಿಸಬೇಕು ಮತ್ತು ಅವರು ಕೆಲಸ ಮಾಡುವ ವಾತಾವರಣವನ್ನು ಅಭಿವೃದ್ಧಿ ಪಡಿಸಬೇಕು ಎಂಬುದರ ಬಗ್ಗೆ ಕೆಲವೊಂದು ನಿರ್ದೇಶನಗಳನ್ನು ಕೊಟ್ಟಿರುತ್ತದೆ. ಅವುಗಳು ಈ ಕೆಳಗಿನಂತಿವೆ.

(ಅ) ರಾಷ್ಟ್ರದ ಎಲ್ಲಾ ಜಿಲ್ಲೆಗಳಲ್ಲಿ ಸಮನಾಂತರವಾಗಿ ಒಂದೇ ಬಾರಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

(ಆ) ಕೆಲಸ ಮಾಡುತ್ತಿರುವ ಮಕ್ಕಳ ಗಣತಿಯನ್ನು ದಿನಾಂಕ 10–06–1997 ರ ಒಳಗೆ ಮುಗಿಸಬೇಕು.

(ಇ) ಅಪಾಯಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಬಿಡುಗಡೆಗೊಳಿಸಿ ಅವರಿಗೆ ಸರಿಯಾದ ಸಂಸ್ಥೆಗಳಲ್ಲಿ ಶಿಕ್ಷಣದ ವ್ಯವಸ್ಥೆ ಮಾಡಬೇಕು.

(ಈ) ಮಕ್ಕಳನ್ನು ಕೆಲಸದಲ್ಲಿ ಇಟ್ಟುಕೊಂಡಿರುವ ಮಾಲೀಕರಿಂದ ರೂ. 20000/– ವಸೂಲಿ ಮಾಡಿ ಅದನ್ನು ಈ ಬಗ್ಗೆ ರಚಿಸುವ ಕಲ್ಯಾಣ ನಿಧಿಯಲ್ಲಿ ಇಡಬೇಕು.


(ಉ) ಹೀಗೆ ಬಿಡುಗಡೆಗೊಳಿಸಿದ ಬಾಲಕಾರ್ಮಿಕ ಮಗುವಿನ ಕುಟುಂಬದಲ್ಲಿ ಒಬ್ಬರಿಗೆ ಸರಕಾರ ಕೆಲಸ ಒದಗಿಸಬೇಕು. ಹೀಗೆ ಒಂದು ವೇಳೆ ಕೆಲಸ ಒದಗಿಸಲು ಅಸಾಧ್ಯವಾದರೆ, ರಾಜ್ಯ ಸರಕಾರ ತನ್ನ ವತಿಯಿಂದ ರೂ. 5000/– ದೇಣಿಗೆಯಾಗಿ ಕಲ್ಯಾಣ ನಿಧಿಗೆ, ಆ ಮಗುವಿನ ಬಗ್ಗೆ ಕೊಡಬೇಕು.

(ಊ) ಬಿಡುಗಡೆಗೊಳಿಸಿದ ಮಕ್ಕಳ ಕುಟುಂಬಗಳಿಗೆ ಆರ್ಥಿಕ ಸಹಾಯವನ್ನು ಈ ಕಲ್ಯಾಣ ನಿಧಿಯಿಂದ ದೊರಕುವ ಬಡ್ಡಿಯಿಂದ ಮಗುವನ್ನು ಶಾಲೆಗೆ ಕಳುಹಿಸುವವರೆಗೆ ಕೊಡಬೇಕು. (ರೂ.20000/25000)

(ಋ) ಅಪಾಯಕಾರಿ ಅಲ್ಲದ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಕ್ಕಳ ಕೆಲಸದ ಅವಧಿ ದಿವಸಕ್ಕೆ 6 ಗಂಟೆಗಳಿಗಿಂತ ಹೆಚ್ಚಾಗಬಾರದು ಮತ್ತು ಪ್ರತಿ ದಿವಸ 2 ಗಂಟೆಗಳ ಕಾಲ ಶಿಕ್ಷಣ ಒದಗಿಸಬೇಕು. ಈ ಮಕ್ಕಳ ಶಿಕ್ಷಣದ ವೆಚ್ಚವನ್ನು ಸಂಬಂಧಪಟ್ಟ ಮಾಲೀಕರು ಭರಿಸಬೇಕು.

(ಎ) ಈ ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸರಿಯಾದ ಯೋಜನೆ ತಯಾರಿಸಿಕೊಳ್ಳಬೇಕು ಮತ್ತು ತಯಾರಿ ಮಾಡಿಕೊಳ್ಳಬೇಕು. ಈ ರೀತಿಯಲ್ಲಿ ಯೋಜನೆ ತಯಾರಿಸುವಾಗ ಮತ್ತು ತಯಾರಿ ಮಾಡುವಾಗ ಬೇಕಾಗುವ ಆಡಳಿತ/ ಅನುಷ್ಠಾನ / ನಿಯಂತ್ರಣ ವ್ಯವಸ್ಥೆಗೆ ತಗಲುವ ಹೆಚ್ಚುವರಿ ವೆಚ್ಚ ಭರಿಸಬೇಕು (ಹೆಚ್ಚುವರಿ ಸಿಬ್ಬಂದಿ ವೆಚ್ಚ, ತರಬೇತಿ, ಗಣಕೀಕರಣ, ಸಾಗಾಟ ವೆಚ್ಚ)





## 3.11 ಅಪಾಯಕಾರಿ ಬಾಲಕಾರ್ಮಿಕತೆ


ಸುಮಾರು 171 ಮಿಲಿಯನ್ 5–17 ವಯೋಮಿತಿಯ ಮಕ್ಕಳು ಅಪಾಯಕಾರಿ ಬಾಲಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಈ ಪ್ರಕ್ರಿಯೆಯಲ್ಲಿ ಸಾವನಪ್ಪಿರಬಹುದು ಅಥವಾ ಖಾಯಂ ಆಗಿ ಹೆಳವರಾಗಿರಬಹುದು ಅಥವಾ ಖಾಯಿಲೆಗೆ ತುತ್ತಾಗಿರಬಹುದು. ಭದ್ರತೆ ಇಲ್ಲದ ಮತ್ತು ಅನಾರೋಗ್ಯ ಪರಿಸ್ಥಿತಿಯಲ್ಲಿ ಮಕ್ಕಳು ಕೆಲಸ ಮಾಡುತ್ತಿರಬಹುದು.

ಅಪಾಯಕಾರಿ ಬಾಲಕಾರ್ಮಿಕತೆ ಎಂದರೆ ಮಕ್ಕಳು ತಮ್ಮ ಜೀವವನ್ನು ಕಳೆದುಕೊಳ್ಳುವ ಕೆಲಸ ವ್ಯವಸ್ಥೆಯಲ್ಲಿ ಅಥವಾ ತಮ್ಮ ಅಂಗಾಂಗಗಳನ್ನು (ಖಾಯಂ ಆಗಿ) ಊನಗೊಳಿಸಿಕೊಳ್ಳುವ ಕೆಲಸದ ಪರಿಸ್ಥಿತಿಯಲ್ಲಿ ಕೆಲಸ ಮಾಡುವುದಕ್ಕೆ ಅಪಾಯಕಾರಿ ಬಾಲಕಾರ್ಮಿಕತೆ ಎಂದು ಕರೆಯಲಾಗುವುದು.

ಅಪಾಯಕಾರಿ ಬಾಲಕಾರ್ಮಿಕತೆ ಅತ್ಯಂತ ನಿಕೃಷ್ಟ ಬಾಲಕಾರ್ಮಿಕತೆ ಆಗಿದ್ದು, ಇದರಲ್ಲಿ ಯಾವುದೇ ಮಕ್ಕಳು ತೊಡಗಬಾರದು. ಯಾವುದೇ ಅಪಾಯಕಾರಿ ಬಾಲಕಾರ್ಮಿಕತೆಯಲ್ಲಿ ಮಕ್ಕಳು ಕೆಲಸ ಮಾಡಲೇಬಾರದು.

ಸುಮಾರು 22000 ಮಕ್ಕಳು ಪ್ರತಿ ವರ್ಷ ಕೆಲಸ ಮಾಡುವಾಗ ಅವರು ತಮ್ಮ ಜೀವವನ್ನು ಕಳೆದುಕೊಳ್ಳುತ್ತಾರೆ. ಕಾಯಿಲೆಗೆ ಬೀಳುವ ಹಾಗೂ ಅಪಘಾತಕ್ಕೆ ಸಿಕ್ಕುವ ಮಕ್ಕಳ ಲೆಕ್ಕ ಸರಿಯಾಗಿ ಸಿಗುತ್ತಿಲ್ಲ. ಆದರೆ ಪ್ರತಿ ವರ್ಷ ಸುಮಾರು 270 ಮಿಲಿಯ ಕೆಲಸದ ಅಪಘಾತಗಳು ಮತ್ತು 160 ಮಿಲಿಯ ಕೆಲಸದಿಂದ ಕಾಯಿಲೆಗೆ ಬೀಳುವುದು ನಡೆಯುತ್ತಿದೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ ಬಾಲಕಾರ್ಮಿಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇದೆ. ಅಪಾಯಕಾರಿ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಕ್ಕಳು ಅಪಘಾತಕ್ಕೆ ತುತ್ತಾಗುವುದು ಹೆಚ್ಚು.





## 3.12 ನಿಕೃಷ್ಠ ಪರಿಸ್ಥಿತಿಯ ಬಾಲಕಾರ್ಮಿಕತೆ


ಅಪಾಯಕಾರಿ ಬಾಲಕಾರ್ಮಿಕತೆ ಅಲ್ಲದೆ, ಸುಮಾರು 8.4 ಮಿಲಿಯನ್ ಮಕ್ಕಳು (ಪ್ರಪಂಚಲ್ಲಿ) ನಿಕೃಷ್ಠ ಪರಿಸ್ಥಿತಿಯ ಬಾಲಕಾರ್ಮಿಕತೆಯಲ್ಲಿ ತೊಡಗಿರುತ್ತಾರೆ. ಅವರು "ಸಾಗಾಟದಲ್ಲಿ", "ಜೀತ ಪದ್ದತಿಯಲ್ಲಿ", "ಯುದ್ದದಲ್ಲಿ", ವೇಶ್ಯಾ ವೃತ್ತಿಯಲ್ಲಿ ಮತ್ತು ಇತರ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿರಬಹುದು.

ಇದು ಅತ್ಯಂತ ನಿಕೃಷ್ಠಹೀನ ಹಾಗೂ ಕಳವಳಕಾರಿ ಪರಿಸ್ಥಿತಿ ಆಗಿದ್ದು, ಇದರಿಂದ ಸಮಾಜ ಘಾತುಕ ಶಕ್ತಿಗಳು ಉದ್ಬವ ಆಗುವ ಸಂಭವ ಹೆಚ್ಚಾಗಿದೆ.

**ಹೀನ ರೀತಿಯ ಬಾಲಕಾರ್ಮಿಕತೆಯ ಪ್ರಕಾರಗಳು**

- ಮಕ್ಕಳನ್ನು ವೇಶ್ಯಾವೃತ್ತಿಯಲ್ಲಿ ತೊಡಗಿಸುವುದು.
- ಜೀತದಾಳಾಗಿ ಕೆಲಸ ಮಾಡಿಸುವುದು.
- ಯುದ್ದದಲ್ಲಿ ಭಾಗವಹಿಸುವುದು.
- ಅಮಲು ಪದಾರ್ಥಗಳನ್ನು ಸಾಗಾಟ ಮಾಡಿಸುವುದು.
- ಲೈಂಗಿಕ ಚಿತ್ರಗಳನ್ನು ತಯಾರಿಸಲು ಉಪಯೋಗಿಸುವುದು.
- ಇತರ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸುವುದು.





## 3.13 ಆಯ್ದ ಕೆಲವು ಮಿಥ್ಸ್ ಮತ್ತು ನಿಜ ಸಂಗತಿಗಳು

ಈ ಕೆಳಗಿನವುಗಳು ಬಾಲಕಾರ್ಮಿಕತೆಯ ಬಗ್ಗೆ ಪ್ರಚಲಿತದಲ್ಲಿರುವ ಕೆಲವು ಆಯ್ದ ಮಿಥ್ಸ್ ಮತ್ತು ನಿಜ ಸಂಗತಿಗಳು.

### 3.13.1 ಬಡತನವು ಬಾಲಕಾರ್ಮಿಕತೆಗೆ ಮುಖ್ಯ ಕಾರಣ.

ಬಡತನಕ್ಕೆ ಹಲವು ಆಯಾಮಗಳು ಮತ್ತು ಮುಖಗಳಿವೆ. ಕಡಿಮೆ ಸಂಪಾದನೆ, ಕಡಿಮೆ ಮಟ್ಟದ ಕೌಶಲ್ಯ ಮತ್ತು ಶಿಕ್ಷಣ, ಆಸ್ತಿ ಇಲ್ಲದೆ ಇರುವುದು, ತರಬೇತಿ ಮತ್ತು ಶಿಕ್ಷಣಕ್ಕೆ ಆಸ್ಪದ ಇಲ್ಲದೆ ಇರುವುದು, ಅನಾರೋಗ್ಯ, ಸರಿಯಾದ ಆಹಾರ ಮತ್ತು ಸೂರು ಇಲ್ಲದೆ ಇರುವುದು ಇತ್ಯಾದಿಗಳು. ಆದರೆ ಇವು ಮುಖ್ಯ ಕಾರಣಗಳಲ್ಲ. ಪೋಷಕರಿಗೆ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು ಎಂಬ ಮನಸ್ಸು ಇದ್ದರೆ ಬಡತನ ಅಡ್ಡಿ ಆಗುವುದಿಲ್ಲ. ಅವರಿಗೆ ಕಷ್ಟವಾಗುವುದು ಆದರೆ ಅಸಾಧ್ಯವಾದುದಲ್ಲ. ಹಲವಾರು ಸಂಶೋಧನೆಗಳು ಮತ್ತು ಮೌಲ್ಯಮಾಪನಗಳು ಇದನ್ನು ಸಾಬೀತು ಪಡಿಸಿವೆ.

### 3.13.2 ಮಕ್ಕಳು ಕೆಲಸ ಮಾಡದಿದ್ದರೆ ಅವರು ಮತ್ತು ಅವರ ಕುಟುಂಬಗಳು ಉಪವಾಸ ಇರಬೇಕಾಗುವುದು

ಕುಟುಂಬದ ಎಲ್ಲಾ ಸದಸ್ಯರು ಮತ್ತು ಮಕ್ಕಳು ಕೆಲಸ ಮಾಡಿ ಸಹ ಉಪವಾಸ ಇರಬೇಕಾದ ಸಂಭವ ಇರುತ್ತದೆ. ಆಹಾರದ ಲಭ್ಯತೆ ಹಲವಾರು ವಿಚಾರಗಳ ಮೇಲೆ ಅವಲಂಬಿತವಾಗಿದೆ. ಉಪವಾಸವು/ ಆಹಾರದ ಅಲಭ್ಯತೆಯು ಹಲವಾರು ವಿಷಯಗಳ ಸಮ್ಮಿಶ್ರವಾಗಿದೆ. ಅದು ಆಹಾರದ ಬೆಲೆ ಜನರ ಆದಾಯ, ಕೊಳ್ಳುವ ಶಕ್ತಿ, ಆಹಾರದ ಲಭ್ಯತೆ, ಆಹಾರಕ್ಕೆ ಸಂಪರ್ಕ, ಇತ್ಯಾದಿ ಅವಲಂಬಿಸಿದೆ.

### 3.13.3 ಬಡಜನರಿಗೆ ಹೆಚ್ಚು ಮಕ್ಕಳು ಇರುವುದು ಬಾಲಕಾರ್ಮಿಕತೆಗೆ ಕಾರಣ.

ಇದು ಸರಿಯಾದ ಮಾಹಿತಿ ಅಲ್ಲ. ದೇಶದ ಸಂಪತ್ತು ಅದರ ಜನಸಂಖ್ಯೆ. ಜನರಿಗೆ ಸರಿಯಾದ ಶಿಕ್ಷಣ ಕೊಟ್ಟು ಮತ್ತು ಅಭಿವೃದ್ಧಿ ಪಥ ತೋರಿಸಿದರೆ, ಅವರ ಅಭಿವೃದ್ಧಿ ಆಗುತ್ತದೆ. ಅದರಿಂದ ದೇಶದ ಸಂಪತ್ತು ಹೆಚ್ಚಾಗುತ್ತದೆ. ನಾವು ಹೆಚ್ಚಾಗಿ ಸಂಖ್ಯೆಯನ್ನು ಗಮನಿಸುತ್ತೇವೆ. ಆದರೆ ಈ ಸಂಖ್ಯೆಯಲ್ಲಿ ಇರುವ ಶಕ್ತಿಯನ್ನು ಗಮನಿಸುವುದಿಲ್ಲ.



**3.13.4 ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕಿಂತ ಕೆಲಸಕ್ಕೆ ಕಳುಹಿಸಲು ಇಷ್ಟಪಡುತ್ತಾರೆ.**

ಇದು ತಪ್ಪು ಅಭಿಪ್ರಾಯ. ಸರ್ಕಾರೇತರ ಸಂಸ್ಥೆಗಳು ದೊಡ್ಡ ಸಂಖ್ಯೆಯಲ್ಲಿ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಸೇರಿಸಿರುವುದು ಇದಕ್ಕೆ ಸಾಕ್ಷಿ. ಸಾಮಾಜಿಕ ವ್ಯವಸ್ಥೆಯು ಪೋಷಕರು ಅವರ ಮಕ್ಕಳನ್ನು ಬಾಲಕಾರ್ಮಿಕತೆಗೆ ದೂಡುವಂತೆ ಪ್ರೋತ್ಸಾಹಿಸುತ್ತದೆ.

**3.13.5 ಮಕ್ಕಳಿಗೆ ಕೆಲಸ ಮಾಡಲು ಆಸೆ ಇದೆ.**


ಮಕ್ಕಳು ಕೆಲವೊಮ್ಮೆ ತಮಗೆ ಕೆಲಸಮಾಡಲು ಆಸಕ್ತಿ ಇದೆ ಎಂದು ತಿಳಿಸಬಹುದು. ಆದರೆ ಅವರಿಗೆ, ಅದರ ಬದಲಿನ ಅವಕಾಶ ಗೊತ್ತಿಲ್ಲದೆ ಇರುವುದರಿಂದ ಅವರು ಕೆಲಸ ಮಾಡುತ್ತೇವೆಂಬುದಾಗಿ ಹೇಳುತ್ತಾರೆ. ಶಿಕ್ಷಣಕ್ಕೆ ಅವರಿಗೆ ಆಸ್ಪದ ಇಲ್ಲದೆ ಇರುವುದರಿಂದ, ಶಾಲೆಯ ಪಾಠ ಪ್ರವಚನಗಳು ಅವರಿಗೆ ಆಸಕ್ತಿ ಮೂಡಿಸದೆ ಇರುವುದರಿಂದ ಹಾಗೂ ಶಾಲಾ ಶಿಕ್ಷಕರು ಇವರನ್ನು ಕಠೋರವಾಗಿ ನಡೆಸುವುದರಿಂದ, ಮಕ್ಕಳು ಕೆಲಸ ಮಾಡಲು ಹೋಗುತ್ತಾರೆ.

ಬಾಲಕಾರ್ಮಿಕತೆ ಸಮುದಾಯದ ಅನಾಸಕ್ತಿಯನ್ನು ಎತ್ತಿ ತೋರಿಸುತ್ತದೆ. ಮಕ್ಕಳಿಗೆ ಅವರ ಹಿರಿಯರ ಮೇಲೆ ನಂಬಿಕೆ ಇರುವುದಿಲ್ಲ. ಅವರಿಗೆ ಹಿರಿಯರು, ಪರಿಸ್ಥಿತಿಯನ್ನು ಬದಲಾಯಿಸುತ್ತಾರೆ ಎಂಬ ನಂಬಿಕೆ ಸಹ ಇರುವುದಿಲ್ಲಾ.

**3.13.6 ಮಕ್ಕಳನ್ನು ಅಪಾಯಕಾರಿ ಅಲ್ಲದ ಕೆಲಸದಲ್ಲಿ ತೊಡಗಿಸುವುದರಿಂದ ಯಾವುದೇ ತಪ್ಪಿಲ್ಲ.**

ಅಪಾಯಕಾರಿ ಎಂಬುದು ಚರ್ಚೆ ಮಾಡುವಂತಹ ವಿಚಾರ. ಮಕ್ಕಳಿಗೆ ಎಲ್ಲಾ ಕೆಲಸಗಳು ಅಪಾಯಕಾರಿ ಆಗಬಹುದು. ಯಾವುದೇ ಕೆಲಸವನ್ನು ಅನಾರೋಗ್ಯಕರ ಸನ್ನಿವೇಶದಲ್ಲಿ ಅಥವಾ ಹೆಚ್ಚು ಹೊತ್ತಿನವರೆಗೆ ಮಾಡಿದರೆ ಅದು ಅಪಾಯಕಾರಿ ಆಗಬಹುದು. ಮಕ್ಕಳಿಗೆ ಅವರ ಅಭಿವೃದ್ಧಿ, ಶಿಕ್ಷಣ, ಮನೋರಂಜನೆ, ವೈದ್ಯಕೀಯ ಸೌಲಭ್ಯ ಆಟ ಇತ್ಯಾದಿಗಳಿಂದ ವಂಚಿತರನ್ನಾಗಿ ಮಾಡುವುದು ಅಪಾಯಕಾರಿ ಆಗಬಹುದು.





**3.13.7 ಮಕ್ಕಳು ಕೆಲಸ ಮಾಡಿದರೆ ಅವರ ಕೌಶಲ್ಯ ಅಭಿವೃದ್ಧಿ ಆಗುತ್ತದೆ.**

ಮಕ್ಕಳಿಗೆ ಕೊಡುವ ಕೆಲಸಗಳು ಸರಳ ಮತ್ತು ಪುನರಾವರ್ತನೆ ಆಗಿರುತ್ತದೆ. ಉದಾ: ಲೇಟರ್ ಅಂಟಿಸುವುದು, ತುಂಬಿಸುವುದು, ರೋಲ್ ಮಾಡುವುದು, ತರುವುದು, ಹೊತ್ತುಕೊಂಡು ಹೋಗುವುದು ಇತ್ಯಾದಿ. ಇದರಲ್ಲಿ ಯಾವುದೇ ಕೌಶಲ್ಯ ಇರುವುದಿಲ್ಲ. ಮಕ್ಕಳು ಈ ಕೆಲಸವನ್ನು ಬಹಳ ಹೊತ್ತಿನವರೆಗೆ, ಅನಾರೋಗ್ಯಕರ ಸನ್ನಿವೇಶದಲ್ಲಿ ಮಾಡುತ್ತಾರೆ. ಕಷ್ಟಕರವಾದ ಭೌತಿಕ ಕೆಲಸ ಮತ್ತು ಜೊತೆಯಲ್ಲಿ ಧೂಳು, ಬೆಂಕಿ, ರಾಸಾಯನಿಕ ವಸ್ತುಗಳ ಸಂಪರ್ಕದಿಂದ ಮಕ್ಕಳ ಆರೋಗ್ಯ ಕೆಡುವುದೇ ಹೆಚ್ಚು.

**3.13.8 ಸಾಂಪ್ರದಾಯಿಕ ಕಲೆ ಮತ್ತು ಕಸುಬನ್ನು ಕಾಪಾಡಲು ಮಕ್ಕಳು ಕೆಲಸ ಮಾಡಬೇಕು.**

ಮಕ್ಕಳಿಗೆ ಅಂದರೆ ಬಾಲಕಾರ್ಮಿಕರಿಗೆ ಯಾರೂ ನಿಜವಾದ ಕಲೆ ಅಥವಾ ಕುಶಲ ಕೆಲಸವನ್ನು ಕಲಿಸಿ ಕೊಡುವುದಿಲ್ಲ. ಒಂದು ವೇಳೆ ಕುಟುಂಬದ ಕಲೆಗಳನ್ನು ಮಕ್ಕಳು ಕಲಿಯುವುದಿದ್ದರೆ ಅದು ಶಿಕ್ಷಣದ ಜೊತೆ ಆಗಬೇಕು.


**3.13.9 ಮಕ್ಕಳು ವೇಗವಾಗಿ ಕೆಲಸ ಮಾಡುತ್ತಾರೆ. ಅವರ ಪುಟ್ಟ ಕೈಗಳು ನಾಜೂಕು ಆದ ಕೆಲಸ ಮಾಡಲು ಅವಶ್ಯಕ.**

ಮಕ್ಕಳು ದೊಡ್ಡವರಿಗಿಂತ ಉತ್ತಮವಾಗಿ ಕೆಲಸ ಮಾಡುತ್ತಾರೆ ಎಂಬುದು ತಪ್ಪು ಕಲ್ಪನೆ. ಮಕ್ಕಳಿಗೆ ಕಲ್ಪನೆ ಇರುವುದಿಲ್ಲ. ಅವರು ಹೇಳಿ ಕೊಟ್ಟಿದ್ದನ್ನು ಮಾತ್ರ ಮಾಡುತ್ತಾರೆ. ದೊಡ್ಡವರಿಗೆ ಕಲ್ಪನೆ ಇರುತ್ತದೆ.

**3.13.10 ಮಕ್ಕಳು ಕೆಲಸ ಮಾಡದೆ ಇದ್ದರೆ, ಕೈಗಾರಿಕೆ ಬಿದ್ದು ಹೋಗುತ್ತದೆ.**

ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳದಿದ್ದರೆ, ಆಗುವ ವೆಚ್ಚದ ಹೆಚ್ಚಳ ಬಹಳ ಕಡಿಮೆ. ಇದನ್ನು ಕೈಗಾರಿಕೆಗೆ ಭರಿಸಲು ಆಸ್ಪದ ಇದೆ. ಅವರಿಗೆ ಲಾಭ ಸ್ವಲ್ಪ ಕಡಿಮೆ ಆಗಬಹುದು.





**3.13.11 ಬಾಲಕಾರ್ಮಿಕರು ತಯಾರಿಸಿದ ವಸ್ತುಗಳ ಮೇಲೆ ಜಾಗತಿಕವಾಗಿ ಬ್ಯಾನ್ ಹಾಕಿದರೆ, ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವುದು ನಿಲ್ಲುತ್ತದೆ ಮತ್ತು ಮಕ್ಕಳ ಹಕ್ಕುಗಳನ್ನು ಕಾಪಾಡಲು ಸಾಧ್ಯಾಗುತ್ತದೆ.**

ಬಾಲಕಾರ್ಮಿಕತೆ ನಮ್ಮ ದೇಶದ ರಾಷ್ಟ್ರೀಯ ಸಮಸ್ಯೆ. ಸುಮಾರು ಶೇ.8 ಬಾಲಕಾರ್ಮಿಕ ಮಕ್ಕಳು ರಫ್ತು ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ. ಮಾನವ ಹಕ್ಕುಗಳನ್ನು ವ್ಯಾಪಾರದ ಜೊತೆಯಲ್ಲಿ ಸಂಬಂಧ ಕಲ್ಪಿಸುವುದರಿಂದ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೆಚ್ಚು ಲಾಭವಾಗುತ್ತದೆ. ಈ ಸಾಮಾಜಿಕ ಕಳಕಳಿ ಮತ್ತು ನಿಷೇಧ ಬಾಲಕಾರ್ಮಿಕ ಮಕ್ಕಳ ಪುನರ್ವಸತಿ ಬಗ್ಗೆ ಏನೂ ಹೇಳುವುದಿಲ್ಲ ಮತ್ತು ಅವರ ಕಮಿಟ್‌ಮೆಂಟ್ ಇರುವುದಿಲ್ಲ.

**3.13.12 ಬಾಲಕಾರ್ಮಿಕತೆಯನ್ನು ನಿರ್ಮೂಲನೆ ಮಾಡಲು ಬಾಲಕಾರ್ಮಿಕ ನಿಷೇಧ ಕಾನೂನುಗಳು ಸಾಕು.**


ಬಾಲಕಾರ್ಮಿಕತೆಯ ನಿಷೇಧದ ಬಗ್ಗೆ ಕಾನೂನುಗಳು ಸಮಸ್ಯೆಗಳನ್ನು ಸಂಕೀರ್ಣಗೊಳಿಸಿ ಬಾಲಕಾರ್ಮಿಕತೆಯನ್ನು ಕಾನೂನು ಬದ್ಧಗೊಳಿಸುವ ಸಂಭವ ಇದೆ.

ಹಲವಾರು ಕಾನೂನುಗಳನ್ನು ಜಾರಿಗೊಳಿಸಿ, ಅದನ್ನು ಅನುಷ್ಠಾನ ಮಾಡಲು ಕ್ರಮ ತೆಗೆದುಕೊಳ್ಳದ ಪರಿಸ್ಥಿತಿ ಇದ್ದರೆ ಅದರಿಂದ ಏನೂ ಲಾಭವಾಗುವುದಿಲ್ಲ. ಸರ್ಕಾರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅನುಷ್ಠಾನದಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ (6–14 ವಯೋಮಿತಿ). ಹಲವಾರು ರಾಜ್ಯಗಳು ಶಿಕ್ಷಣ ಸೌಕರ್ಯಗಳನ್ನು ಒದಗಿಸುವಲ್ಲಿ ಉತ್ತಮ ಕೆಲಸ ಮಾಡಿವೆ. ಆದರೆ ಇದರಿಂದ ಶಾಲೆ ಬಿಡುವ ಮಕ್ಕಳ ಸಂಖ್ಯೆಯನ್ನು ತೊಡೆದು ಹಾಕಲು ಸಾಧ್ಯವಾಗಲಿಲ್ಲ.

**3.13.13 ಬಾಲಕಾರ್ಮಿಕತೆಯನ್ನು ತೊಡೆದು ಹಾಕಲು ಸಾಧ್ಯವಿಲ್ಲ.**

ಈ ಬಗ್ಗೆ ಇರುವ ಕೆಲಸ ದೊಡ್ಡದು. ಆದರೆ ಸಾಧಿಸಲಾಗದ ಕಾರ್ಯವಲ್ಲ. ಇದು ಬೃಹತ್ ಕೆಲಸ ಅಥವಾ ಹೊರೆಯ ಕೆಲಸವಲ್ಲ. ಸಮಸ್ಯೆಯ ನಿವಾರಣೆಗೆ ಸಂಪನ್ಮೂಲದ ಕೊರತೆ ಅಲ್ಲ. ಆದರೆ ಕೊರತೆ ಇರುವುದು ನಿಜವಾದ ಆಸಕ್ತಿ ಮತ್ತು ರಾಜಕೀಯ ಇಚ್ಛಾ ಶಕ್ತಿ.

ಬಾಲಕಾರ್ಮಿಕತೆಯ ನಿರ್ಮೂಲನೆ ಯಾಂತ್ರಿಕ ಕ್ರಿಯೆಯಲ್ಲ. ಯಾಂತ್ರಿಕ ಕ್ರಿಯೆಯಾದರೆ ಸಾಧಿಸುವುದು ಸುಲಭ. ಆದರೆ ಇದು ಮಾನವರು ಮತ್ತು ಮಾನವರ ಯೋಜನೆಗೆ ಸಂಬಂಧಿಸಿದ್ದು. ಮಕ್ಕಳನ್ನು ನಾವು ಮನಷ್ಯರಾಗಿ ಕಾಣಬೇಕು. ಮಕ್ಕಳ ಹಕ್ಕುಗಳನ್ನು ಗುರುತಿಸುವ ಕಾಲ ಕೂಡಿಬಂದಿದೆ.




## 3.14 ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾನೂನು 1986 ರ ಪ್ರಕಾರ ಬಾಲಕಾರ್ಮಿಕತೆಯನ್ನು ನಿಷೇಧ ಮಾಡಿದ ಕೆಲಸಗಳ ಮತ್ತು ಪ್ರಕ್ರಿಯೆಗಳ ಪಟ್ಟಿ

### 3.14.1 ಇವುಗಳಿಗೆ ಸಂಬಂಧಪಟ್ಟ ಯಾವುದೇ ಕೆಲಸಗಳು

1. ಪ್ರಯಾಣಿಕರನ್ನು ಅಥವಾ ಸಾಮಗ್ರಿಗಳನ್ನು ಸಾಗಿಸುವ ಪ್ರಕ್ರಿಯೆ.
2. ಬೂದಿಯನ್ನು ಹೆಕ್ಕುವುದು, ಬೂದಿಗುಂಡಿಯನ್ನು ಸ್ವಚ್ಛ ಮಾಡುವುದು, ರೈಲು ವ್ಯವಸ್ಥೆಯ ಹತ್ತಿರ ನಿರ್ಮಾಣ ಕಾರ್ಯದಲ್ಲಿ ತೊಡಗುವುದು.
3. ರೈಲ್ವೆ ನಿಲ್ದಾಣದಲ್ಲಿ ಕೆಟರಿಂಗ್ ಕೆಲಸದಲ್ಲಿ ತೊಡಗುವುದು, ಒಂದು ಪ್ಲಾಟ್ ಫಾರಂನಿಂದ ಇನ್ನೊಂದು ಪ್ಲಾಟ್ ಫಾರಂಗೆ ಹೋಗಿ ತಿಂಡಿ ಮಾರುವುದು, ಓಡುತ್ತಿರುವ ರೈಲಿನಲ್ಲಿ ತಿಂಡಿ ಮಾರುವುದು, ರೈಲಿಗೆ ಹತ್ತಿ ಇಳಿದು ತಿಂಡಿ/ ಸಾಮಾನು ಮಾರುವುದು.
4. ರೈಲ್ವೆಗೆ ಹತ್ತಿರವಾಗಿ ರೈಲ್ವೆ ಸ್ಟೇಷನ್ ನಿರ್ಮಾಣ ಅಥವಾ ಯಾವುದೇ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸುವುದು.
5. ಬಂದರು ಪ್ರಾಧಿಕಾರದ ಯಾವುದೇ ಬಂದರು ಪ್ರದೇಶದಲ್ಲಿ.
6. ತಾತ್ಕಾಲಿಕವಾಗಿ ಮಾರಾಟದ ಪರವಾನಿಗೆ ಇರುವ ಅಂಗಡಿಗಳಲ್ಲಿ / ಪಟಾಕಿ ಸಿಡಿ ಮದ್ದುಗಳನ್ನು ಮತ್ತು ಸ್ಫೋಟಕಗಳನ್ನು ಮಾರುವುದು.
7. ಪ್ರಾಣಿಗಳ
8. ಆಟೋ ಮೊಬೈಲ್ ಗ್ಯಾರೇಜುಗಳಲ್ಲಿ
9. ಫೌಂಡ್ರಿಗಳಲ್ಲಿ
10. ಅಮಲು ಪದಾರ್ಥಗಳ ತಯಾರಿ, ಬೆಂಕಿ ಹಿಡಿಯಬಹುದಾದ ವಸ್ತುಗಳ ಮತ್ತು ಸ್ಫೋಟಗೊಳಿಸುವ ವಸ್ತುಗಳ ಉತ್ಪಾದನೆಯಲ್ಲಿ
11. ಕೈಮಗ್ಗ ಮತ್ತು ಯಾಂತ್ರಿಕ ಮಗ್ಗಗಳಲ್ಲಿ
12. ನೀರಿನ ಕೆಳಗೆ ಅಥವಾ ಭೂಮಿ ಕೆಳಗೆ ಇರುವ ಗಣಿಗಳಲ್ಲಿ ಮತ್ತು ಭಟ್ಟಿಗಳಲ್ಲಿ
13. ಪ್ಲಾಸ್ಟಿಕ್ ಮತ್ತು ಫೈಬರ್ ಗ್ಲಾಸ್ ಘಟಕಗಳಲ್ಲಿ
14. ಮನೆಕೆಲಸದವರಾಗಿ
15. ಹೋಟೆಲು, ಡಾಭಾಗಳು, ಟೀ ಅಂಗಡಿ, ರೆಸಾರ್ಟ್‌ಗಳು, ಇತರೆ ಮನರಂಜನಾ ಪರಿಸರಗಳಲ್ಲಿ






### 3.14.2 ನಿಷೇಧಿಸಲ್ಪಟ್ಟ ಪ್ರಕ್ರಿಯೆಗಳು

1. ಬೀಡಿ ತಯಾರಿ
2. ರತ್ನಗಂಬಳಿ, ಕಾರ್ಪೆಟ್ ನೇಯ್ಗೆ ಮತ್ತು ಅದಕ್ಕೆ ಸಂಬಂಧಪಟ್ಟ ಪ್ರಕ್ರಿಯೆಗಳು.
3. ಸಿಮೆಂಟ್ ತಯಾರಿ, ಸಿಮೆಂಟನ್ನು ಚೀಲಕ್ಕೆ ತುಂಬುವುದು.
4. ಬಟ್ಟೆಯ ಅಚ್ಚು ಹಾಕುವಿಕೆ, ಬಣ್ಣ ಹಾಕುವುದು, ನೇಯ್ಗೆ ಮತ್ತು ಇವುಗಳ ಸಂಬಂಧಿ ಕೆಲಸಗಳು.
5. ಬೆಂಕಿಪೊಟ್ಟಣ, ಸಿಡಿ ಮದ್ದುಗಳ, ಸ್ಫೋಟಕಗಳ ತಯಾರಿ.
6. ಮೈಕಾ ಕತ್ತರಿಸುವುದು ಮತ್ತು ತುಂಡು ಮಾಡುವುದು, ಒಡೆಯುವುದು.
7. ಶಾಂಪೂ ತಯಾರಿ.
8. ಸೋಪ್ ತಯಾರಿ.
9. ಟ್ಯಾನಿಂಗ್ (ಚರ್ಮ ಹದ ಗೊಳಿಸುವುದು).
10. ಕಟ್ಟಡ ನಿರ್ಮಾಣ.
11. ಕಡ್ಡಿ ತಯಾರಿಕೆಯಲ್ಲಿ.
12. ಎಗೆಟ್‌ನಿಂದ ತಯಾರಿಸುವ ವಸ್ತುಗಳ ತಯಾರಿಕೆಯಲ್ಲಿ
13. ಲೆಡ್, ಪಾದರಸ, ಮ್ಯಾಂಗನೀಸ್, ಕ್ರೋಮಿಯಮ್, ಕ್ಯಾಡ್‌ಮಿಯಮ್, ಬೆಂಜೀನ್, ಕ್ರಿಮಿನಾಶಕಗಳು, ಕರ್ನ್ಯಾಡು ಮುಂತಾದವುಗಳ ತಯಾರಿಕೆಯಲ್ಲಿ.
14. ಫ್ಯಾಕ್ಟರಿ ಕಾನೂನು ಸೆಕ್ಷನ್ 2 (ಸಿಬಿ) ಯಲ್ಲಿ ಸೂಚಿಸಿದ ಅಪಾಯಕಾರಕ ಪ್ರಕ್ರಿಯೆಗಳ ಮತ್ತು ಸೆಕ್ಷನ್ 87 ರಲ್ಲಿ ಸೂಚಿಸಿದ ಅಪಾಯದ ಕೆಲಸಗಳು.
15. ಉಣ್ಣೆಯನ್ನು ಶುಚಿಗೊಳಿಸುವ ಪ್ರಕ್ರಿಯೆ.
16. ಫ್ಯಾಕ್ಟರಿ ಕಾನೂನು ಸೆಕ್ಷನ್ 2 (ಕೆ) (4) ರಲ್ಲಿ ಸೂಚಿಸಿ ಪ್ರಿಂಟಿಂಗ್
17. ಗೇರು ಬೀಜದ ತಿರುಳನ್ನು ತೆಗೆಯುವ ಪ್ರಕ್ರಿಯೆ.
18. ಬೆಸುಗೆ ಹಾಕುವುದು (ಇಲೆಕ್ಟ್ರಾನಿಕ್ ಉದ್ದಿಮೆಗಳಲ್ಲಿ).
19. ಅಗರ ಬತ್ತಿ ತಯಾರಿ.
20. ಆಟೋಮೊಬೈಲ್ ರಿಪೇರಿ ಮತ್ತು ವೆಲ್ಡ್ ಮಾಡುವುದು, ಲೇತ್ ಕೆಲಸಗಳು, ಪೇಂಟ್ ಮಾಡುವುದು, ಬೆಂಡ್ ತೆಗೆಯುವುದು.
21. ಇಟ್ಟಿಗೆ ಮತ್ತು ಹಂಚಿನ ಗೂಡುಗಳಲ್ಲಿ.
22. ಹತ್ತಿ ಜಿನ್ನಿಂಗ್ ಪ್ರಕ್ರಿಯೆ ಉದ್ದಿಮೆಗಳಲ್ಲಿ.
23. ಡಿಟರ್‌ಜೆಂಟ್ ಉದ್ದಿಮೆಗಳಲ್ಲಿ.
24. ಫ್ಯಾಬ್ರಿಕೇಶನ್ ಉದ್ದಿಮೆಗಳಲ್ಲಿ.
25. ಹರಳು (ಜೆಮ್) ಕತ್ತರಿಸುವುದು.
26. ಕ್ರೋಮೈಟ್ ಮತ್ತು ಮ್ಯಾಂಗನೀಸ್ ಅದಿರು ಗಣಿಗಳಲ್ಲಿ ಮತ್ತು ಅವುಗಳ ಸಾಗಾಟ.
27. ಜ್ಯೂಟ್ ಉದ್ದಿಮೆಗಳಲ್ಲಿ ಮತ್ತು ನಾರು ತಯಾರಿಕಾ ಘಟಕಗಳಲ್ಲಿ



28. ಸುಣ್ಣದ ಗೂಡುಗಳಲ್ಲಿ.
29. ಬೀಗ ತಯಾರಿಕೆಯಲ್ಲಿ.
30. ಲೆಡ್ ಅನ್ನು ಒಳಗೊಂಡ ತಯಾರಿಕೆಯಲ್ಲಿ / ಪ್ರಕ್ರಿಯೆಗಳಲ್ಲಿ
31. ಸಿಮೆಂಟ್ ಪೈಪ್‌ಗಳ ತಯಾರಿ, ಸಿಮೆಂಟ್‌ನ ಇತರ ವಸ್ತು ಮತ್ತು ಅದಕ್ಕೆ ಸಂಬಂಧಪಟ್ಟ ಉದ್ದಿಮೆ.
32. ಗ್ಲಾಸ್ ತಯರಿ, ಗ್ಲಾಸ್ ಉಪಕರಣಗಳು, ಬಳೆಗಳು ಇತ್ಯಾದಿ
33. ಬಣ್ಣಗಳ ತಯಾರಿ
34. ಕ್ರಿಮಿನಾಶಕಗಳ ತಯಾರಿ ಮತ್ತು ಅವುಗಳನ್ನು ಹ್ಯಾಂಡಲ್ ಮಾಡುವುದು.
35. ಮೆಟಲ್ ಶುಚಿಗೊಳಿಸುವುದು, ಪೋಟ್ ಇನ್‌ಗ್ರೇವಿಂಗ್
36. ಕಲ್ಲಿದ್ದಲು ಕೈಗಾರಿಕೆ.
37. ಚರ್ಮ, ರಾಸಾಯನಿಕ ವಸ್ತುಗಳು, ಸಿಂಥೆಟಿಕ್ ವಸ್ತುಗಳನ್ನು ಒಳಗೊಂಡ ಆಟೋಟ ಸಾಮಗ್ರಿಗಳು.
38. ಪ್ಲಾಸ್ಟಿಕ್ ಮತ್ತು ಫೈಬರ್ ಗ್ಲಾಸಿನ ಅಚ್ಚಿನಲ್ಲಿ
39. ಎಣ್ಣೆ ತಯಾರಿ ಮತ್ತು ರಿಫೈನರಿಗಳಲ್ಲಿ
40. ಕಾಗದ ತಯಾರಿ
41. ಮಡಿಕೆ ಮತ್ತು ಸೆರಾಮಿಕ್ ಉದ್ದಿಮೆ.
42. ಹಿತ್ತಾಳೆಯ ಪಾಲಿಶ್, ತುಂಡು ಮಾಡುವುದು ಮತ್ತು ವೆಲ್ಡ್ ಮಾಡುವ ಉದ್ದಿಮೆಗಳಲ್ಲಿ.
43. ಯಾಂತ್ರಿಕೃತ ಕೃಷಿಯಲ್ಲಿ (ಟ್ರ್ಯಾಕ್ಟರ್, ಹಾರ್ವೆಸ್ಟಿಂಗ್ ಯಂತ್ರ)
44. ಮರ ಕತ್ತರಿಸುವ ಮಿಲ್ಲುಗಳಲ್ಲಿ
45. ರೇಷ್ಮೆ ತಯಾರಿ / ಪ್ರಕ್ರಿಯೆ
46. ಹೊಗೆಸೊಪ್ಪಿನ ಉದ್ದಿಮೆ
47. ಕಲ್ಲು ತುಂಡು ಮಾಡುವುದು, ಪುಡಿ ಮಾಡುವುದು.
48. ಟೈರುಗಳ ತಯಾರಿ, ರಿಪೇರಿ, ರಿಟ್ರೇಡಿಂಗ್, ಇತ್ಯಾದಿ
49. ಪಾತ್ರೆಗಳ ತಯಾರಿ, ಪಾಲಿಶ್ ಮಾಡುವುದು ಇತ್ಯಾದಿ
50. ಜರಿ ತಯಾರಿ
51. ಗ್ರಾನೈಟ್ ಪ್ರಕ್ರಿಯೆ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸಗಳು
52. ಇಲೆಕ್ಟ್ರೋ ಪ್ಲೇಟಿಂಗ್
53. ಗ್ರೈಂಡಿಂಗ್ ಮತ್ತು ಮೆಟಲ್‌ಗಳನ್ನು ಹೊಳಪು ಬರಿಸುವುದು.
54. ವಜ್ರದ ಕಟಿಂಗ್ ಮತ್ತು ಹೊಳಪು ಬರಿಸುವುದು.
55. ಗಣಿಗಳಿಂದ ಸ್ಲೇಟ್ ತೆಗೆಯುವುದು.
56. ಕಸ ಹೆಕ್ಕುವುದು.
57. ಶೌಚಾಲಯ ಶುಚಿ ಮಾಡುವುದು.





## 3.15 ಬಾಲಕಾರ್ಮಿಕತೆ – ಕಾರ್ಮಿಕ ಸಂಘಟನೆಯ ಪಾತ್ರ

### 3.15.1 ಪ್ರಸ್ತಾವನೆ

ಅಂತಾರಾಷ್ಟ್ರೀಯ ಕಾರ್ಮಿಕ ಸಂಘವು ಬಾಲಕಾರ್ಮಿಕತೆಯ ಬಗ್ಗೆ ಹೋರಾಟ ನಡೆಸಲು ಅವಶ್ಯಕವಾದ ಉತ್ತಮ ವಾತಾವರಣ ಉಂಟು ಮಾಡುವಲ್ಲಿ ಹಾಗೂ ಈ ಕೆಳಗಿನ ಮೂಲಭೂತವಾದ ಕಾರ್ಮಿಕ ಮಾನಗಳನ್ನು ಒಪ್ಪಿಕೊಳ್ಳುವಲ್ಲಿ ಮುಖ್ಯ ಪಾತ್ರವಹಿಸಿದೆ. ಕನಿಷ್ಠ ಪ್ರಾಯದ ಸಮಾವೇಶ (ಸಂಖ್ಯೆ 138) ಮತ್ತು ನಿಕೃಷ್ಟ ಪದ್ದತಿಯ ಬಾಲಕಾರ್ಮಿಕ ಸಮಾವೇಶ (182) ಬಹಳ ವರ್ಷದಿಂದ ಐ.ಎಲ್.ಓ ದ ಕಾರ್ಮಿಕರ ಚಟುವಟಿಕೆಗಳ (ಎ.ಸಿ.ಟಿ.ಆರ್.ಎ.ವಿ) ಬಾಲಕಾರ್ಮಿಕತೆಯ ನಿವಾರಣೆಗೆ ಅಂತಾರಾಷ್ಟ್ರೀಯ ಕಾರ್ಯಕ್ರಮ (ಐ.ಪಿ.ಇ.ಸಿ) ಫ್ರೀ ಟ್ರೇಡ್ ಯೂನಿಯನ್ ಅಂತಾರಾಷ್ಟ್ರೀಯ ಒಕ್ಕೂಟ (ಐ.ಸಿ.ಎಫ್.ಟಿ.ಯು) ಪ್ರಪಂಚದ ಕಾರ್ಮಿಕ ಒಕ್ಕೂಟ (ಡಬ್ಲ್ಯೂ.ಸಿ.ಎಲ್.) ಗಳು ಮುಖ್ಯ ಪಾತ್ರಧಾರಿಗಳಾಗಿ ಕಾರ್ಮಿಕ ಸಂಘಗಳಿಗೆ ಬಾಲಕಾರ್ಮಿಕತೆಯ ನಿವಾರಣೆ ಬಗ್ಗೆ ತಮ್ಮದೇ ಆದ ನೀತಿ ನಿಯಮಗಳನ್ನು ಹಾಗೂ ಕಾರ್ಯಕ್ರಮ ರೂಪಿಸಲು, ಅಭಿವೃದ್ಧಿ ಪಡಿಸಲು ಮತ್ತು ಅನುಷ್ಠಾನ ಮಾಡಲು ಸಹಾಯ ಮಾಡಿವೆ. ಕಾರ್ಮಿಕ ಸಂಘಟನೆಗಳಿಗೆ ಬಾಲಕಾರ್ಮಿಕತೆಯ ನಿವಾರಣೆಯ ಕಾರ್ಯಕ್ರಮ ಕೈಗೆತ್ತಿಕೊಳ್ಳಲು ಉಪಯುಕ್ತವಾದ ಸಾಧನಗಳನ್ನು ತಯಾರಿಸಿಕೊಟ್ಟಿವೆ.

ಬಾಲಕಾರ್ಮಿಕತೆಯ ವಿಷಯ ಕಾರ್ಮಿಕ ಸಂಘಟನೆಗಳಿಗೆ ಹೊಸದು ಸಂಪ್ರದಾಯಕವಾಗಿ ಕಾರ್ಮಿಕ ಸಂಘಟನೆಗಳು ಮತ್ತು ಮಾಲೀಕರ ಸಂಘಗಳು ಔಪಚಾರಿಕ ಆರ್ಥಿಕ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ಅಲ್ಲಿ ಖಾಸಗಿಯವರ ಆಸಕ್ತಿಯನ್ನು ವಿಶ್ಲೇಷಿಸುತ್ತಾರೆ. ಬಾಲಕಾರ್ಮಿಕತೆಯ ಅತೀ ವಿಸ್ತಾರವಾದ ಅನೌಪಚಾರಿಕ ಆರ್ಥಿಕ ವ್ಯವಸ್ಥೆಯ ಕಪ್ಪು ಬದಿ ಆಗಿದ್ದು ಹಾಗೂ ಜನಸಾಮಾನ್ಯರ ಆಸಕ್ತಿದಾಯಕ ವಿಷಯವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಸಾಮಾಜಿಕ ಭಾಗೀದಾರರಲ್ಲಿ ಅವರ ಅನುಭವ ಮತ್ತು ಸಾಮರ್ಥ್ಯಕ್ಕೆ ಅನುಗುಣವಾದ ಈ ಸಾರ್ವಜನಿಕ ಹಿತಾಸಕ್ತಿ ವಿಚಾರದಲ್ಲಿ ಕಳಕಳಿ ಹೆಚ್ಚುತ್ತಿರುವುದನ್ನು ನಾವು ಕಂಡಿದ್ದೇವೆ. ಆದರೆ ಇದನ್ನು ಅವರ ಸಂಪ್ರದಾಯಿಕ "ಖಾಸಗಿ ಆಸಕ್ತಿಯ ಮಂಡನೆ ವ್ಯವಸ್ಥೆ" ಯಿಂದ ಬಿಡಿಸಲು ಸಾಧ್ಯವಿಲ್ಲ. ತೊಂದರೆಗೊಳಗಾದ ಮಕ್ಕಳನ್ನು ಕಾರ್ಮಿಕರೆಂದು ಪರಿಗಣಿಸುತ್ತಿಲ್ಲ, ಅವರನ್ನು ಕಾರ್ಮಿಕ ಸಂಘಟನೆಗಳು (ಅಥವಾ ಇನ್ನು ಯಾವುದೇ ಗುಂಪುಗಳು) ಪ್ರತಿನಿಧಿಸುತ್ತಿಲ್ಲಾ. ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಗೆ ತಮ್ಮ ಬೆಂಬಲ ಹಾಗೂ ಆಸಕ್ತಿ ಅವಶ್ಯಕವೆಂದು ಮನಗಂಡಿವೆ. ಮೊದಲನೆಯದಾಗಿ ಬಾಲಕಾರ್ಮಿಕತೆ ಸದಸ್ಯರ ಜೀವನವನ್ನು ಬಾಧಿಸುತ್ತವೆ. ಕಾರ್ಮಿಕರ ಮಕ್ಕಳು ಮತ್ತು ಸಂಬಂಧಿಕರು ಬಾಲಕಾರ್ಮಿಕರಾಗಿರುತ್ತಾರೆ. ಅವರು ಇದನ್ನು ಅವಶ್ಯಕ ಹಾಗು ಕುಟುಂಬಕ್ಕೆ ಹೆಚ್ಚು ಆದಾಯ ತರಲು ಒಂದು ಅವಶ್ಯಕವಾದ ವ್ಯವಸ್ಥೆ ಎಂದು ಗ್ರಹಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಕಾರ್ಮಿಕ ಸಂಘದ ಪದಾಧಿಕಾರಿಗಳು ತಮ್ಮ ಮನೆಯಲ್ಲಿ ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಳ್ಳುತ್ತಾರೆ. ಅವರು ಇದು ತಪ್ಪು ಎಂದು ಭಾವಿಸುವುದಿಲ್ಲ. ಈ ಎಲ್ಲಾ ವಿಚಾರಗಳಿಂದ, ಕಾರ್ಮಿಕ ಸಂಘಗಳ ಸದಸ್ಯರಿಗೆ ಬಾಲಕಾರ್ಮಿಕತೆಯ ಬಗ್ಗೆ ಹೆಚ್ಚು ನಿಖರವಾಗಿ, ಐ.ಎಲ್.ಓ ದ ಕನಿಷ್ಠ ಪ್ರಾಯದ ಸಮಾವೇಶ ಮತ್ತು ನಿಕೃಷ್ಟ ರೂಪದ ಬಾಲಕಾರ್ಮಿಕತೆಯ ಸಮಾವೇಶದ ಆಧಾರದಲ್ಲಿ ತಿಳಿ ಹೇಳುವುದು ಅವಶ್ಯಕ.

ಎರಡನೆಯದಾಗಿ ಎರಡು ಪರಸ್ಪರ ಸಹಾಯ ಮಾಡಿಕೊಳ್ಳುವ ಪ್ರಭಾವಗಳು ಕಾರ್ಮಿಕ ಸಂಘಟನೆಯ ಸದಸ್ಯರನ್ನು ಈ ವಿಚಾರದಲ್ಲಿ ಸೂಕ್ಷ್ಮತೆಗೊಳಿಸಿವೆ. ಹಲವಾರು ಸರಕಾರೇತರ ಸಂಸ್ಥೆಗಳು ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಆರಂಭಿಸಿ (ಸರಕಾರ ಮತ್ತು ಸಾಮಾಹಿಕ ಪಾಲುದಾರರ ಜೊತೆಯಲ್ಲಿ) ತಾವು ಸಹ "ಭಾಗೀದಾರರು" ಎಂಬುದಾಗಿ ಗುರುತಿಸಿಕೊಂಡಿರುತ್ತಾರೆ. ಬಾಲಕಾರ್ಮಿಕತೆಯ ನಿವಾರಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸಿ ಹಾಗೂ ಅಂತರಾಷ್ಟ್ರೀಯ ಮಟ್ಟದ ಚಳುವಳಿಗೆ ಸಂಬಂಧ ಕಲ್ಪಿಸಿಕೊಂಡಿದ್ದರಿಂದ ಅವರು ಹೆಚ್ಚು ಸಾಮಾಜಿಕ ಶಕ್ತಿಯನ್ನು ಹೊಂದಿದ್ದು ಹಾಗೂ ಹಲವಾರು ಗುಂಪುಗಳಿಂದ ಹೆಚ್ಚು ಮನ್ನಣೆ ಗಳಿಸಿರುತ್ತಾರೆ. ಆದುದರಿಂದ ಸಾಮಾಜಿಕ ಪಾಲುದಾರರು ಅವರ




ಇರುವಿಕೆಯನ್ನು ಗುರುತಿಸದೆ ಇರಲು ಸಾಧ್ಯವಿಲ್ಲ. ಅಂತಾರಾಷ್ಟ್ರೀಯ ಟ್ರೇಡ್ ಯೂನಿಯನ್‌ನ ಒಕ್ಕೂಟವು ಬಾಲಕಾರ್ಮಿಕತೆಯನ್ನು ಪ್ರಪಂಚದಾದ್ಯಂತ ನಿವಾರಿಸುವ ಬದ್ಧತೆಯನ್ನು ಹೊಂದಿದ್ದರಿಂದ ಸೂಕ್ಷ್ಮತೆಗೊಳಿಸುವ ಪ್ರಕ್ರಿಯೆ ಇನ್ನಷ್ಟು ಜೋರಾಗಿ ಅನುಷ್ಠಾನವಾಗಲು ಆರಂಭವಾಯಿತು. ಬಾಲಕಾರ್ಮಿಕತೆಯ ವಿಷಯದಲ್ಲಿ ಸೂಕ್ಷ್ಮತೆಯನ್ನು ಹೊಂದಿದ ಕಾರ್ಮಿಕ ಸಂಘಟನೆಗಳು, ಬಾಲಕಾರ್ಮಿಕತೆಯ ವಿರುದ್ಧದ ಚಳುವಳಿಯಲ್ಲಿ ಭಾಗವಹಿಸಲು ಬಲವಾದ ಕಾರಣಗಳು ಇವೆ. ಬಾಲಕಾರ್ಮಿಕತೆಗೆ ಹಲವಾರು ಆಯಾಮಗಳಿದ್ದು, ಇದು ಬಹಳ ಸಂಕೀರ್ಣವಾದ ಪ್ರಕ್ರಿಯೆ ಆಗಿದ್ದು, ರಾಷ್ಟ್ರೀಯ ಸರಕಾರಗಳು ಮಾತ್ರ ಇದನ್ನು ನಿವಾರಿಸಲು ಸಾಧ್ಯವಿಲ್ಲ. ಬಾಲಕಾರ್ಮಿಕತೆ ದೇಶಗಳ ಗಡಿ ದಾಟಿದ್ದು ಹಾಗೂ ಸಮಾಜದ ಎಲ್ಲಾ ವಿಭಾಗಗಳಲ್ಲಿ ಇದ್ದು ಇದರ ನಿವಾರಣೆಗೆ ಅಂತಾರಾಷ್ಟ್ರೀಯ, ರಾಷ್ಟ್ರೀಯ, ವಲಯ ಹಾಗೂ ಸ್ಥಳೀಯ ಮಟ್ಟದ ಭಾಗೀದಾರರೆಲ್ಲ ಸೇರಿಕೊಂಡು ಪರಿಣಾಮಕಾರಿಯಾಗಿ ಸಮಸ್ಯೆಯನ್ನು ನಿವಾರಿಸಲು ಪ್ರಯತ್ನಿಸುವುದು ಅವಶ್ಯಕ. ಕಾರ್ಮಿಕ ಸಂಘಟನೆಗಳು ಬಲವಾದ ಒತ್ತಡವನ್ನು ತರುವ ಗುಂಪುಗಳಾಗಿದ್ದು, ಸಾಂಘಿಕ ಅನುಸಂಧಾನದಲ್ಲಿ ಹಾಗೂ ಸಮಾಜವನ್ನು ಸಜ್ಜುಗೊಳಿಸುವಲ್ಲಿ ರಾಷ್ಟ್ರೀಯಮಟ್ಟದಲ್ಲಿ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಹತ್ವದ ಪಾತ್ರ ಹೊಂದಿವೆ. ಅವರು ಸರಕಾರ ಮತ್ತು ಮಾಲೀಕರೊಂದಿಗೆ ಬಾಲಕಾರ್ಮಿಕತೆಯ ನಿವಾರಣೆಗೆ ಮತ್ತು ಅವರ ಪುನರ್ವಸತಿಗೆ ಮತ್ತು ಇತರ ವಿಚಾರಗಳಿಗೆ ಮಾತುಕತೆ ನಡೆಸಲು ಸಾಧ್ಯ, ಇದಲ್ಲದೆ ಬಾಲಕಾರ್ಮಿಕತೆಯ ನಿವಾರಣೆಯಲ್ಲಿ ಕಾರ್ಮಿಕ ಸಂಘಗಳು ಒಂದು ವಿಶಿಷ್ಠ ಸ್ಥಾನದಲ್ಲಿವೆ. ಅವರಿಗೆ ದೊಡ್ಡ ಸಂಖ್ಯೆಯ ಪ್ರೌಢ ಕಾರ್ಮಿಕರು ಹಾಗೂ ಅವರ ಕುಟುಂಬಗಳ ಸಂಪರ್ಕ ಇದೆ. ಅವರಿಗೆ ಮಕ್ಕಳ ಶಿಕ್ಷಣದ ಬಗ್ಗೆ, ಮಕ್ಕಳನ್ನು ಅಪಾಯಕಾರಿ ಕೆಲಸಗಳಿಂದ ರಕ್ಷಿಸುವ ಬಗ್ಗೆ, ಮಕ್ಕಳು ಬೇಗನೆ ಕೆಲಸ ಮಾಡಲು ಆರಂಭಿಸುವ ಬಗ್ಗೆ, ಇತರರೊಂದಿಗೆ ವಿಚಾರ ವಿನಿಮಯ ಮಾಡಲು ಸಾಧ್ಯವಿದೆ. ಕಾರ್ಮಿಕ ಸಂಘಟನೆಗೆ ಮಾನವ ಹಕ್ಕುಗಳನ್ನು (ಕಾರ್ಮಿಕರ ಹಕ್ಕು) ರಕ್ಷಿಸಿದ ಚರಿತ್ರೆ ಇದೆ. ಬಾಲಕಾರ್ಮಿಕ ಮಕ್ಕಳ ಹಾಗೂ ಪ್ರೌಢರ ಹಕ್ಕುಗಳನ್ನು ಉಲ್ಲಂಘಿಸುತ್ತದೆ. ಬಾಲಕಾರ್ಮಿಕತೆ ಕಡಿಮೆ ವೆಚ್ಚದ ಕಾರ್ಮಿಕರನ್ನು ಒದಗಿಸುವುದರಿಂದ, ಕೂಲಿಯ ದರ ಕಡಿಮೆ ಆಗುತ್ತಿದೆ.

ಆದುದರಿಂದ ಬಾಲಕಾರ್ಮಿಕತೆ ಕಾರ್ಮಿಕ ಸಂಘಟನೆ ಹೆಚ್ಚು ಸಂಬಳಕ್ಕಾಗಿ, ಉತ್ತಮ ಕೆಲಸದ ವಾತಾವರಣಕ್ಕಾಗಿ ಹೋರಾಡುವ ಶಕ್ತಿಯನ್ನು ಕಡಿಮೆ ಮಾಡುತ್ತದೆ. ಇದಲ್ಲದೆ ಬಾಲಕಾರ್ಮಿಕತೆ ಪ್ರೌಢರ ನಿರುದ್ಯೋಗಕ್ಕೆ ದಾರಿ ಮಾಡಿಕೊಡುತ್ತದೆ. ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ ಮತ್ತು ಪ್ರೌಢರು ಉದ್ಯೋಗದಿಂದ ವಂಚಿತರಾಗುತ್ತಾರೆ. ಇದು ಇಬ್ಬರ ಭವಿಷ್ಯವನ್ನು ತೊಂದರೆಗೆ ಒಳಪಡಿಸುತ್ತದೆ.

### 3.15.2 ಮುಖ್ಯ ವಿಷಯಗಳು

- ಬಾಲಕಾರ್ಮಿಕತೆ ಹಲವಾರು ಕಾರ್ಮಿಕ ಸಂಘಟನೆಯ ಸದಸ್ಯರ ಜೀವನವನ್ನು ತೊಂದರೆಗೆ ಸಿಲುಕಿಸುತ್ತದೆ.
- ಕಾರ್ಮಿಕ ಸಂಘಟನೆಗಳನ್ನು ಸರಕಾರೇತರ ಸಂಸ್ಥೆಗಳು ಮತ್ತು ವಿಶ್ವದ ಬಾಲಕಾರ್ಮಿಕತೆಯ ನಿವಾರಣೆಯ ಚಳುವಳಿಯು ಸೂಕ್ಷ್ಮತೆಗೊಳಿಸಿದೆ.
- ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯ ನಿವಾರಣೆಗೆ ಬದ್ಧತೆ ಹೊಂದಿದೆ. ಆದುದರಿಂದ ಅವುಗಳ ರಾಷ್ಟ್ರೀಯ ಸಂಘಟನೆಗಳ ಮೇಲೆ ಒತ್ತಡ ತರುತ್ತಿವೆ.
- ಬಾಲಕಾರ್ಮಿಕತೆ ಒಂದು ಸಂಕೀರ್ಣವಾದ ವಿಷಯ, ಇದರ ನಿವಾರಣೆಗೆ ಅಂತಾರಾಷ್ಟ್ರೀಯ, ರಾಷ್ಟ್ರೀಯ, ಸ್ಥಳೀಯ ಮಟ್ಟದ ಹಲವಾರು ಸಂಘಟನೆಗಳ ನೆರವು ಅಗತ್ಯ.
- ದೊಡ್ಡ ಸಂಖ್ಯೆಯ ಪ್ರೌಢ ಕಾರ್ಮಿಕರು ಹಾಗೂ ಅವರ ಕುಟುಂಬಗಳ ಸಂಪರ್ಕ ಇರುವ ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯ ನಿವಾರಣೆಯ ಪ್ರಕ್ರಿಯೆಯಲ್ಲಿ ಒಂದು ವಿಶಿಷ್ಠ ಸ್ಥಾನದಲ್ಲಿವೆ.
- ಕಾರ್ಮಿಕ ಸಂಘಟನೆಗಳು ಚಾರಿತ್ರಿಕವಾಗಿ ಮಾನವ ಹಕ್ಕುಗಳನ್ನು ರಕ್ಷಿಸುತ್ತವೆ. ಬಾಲಕಾರ್ಮಿಕತೆ ಪ್ರೌಢರ ಮತ್ತು ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸುತ್ತಿವೆ.






ಬಾಲಕಾರ್ಮಿಕತೆಯ ನಿವಾರಣೆಯಲ್ಲಿ ಕಾರ್ಮಿಕ ಸಂಘಟನೆಗಳ ಭಾಗವಹಿಸುವಿಕೆ ಬರೀ ಉತ್ತಮ ಕೆಲಸ ಮಾಡುವ ವ್ಯವಸ್ಥೆ ಅಲ್ಲ ಹಾಗೂ ಸಮಸ್ಯೆಯ ಗಂಭೀರತೆಯ ಪರಿಣಾಮ ಅಲ್ಲ. ಅವರಿಗೆ ಬೇರೆ ದಾರಿಯೇ ಇಲ್ಲ. ಅವರು ಬಾಲಕಾರ್ಮಿಕತೆಯ ನಿವಾರಣೆಗಾಗಿ ಕೆಲಸ ಮಾಡುವುದು ಅವರ ಉಳಿವು/ಅಳಿವಿನ ಪ್ರಶ್ನೆ. ಅವರು ಎದುರಿಸುತ್ತಿರುವ ದೊಡ್ಡ ಅಡೆತಡೆಯೆಂದರೆ ಹಣದ ಕೊರತೆ. ಇದರಿಂದ ಅವರಿಗೆ ಬಾಲಕಾರ್ಮಿಕತೆ ನೀತಿಯನ್ನು ಅಭಿವೃದ್ಧಿ ಪಡಿಸಲು ಹಾಗೂ ಜನರನ್ನು ಅದಕ್ಕಾಗಿ ನಿಯೋಜಿಸಲು ಸಾಧ್ಯವಾಗುತ್ತಿಲ್ಲ.

### 3.15.3 ಬಾಲಕಾರ್ಮಿಕತೆಯ ಬಗ್ಗೆ ನಿಗದಿಪಡಿಸಿದ ಉದ್ದೇಶಗಳು

- ಅಂತಾರಾಷ್ಟ್ರೀಯ ಕಾರ್ಮಿಕ ಮಾನಗಳಿಗೆ ಮಾಲೀಕರಿಂದ ಹಾಗೂ ಸರಕಾರದಿಂದ ಸಾರ್ವತ್ರಿಕ ಮನ್ನಣೆ ದೊರಕಲು ಪ್ರಯತ್ನಗಳಾಗಬೇಕು.
- ಮಕ್ಕಳನ್ನು ಬಾಲಕಾರ್ಮಿಕತೆಯ ಶೋಷಣೆಗೆ ಒಳಪಡಿಸುವ ಆರ್ಥಿಕ, ಸಾಮಾಜಿಕ, ರಾಜಕೀಯ ವಿಚಾರಗಳನ್ನು ಮೊದಲು ಪರಿಹರಿಸಿರಿ.
- ಎಲ್ಲಾ ಮಕ್ಕಳಿಗೆ ಶಿಕ್ಷಣ ಒದಗಿಸುವ ಮೂಲಕ ಬಾಲಕಾರ್ಮಿಕತೆಯನ್ನು ತಡೆಯಬೇಕು.
- ಐ.ಎಲ್‌.ಓ ನ ನಿಕೃಷ್ಟ ರೀತಿಯ ಬಾಲಕಾರ್ಮಿಕತೆಯ ಪ್ರಕಾರಗಳ ಸಮಾವೇಶ (182) ರಾಷ್ಟ್ರ ಮಟ್ಟದಲ್ಲಿ ಸ್ವೀಕರಿಸುವಂತೆ ಮಾಡಿ ಹಾಗೂ ಅದನ್ನು ಸಂಪೂರ್ಣವಾಗಿ ಬೆಂಬಲಿಸಿ.
- ಪ್ರೌಢರಿಗೆ ಉದ್ಯೋಗ ನಿರ್ಮಿಸುವುದರ, ರಕ್ಷಣೆ ಕೊಡುವುದರ, ಉತ್ತಮ ಸಂಭಾವನೆ ಕೊಡಿಸುವುದರ ಮೂಲಕ ಬಾಲಕಾರ್ಮಿಕತೆಯನ್ನು ನಿರ್ಮೂಲನೆ ಮಾಡಿರಿ.
- ಐ.ಎಲ್‌.ಓ ದ ಕನಿಷ್ಠ ವಯೋಮಿತಿ ಸಮಾವೇಶ (138) ಅನ್ನು ಸಂಪೂರ್ಣವಾಗಿ ಸ್ವೀಕರಿಸುವಂತೆ ಹಾಗೂ ಅನುಷ್ಠಾನ ಮಾಡುವಂತೆ ನೋಡಿಕೊಳ್ಳಬೇಕು.
- ಅತೀ ಶೀಘ್ರದಲ್ಲಿ ನಿಕೃಷ್ಟ ರೀತಿ ಬಾಲಕಾರ್ಮಿಕತೆಯ ಪ್ರಕಾರಗಳನ್ನು ಪರಿಣಾಮಕಾರಿಯಾಗಿ ನಿಷೇಧಿಸುವಂತೆ ಮಾಡುವುದು.
- ಬಾಲಕಾರ್ಮಿಕತೆಯನ್ನು ವ್ಯಾಖ್ಯಾನಿಸಲು, ಗುರುತಿಸಲು ಹಾಗೂ ನಿಷೇಧಿಸಲು ರಾಷ್ಟ್ರೀಯ ಮಟ್ಟದಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸುವುದು.
- ಅಂತಾರಾಷ್ಟ್ರೀಯವಾಗಿ ಮಾರಾಟವಾಗುವ ವಸ್ತುಗಳ ಉತ್ಪಾದನೆಯಲ್ಲಿ ಬಾಲಕಾರ್ಮಿಕತೆಯನ್ನು ನಿಷೇಧಿಸಬೇಕು.
- ಕಾರ್ಪೊರೇಟ್ ನೀತಿ ನಿಯಮಗಳನ್ನು ಐ.ಎಲ್‌.ಓ ಸಮಾವೇಶದ 138 ಮತ್ತು 182 ಕ್ಕೆ ಅನುಗುಣವಾಗಿ ಪ್ರೋತ್ಸಾಹಿಸಿರಿ. ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯನ್ನು ಪ್ರತ್ಯೇಕ ವಿಷಯವಾಗಿ ಪರಿಗಣಿಸುವುದಿಲ್ಲ. ಬಾಲಕಾರ್ಮಿಕತೆಯನ್ನು ನಿವಾರಿಸುವಾಗ ಹೆಚ್ಚು ಸಂಪೂರ್ಣವಾದ ಪ್ರಕ್ರಿಯೆಯನ್ನು ಅನುಸರಿಸುವುದು ಅವಶ್ಯವೆಂದು ಕಾರ್ಮಿಕ ಸಂಘಟನೆಗಳ ಅಭಿಪ್ರಾಯ.
- ಸರಕಾರದ ಬೆಂಬಲವನ್ನು ಮೆಚ್ಚಿದರೂ, ಮಾಲೀಕರ ಬೆಂಬಲದ ಉಪಯೋಗದ ಬಗ್ಗೆ ಕಾರ್ಮಿಕ ಸಂಘಟನೆಗೆ ಬಲವಾದ ನಂಬಿಕೆ ಇಲ್ಲ.
- ಎಲ್ಲಾ ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆ ಒಂದು ಆದ್ಯತೆಯ ವಿಷಯ ಎಂದು ಪರಿಗಣಿಸುತ್ತಿಲ್ಲ. ಕೆಲವರು ಬಾಲಕಾರ್ಮಿಕತೆ ತಮ್ಮ ಸಮಸ್ಯೆ ಅಲ್ಲ ಎಂದು ಪರಿಗಣಿಸುತ್ತಾರೆ. ಕಾರಣ ಬಾಲಕಾರ್ಮಿಕತೆ ಹೆಚ್ಚಾಗಿ ಇರುವುದು ಅಸಂಘಟಿತ ಕ್ಷೇತ್ರಗಳಲ್ಲಿ, ಕೆಲವರಿಗೆ ಆಸಕ್ತಿ ಇಲ್ಲ. ಕಾರಣ ಬಾಲಕಾರ್ಮಿಕತೆ ಅವರ ದೇಶಗಳಲ್ಲಿ ಅಪರೂಪದ ವಿಚಾರ. ಈ ದೇಶಗಳಲ್ಲೂ, ಕೆಲವು ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯ ನಿವಾರಣೆಗಾಗಿ ಕೆಲಸ ಮಾಡುತ್ತಿವೆ. ಅವರು






ಉದ್ದೇಶಗಳನ್ನು ನಿರ್ಧರಿಸುವಲ್ಲಿ ಮಾತ್ರ ಪ್ರೊ ಆ್ಯಕ್ಟಿವ್ ಆಗಿರದೆ, ಉದ್ದೇಶಗಳನ್ನು ಸಾಧಿಸುವಲ್ಲಿ ಸಹ ಅವರು ತಮ್ಮೆಲ್ಲಾ ಶಕ್ತಿಗಳನ್ನು ಮತ್ತು ಸಂಪನ್ಮೂಲಗಳನ್ನು ತೊಡಗಿಸಿರುತ್ತಾರೆ. ಅವರ ಕ್ರಿಯಾ ಯೋಜನೆಯಲ್ಲಿ ಈ ಕೆಳಗಿನವುಗಳು ಮುಖ್ಯವಾಗುತ್ತವೆ.

- ಅರಿವನ್ನು ಹೆಚ್ಚಿಸುವ ಕಾರ್ಯಕ್ರಮಗಳಾದ ಸೆಮಿನಾರ್, ಸಮಾವೇಶ, ಕಾರ್ಯಾಗಾರ, ಆಂದೋಲನ ಇತ್ಯಾದಿ.
- ಕಾನೂನುಗಳ ಮತ್ತು ಸಮಾವೇಶಗಳ ಅನುಷ್ಠಾನ ಮತ್ತು ಪರಿವೀಕ್ಷಣೆ
- ಶಿಕ್ಷಣ, ವೃತ್ತಿ ತರಬೇತಿ, ಪುನರ್ವಸತಿಯ ಮೂಲಕ ನೇರವಾಗಿ ಸಹಾಯ (ಬೀದಿ ಮಕ್ಕಳು, ಬಾಲಯೋಧರು, ನಿರ್ಗತಿಕರು, ವೇಶ್ಯಾ ವೃತ್ತಿಯವರು, ಜೀತ ಕಾರ್ಮಿಕರು)
- ಪರೋಕ್ಷ ಸಹಾಯ – ಪ್ರೌಢರಿಗೆ ಕನಿಷ್ಠ ಕೂಲಿ ನಿಯಮದಂತೆ ಸಂಬಳ, ಬಡತನ ನಿವಾರಣೆ, ಉದ್ಯೋಗ ನಿರ್ಮಾಣ.
- ನಿಗದಿತ ವಲಯಗಳಲ್ಲಿ ಬಾಲಕಾರ್ಮಿಕತೆಯ ನಿವಾರಣೆಗೆ ಕಾರ್ಯಕ್ರಮಗಳು, ವಿಶೇಷವಾಗಿ ಕೃಷಿ, ಗಣಿ, ಸಿದ್ಧ ಉಡುಪು, ಮನೆಕೆಲಸ, ಅಸಂಘಟಿತ ಕ್ಷೇತ್ರಗಳು
- ಬಾಲಕಾರ್ಮಿಕತೆಯ ಬಗ್ಗೆ ಸಂಶೋಧನೆ.

### 3.15.4 ಬಾಲಕಾರ್ಮಿಕತೆಯ ನಿವಾರಣೆಗೆ ಜನಾನುರಾಗಿ ಕಾರ್ಯಕ್ರಮಗಳು

- ಕಾರ್ಮಿಕ ಸಂಘಟನೆಯ ಉದ್ಯೋಗಸ್ಥರಿಗೆ ಅರಿವು ಹೆಚ್ಚಿಸುವ ತರಬೇತಿಗಳು
- ಪ್ರೌಢಕಾರ್ಮಿಕರಿಗೆ ಹೆಚ್ಚು ಸಂಬಳದ ಬಗ್ಗೆ ಆಂದೋಲನ
- ಆಂದೋಲನಗಳು. ಜನರು ಒಟ್ಟು ಸೇರಿಸುವ ಕಾರ್ಯಕ್ರಮಗಳು, ಶಿಕ್ಷಣದ ಮೂಲಕ ಅರಿವು ಹೆಚ್ಚಿಸುವುದು ಮತ್ತು ಕಾರ್ಯಾಗಾರಗಳು.
- ಅಂತರಾಷ್ಟ್ರೀಯ ನಿಯಮಗಳನ್ನು ರಾಷ್ಟ್ರೀಯ ಕಾನೂನು ಆಗಿ ಪರಿವರ್ತಿಸಲು ಆಗ್ರಹ
- ಬೇರೆ ಬೇರೆ ಭಾಗೀದಾರರ ಮತ್ತು ಸಾಮಾನ್ಯ ಜನರ ಅರಿವನ್ನು ಹೆಚ್ಚಿಸುವುದು.
- ಐ.ಎಲ್.ಓ ದ 138 ಮತ್ತು 182 ಸಮಾವೇಶಗಳನ್ನು ಅನುಮೋದಿಸಲು ಆಂದೋಲನಗಳು.
- ಕಾನೂನುಗಳನ್ನು ಉತ್ತಮಪಡಿಸಲು ಮತ್ತು ಅನುಷ್ಠಾನಕ್ಕೆ ತ್ರಿಗುಣಾತ್ಮಕ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳುವುದು.
- ಐ.ಎಲ್.ಓ ದ ಸಮಾವೇಶ 182 ಮತ್ತು 138 ಅನ್ನು ಅನುಷ್ಠಾನ ಮಾಡಲು ಆಂದೋಲನ.
- ರಾಷ್ಟ್ರೀಯ ಸರಕಾರಗಳ ಕಾರ್ಯಕ್ರಮದಲ್ಲಿ ಭಾಗವಹಿಸುವುದು.
- ಶಿಕ್ಷಣದ ಹಕ್ಕನ್ನು ಪ್ರತಿಪಾದಿಸುವುದು.
- ಬಾಲಕಾರ್ಮಿಕತೆಗೆ ಸಂಬಂಧಿ ವಿಷಯಗಳ ಮೇಲೆ ಕೆಲಸ ಮಾಡುವುದು.
- ಸಂಶೋಧನೆ, ಮಾಹಿತಿ ಸಂಗ್ರಹ, ಸತ್ಯ ಸಂಗತಿಗಳನ್ನು ಕಂಡುಹಿಡಿಯುವುದು.
- ಮಕ್ಕಳು ಕೆಲಸ ಮಾಡುತ್ತಿರುವ ಪ್ರದೇಶ ಮತ್ತು ವಲಯಗಳನ್ನು ಗುರಿ ಮಾಡುವುದು.
- ಕಾರ್ಮಿಕ ಸಂಘಟನೆಗಳ ಬಲವರ್ಧನೆ – ಬಾಲಕಾರ್ಮಿಕತೆ ಬಗ್ಗೆ.
- ವಸ್ತುಗಳ ತಯಾರಕರು ನೀತಿ ನಿಯಮಗಳನ್ನು ಪಾಲಿಸುವಂತೆ ಒತ್ತಡ ತರುವುದು.
- ನೀತಿ ನಿಯಮಗಳನ್ನು ಮತ್ತು ಸಾಂಘಿಕ ಒಪ್ಪಂದಗಳನ್ನು ಪರಿವೀಕ್ಷಣೆ ಮಾಡುವುದು.





- ಕುಟುಂಬಗಳಿಗೆ ಆದಾಯ ಹೆಚ್ಚಿಸುವ ಕಾರ್ಯಕ್ರಮಗಳನ್ನು ಪ್ರಚಾರ ಮಾಡುವುದು.
- ಸಂಸ್ಥೆಗಳ ಅಭಿವೃದ್ಧಿ
- ಸಾಂಘಿಕ ಅನುಸಂಧಾನ
- ಸಾಮಾಜಿಕ ನಿರ್ದೇಶನಗಳು ಮತ್ತು ಸಾಮಾಜಿಕ ಲೇಬಲಿಂಗ್
- ಯೋಜನೆಗಳು ಮತ್ತು ಕಾರ್ಯಕ್ರಮಗಳ ಸಹಾಯದಿಂದ ನೇರ ನೆರವು.
- ಅಧ್ಯಯನಗಳ ದಾಖಲೀಕರಣ
- ಮಕ್ಕಳ ಪುನರ್ವಸತಿ – ಸಹಾಯ ವ್ಯವಸ್ಥೆಯ ಬಳಕೆ
- ಬಾಲಕಾರ್ಮಿಕರು ಮಾಡಿದ ವಸ್ತುಗಳನ್ನು ಬಹಿಷ್ಕರಿಸುವುದು.

### 3.15.15 ಬಾಲಕಾರ್ಮಿಕತೆಯ ನಿವಾರಣೆಗೆ ಕಾರ್ಮಿಕ ಸಂಘಟನೆ ಜೊತೆಯಲ್ಲಿ ಐ.ಎಲ್.ಓ ನ ತಾಂತ್ರಿಕ ಸಹಕಾರ

**ಬಾಲಕಾರ್ಮಿಕತೆಯ ನಿವಾರಣೆಗೆ ಅಂತಾರಾಷ್ಟ್ರೀಯ ಕಾರ್ಯಕ್ರಮಗಳು (ಐ.ಪಿ.ಇ.ಸಿ)**


ಆರಂಭದಲ್ಲಿ ಅಂದರೆ 1992 ರಲ್ಲಿ ಐ.ಪಿ.ಇ.ಸಿ ಕಾರ್ಯಕ್ರಮದಲ್ಲಿ ಕಾರ್ಮಿಕ ಸಂಘಟನೆಗಳ ಭಾಗವಹಿಸುವಿಕೆ ಕಡಿಮೆ. ಸರಕಾರೇತರ ಸಂಸ್ಥೆಗಳ ಭಾಗವಹಿಸುವಿಕೆ ಹೆಚ್ಚು. ಈಗ ಐ.ಪಿ.ಇ.ಸಿ ಯಲ್ಲಿ ಕಾರ್ಮಿಕ ಸಂಘಟನೆಗಳ ಪಾತ್ರ ಹೆಚ್ಚಿಸಲು ಪ್ರಯತ್ನ ಆಗಿದೆ. 1992–93 ರಲ್ಲಿ ಹತ್ತು ಕಾರ್ಯಕ್ರಮಗಳು ಅಂದರೆ ಶೇ.7.2 ಐ.ಪಿ.ಇ.ಸಿ ಕಾರ್ಯಕ್ರಮಗಳು ಕಾರ್ಮಿಕ ಸಂಘಟನೆ ಜೊತೆಯಲ್ಲಿ ಅನುಷ್ಠಾನ ಮಾಡಲಾಗಿದೆ. ಅನುಷ್ಠಾನ 1994–95 ರಲ್ಲಿ ಶೇ.11.9 ಏರಿತು ಮತ್ತು 1995–96 ರಲ್ಲಿ ಶೇ.15.6 ಏರಿತು. ಐ.ಪಿ.ಇ.ಸಿ ಯಲ್ಲಿ ಇನ್ನು ಹೆಚ್ಚಿನ ಕಾರ್ಮಿಕ ಸಂಘಗಳ ಭಾಗವಹಿಸುವಿಕೆಯನ್ನು ಪಡೆಯಲು ಐ.ಎಲ್.ಓ ಪ್ರಯತ್ನ ಮಾಡುತ್ತಿದೆ.

ಐ.ಪಿ.ಇ.ಸಿ ಕಾರ್ಯಕ್ರಮಗಳು ಏಷ್ಯಾದಲ್ಲಿ ಆರಂಭವಾದವು. ಏಷ್ಯಾದಲ್ಲಿ ಕಾರ್ಮಿಕ ಸಂಘಟನೆಗಳ ಜೊತೆಯಲ್ಲಿ ಅತೀ ಹೆಚ್ಚು ಐ.ಪಿ.ಇ.ಸಿ ಕಾರ್ಯಕ್ರಮಗಳು ಇವೆ. ಅತೀ ಹೆಚ್ಚು ಕಾರ್ಯಕ್ರಮಗಳು ಭಾರತದಲ್ಲಿ ಕಂಡು ಬಂದಿವೆ (22) ಅದಾದ ನಂತರ ಬಾಂಗ್ಲಾದೇಶ (12). ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿ ಸಹ ಕಾರ್ಮಿಕ ಸಂಘಟನೆಗಳು ಉತ್ತಮವಾಗಿ ಐ.ಪಿ.ಇ.ಸಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆ. ಬ್ರೆಜಿಲ್‌ನಲ್ಲಿ 18 ಕಾರ್ಯಕ್ರಮಗಳಿವೆ. ಆದುದರಿಂದ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಗಳ ಪಾತ್ರ ಬಹಳ ಕಡಿಮೆ ಇರುವುದು. ನಾರ್ವೆ ಸರಕಾರ ಇದಕ್ಕಾಗಿ ಒಂದು ವಿಶೇಷ ಕಾರ್ಯಕ್ರಮ ರೂಪಿಸಿದೆ.

### 3.15.5.1 ಬಾಲಕಾರ್ಮಿಕತೆಯನ್ನು ನಿವಾರಿಸಲು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಗಳ ತಂತ್ರ ರೂಪಿಸುವುದು.

ಈ ಯೋಜನೆ ಐ.ಪಿ.ಇ.ಸಿ ಯ ಭಾಗ ಅಲ್ಲ. ಇದನ್ನು ಐ.ಎಲ್.ಓ ನ ಕೆಲಸಗಾರರ ಚಟುವಟಿಕೆಗಳ ಬ್ಯೂರೋ (ಎ.ಸಿ.ಟಿ.ಆರ್.ಎ.ವಿ) ಅನುಷ್ಠಾನ ಮಾಡುತ್ತಿದೆ. ಇದು ಮೂರು ವರ್ಷದ ಎರಡು ಹಂತದ ಯೋಜನೆ. ಮೊದಲ 12 ತಿಂಗಳ ಹಂತದಲ್ಲಿ ಯೋಜನೆಯು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಗಳಿಗೆ ಬಾಲಕಾರ್ಮಿಕತೆಯ ನಿವಾರಣೆಗೆ ಕೆಲಸ ಮಾಡಲು ಅವರ ಬಲವರ್ಧನೆ ಮಾಡಿಕೊಳ್ಳಲು ತಾಂತ್ರಿಕ ಸಲಹೆ, ಸಂಪನ್ಮೂಲದ ಸಹಾಯ ಒದಗಿಸಲಾಗುವುದು. ಇದು ಎರಡನೇ ಹಂತದ ಕ್ಷೇತ್ರದ ಚಟುವಟಿಕೆಗಳಿಗೆ ತಯಾರಿ ಮಾಡಿಕೊಳ್ಳಲು ಸಹಾಯ ಮಾಡುತ್ತಿದೆ. ವಿಶೇಷವಾಗಿ ಇದು ಕೆಲಸಗಾರರ ದೃಷ್ಟಿಯಲ್ಲಿನ ಸಂಶೋಧನೆ ಕ್ಷೇತ್ರವನ್ನು ಗುರುತಿಸುವುದು. ಇದು ಕಾರ್ಮಿಕ ಸಂಘಟನೆಗಳ ನೀತಿ ನಿಯಮಗಳನ್ನು ರೂಪಿಸಲು ಅತ್ಯಂತ ಅವಶ್ಯವಾಗಿರುತ್ತದೆ.





ಎರಡನೇ ಹಂತದಲ್ಲಿ ಆಯ್ದ ವಲಯದಲ್ಲಿರುವ ಹಾಗೂ ಭಾಗವಹಿಸುವ ಸಂಸ್ಥೆಗಳು ಸೂಚಿಸಿದ ರಾಷ್ಟ್ರೀಯ ಮಟ್ಟದ ಕಾರ್ಮಿಕ ಸಂಘಟನೆಗಳ ಬಲವರ್ಧನೆಗೆ ಅವಕಾಶ ಇದೆ. ಅವರ ಕಾರ್ಯಕ್ರಮಗಳಾದ 'ಕಾರ್ಮಿಕ ಶಿಕ್ಷಣ', ಅರಿವನ್ನು ಹೆಚ್ಚಿಸುವ ಕಾರ್ಯಕ್ರಮಗಳು ಮತ್ತು ಮಾನವ ಅಧಿಕಾರದ ಕಾರ್ಯಕ್ರಮಗಳ ಜೊತೆಯಲ್ಲಿ ಬಾಲಕಾರ್ಮಿಕತೆಯನ್ನು ನಿವಾರಿಸಲು ಅರಿವನ್ನು ಹೆಚ್ಚಿಸುವ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಈ ಯೋಜನೆಯ ವಿಶೇಷತೆ ಎಂದರೆ ಕಾರ್ಯಕ್ರಮ ಪೂರ್ತಿ ಆದ ಚಟುವಟಿಕೆಗಳಲ್ಲಿ ಆಯ್ದ ಚಟುವಟಿಕೆಗಳ ಪರೀಕ್ಷೆ ಮತ್ತು ಪ್ರಾತ್ಯಕ್ಷಿಕೆ. ಇದು ಐ.ಎಲ್.ಓ ದ ಮುಂದಿನ ಕಾರ್ಯಕ್ರಮಗಳಿಗೆ ಬುನಾದಿ ಆಗುವುದು.

**3.15.5.2 ಗುರಿಯ ಗುಂಪುಗಳು**

**3.15.5.2.1 ಹೆಚ್ಚು ಅಪಾಯದಲ್ಲಿರುವ ಮಕ್ಕಳು** – ಒತ್ತಾಯದ ಕಾರ್ಮಿಕತೆಯಲ್ಲಿ ಹಾಗೂ ಅಪಾಯಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವ ಮಕ್ಕಳು

**3.15.5.2.2 ಆಯ್ದ ವಲಯಗಳ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಕಾರ್ಮಿಕ ಸಂಘಟನೆಗಳು ಹಾಗೂ ಅವರ ನಾಯಕರುಗಳು ನೇರ ಲಾಭ ಹೊಂದುವವರು.**

**3.15.5.2.3 ಸಾಂಸ್ಥಿಕ ವ್ಯವಸ್ಥೆ**

1. ಯೋಜನೆಯು ಅಂತಾರಾಷ್ಟ್ರೀಯ ಕಾರ್ಮಿಕ ಸಂಘದ ಜೊತೆಯಲ್ಲಿ ಕೆಲಸ ಮಾಡುತ್ತಿದೆ. ಹೆಚ್ಚಾಗಿ ಅವರ ಸಚಿವಾಲಯವನ್ನು ಉಪಯೋಗಿಸಿಕೊಳ್ಳುತ್ತದೆ.
2. ಭಾಗವಹಿಸುವ ಕಾರ್ಮಿಕ ಸಂಘಟನೆ ಗುರುತಿಸಿದ ರಾಷ್ಟ್ರೀಯ ಭಾಗೀದಾರರು, ಚಟುವಟಿಕೆಗಳ ಅನುಷ್ಠಾನಕ್ಕೆ ಅವಶ್ಯವಾದ ಪ್ರಯೋಗಾತ್ಮಕ ಸಹಾಯ ಕೊಡುವರು. ಇದಲ್ಲದೆ ಐ.ಎಲ್.ಓ ದ ಪ್ರಾಂತೀಯ ಹಾಗೂ ವಲಯ ಕಛೇರಿಗಳು, ಎಂ.ಡಿ.ಟಿ ತಜ್ಞರು ಮತ್ತು ಜೆನಿವಾದಲ್ಲಿರುವ ಎ.ಸಿ.ಟಿ.ಆರ್.ಎ.ವಿ ಸಂಸ್ಥೆಯ ಸಿಬ್ಬಂದಿಗಳು ಅವಶ್ಯವಾದ ಸಹಾಯ ಮತ್ತು ಬೆಂಬಲ ಕೊಡುವರು.

**3.15.5.2.4 ಅಭಿವೃದ್ಧಿಯ ಉದ್ದೇಶಗಳು**


ಅಂತಾರಾಷ್ಟ್ರೀಯ ಕಾರ್ಮಿಕ ಸಂಘಗಳು ಪ್ರತಿನಿಧಿಸುತ್ತಿರುವ ವಲಯಗಳಲ್ಲಿನ ಬಾಲಕಾರ್ಮಿಕತೆಯ ನಿವಾರಣೆಗೆ ಸಹಾಯ ಮಾಡುವುದು. ಅವರು ಆ ವಲಯದ ಬಾಲಕಾರ್ಮಿಕತೆಯ ಪ್ರಮಾಣ, ಅವಶ್ಯಕತೆಗಳನ್ನು ಗುರುತಿಸಲು ಹಾಗೂ ಅದರ ನಿವಾರಣೆಗೆ ಸಹಾಯ ಮಾಡಬಹುದಾದ ಉತ್ತರ ಹುಡುಕಲು ಸಹಾಯ ಮಾಡುವುದು. ಅವರು ಕೆಲಸ ಮಾಡುವ ಕೆಲವು ಮುಖ್ಯ ಉದ್ಯಮಗಳು – ವಾಣಿಜ್ಯ, ಕೃಷಿ, ಆಹಾರ, ಹೋಟೆಲ್‌ಗಳು, ಪ್ರವಾಸೋದ್ಯಮ, ಬಟ್ಟೆ ಮತ್ತು ಸಿದ್ಧ ಉಡುಪು ನಿರ್ಮಾಣ, ಕಟ್ಟಡ ಕಟ್ಟುವುದು, ಇಟ್ಟಿಗೆ ಗೂಡುಗಳು, ಗಣಿಗಳು ಮತ್ತು ಬಾಲಕಾರ್ಮಿಕತೆ ಹೆಚ್ಚಾಗಿ ಇರುವ ಕ್ಷೇತ್ರಗಳು.

**3.15.5.2.5 ತಕ್ಷಣದ ಉದ್ದೇಶಗಳು**

ಯೋಜನೆಯು ಮುಗಿಯುವುದರೊಳಗೆ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಗಳ ಬಲವನ್ನು ಹೆಚ್ಚಿಸಿ, ಅವರು ಬಾಲಕಾರ್ಮಿಕತೆಯ ನಿವಾರಣೆಗೆ ಅವಶ್ಯವಾದ ತಾಂತ್ರಿಕ ಮತ್ತು ಸಲಹೆಗಾರಿಕೆ ಸಹಾಯ ಕೊಡಲು ಶಕ್ತರಾಗುವಂತೆ ನೋಡಿಕೊಳ್ಳುವುದು ಮತ್ತು ಬಾಲಕಾರ್ಮಿಕತೆ ಹೆಚ್ಚಾಗಿ ಇರುವ ವಲಯಗಳಲ್ಲಿನ ರಾಷ್ಟ್ರೀಯ ಸಂಘಟನೆಗಳಿಗೆ ಹಾಗೂ ಮಾಹಿತಿ ಆಂದೋಲನಕ್ಕೆ ಸಹಾಯ ಕೊಡುವಂತೆ ಮಾಡುವುದು.

ಈ ಯೋಜನೆ ಇನ್ನು ಒಂದನೆ ಹಂತದಲ್ಲಿ ಇದೆ. ಇಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿನ ಕೆಲಸ ಅತ್ಯಂತ ಮುಖ್ಯವಾದುದು. ದಕ್ಷಿಣ ಭಾಗದ ಆಫ್ರಿಕಾದಲ್ಲಿ ಪ್ರಾಂತೀಯ ಚಟುವಟಿಕೆಗಳು ಆರಂಭವಾಗಲಿದೆ. ಏಷ್ಯಾ ಖಂಡದಲ್ಲಿ ಅಂತಾರಾಷ್ಟ್ರೀಯ ಆಂದೋಲನ ನಡೆಸುವ ಬಗ್ಗೆ ಕೆಲವು ಚಟುವಟಿಕೆಗಳು ನಡೆಯುತ್ತಿವೆ.





### 3.15.6 ಬಾಲಕಾರ್ಮಿಕತೆಯ ನಿವಾರಣೆಯಲ್ಲಿ ಕಾರ್ಮಿಕ ಸಂಘಟನೆಗಳ ಪಾತ್ರ

**ಹಿನ್ನಲೆ**

ಕಾರ್ಮಿಕ ಸಂಘಟನೆಗಳು ಕೆಲಸಗಾರರ ಸಂಘಟನೆಗಳಾಗಿವೆ. ಈ ಕೆಲಸಗಾರರು ಸಮಾಜದ ದೊಡ್ಡ ಭಾಗವಾಗಿರುತ್ತಾರೆ. ಇವರು ಸಾಮಾಜಿಕ ನ್ಯಾಯವನ್ನು ಪ್ರೋತ್ಸಾಹಿಸುವವರಾಗಿದ್ದು, ಎಲ್ಲಾ ರೀತಿಯ ಅನ್ಯಾಯವನ್ನು ಪ್ರತಿಭಟಿಸುತ್ತಾರೆ. ಇವುಗಳಲ್ಲಿ ಬಾಲಕಾರ್ಮಿಕತೆಯು ಒಂದು ಅತೀ ನಿಕೃಷ್ಟ ವ್ಯವಸ್ಥೆ. 19 ನೇ ಶತಮಾನದ ಮಧ್ಯ ಭಾಗದಲ್ಲಿಯೇ ಕಾರ್ಮಿಕರ ಮೊದಲ ಅಂತಾರಾಷ್ಟ್ರೀಯ ಸಂಘವು ಬಾಲಕಾರ್ಮಿಕತೆಯನ್ನು ನಿಲ್ಲಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಂದೋಲನ ಹಮ್ಮಿಕೊಳ್ಳಲು ಕರೆ ಕೊಟ್ಟಿದೆ. ಭಾರತದ ಕಾರ್ಮಿಕ ಸಂಘಟನೆ ಅನ್ಯಾಯದ ವಿರುದ್ಧ ಹೋರಾಡುವ ಪರಂಪರೆ ಇದ್ದು, ಇತ್ತೀಚಿನ ವರ್ಷಗಳಲ್ಲಿ ಬಾಲಕಾರ್ಮಿಕತೆ ವಿರುದ್ಧ ಪರಿಣಾಮಕಾರಿಯಾಗಿ ಮತ್ತು ತೀವ್ರವಾಗಿ ಹೋರಾಟ ನಡೆಸುತ್ತಿವೆ.


ಐ.ಎಲ್.ಓ 1992 ರಿಂದ ತನ್ನ ಐ.ಪಿ.ಇ.ಸಿ ಕಾರ್ಯಕ್ರಮದ ಮೂಲಕ ಬಾಲಕಾರ್ಮಿಕತೆಯ ವಿರುದ್ಧದ ಭಾರತದ ಕಾರ್ಮಿಕ ಸಂಘಟನೆ ಚಳುವಳಿಗೆ ಬೆಂಬಲ ಕೊಡುತ್ತಿದೆ. ಬೇರೆ ಎಲ್ಲಾ ದೇಶಗಳಿಗಿಂತ ಭಾರತದಲ್ಲಿ ಐ.ಪಿ.ಇ.ಸಿ ಯ ಕಾರ್ಮಿಕ ಸಂಘಟನೆಗಳ ಕಾರ್ಯಕ್ರಮಗಳಿಗೆ ಹೆಚ್ಚು ಬೆಂಬಲ ಕೊಡುತ್ತಿವೆ. ಆದುದರಿಂದ ಭಾರತದಲ್ಲಿ ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯ ವಿರುದ್ಧ ಹಲವಾರು ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದು, ಅವರ ಅನುಭವದಿಂದ, ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯ ವಿರುದ್ಧದ ಹೋರಾಟಕ್ಕೆ ಮಹತ್ವದ ಕೊಡುಗೆಯನ್ನು ಕೊಡಲು ಸಾಧ್ಯ ಎಂಬುದು ಸಾಬೀತಾಗುವುದು.

ಈ ಲೆಕ್ಕದಲ್ಲಿ ಕಾರ್ಮಿಕ ಸಂಘಟನೆಯ ಅಸಂಖ್ಯಾತ ಕಾರ್ಯಕ್ರಮಗಳ ಪೈಕಿ ಕೆಲವು ಕಾರ್ಯಕ್ರಮಗಳನ್ನು ಮತ್ತು ಕೊಡುಗೆಗಳನ್ನು ಮಾತ್ರ ವಿವರಿಸಲಾಗಿದೆ. ಆದರೂ ಇದು ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯ ವಿರುದ್ಧದ ಹೋರಾಟಕ್ಕೆ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು ಹಾಗೂ ಆ ಚಟುವಟಿಕೆಗಳ ಪರಿಣಾಮ ಬಾಲಕಾರ್ಮಿಕತೆಯ ವಿಷಯದಲ್ಲಿ ಮಾತ್ರವಲ್ಲದೆ, ಕಾರ್ಮಿಕ ಸಂಘಟನೆಗಳ ಮೇಲೂ ಆಗುತ್ತಿದೆ ಎಂಬುದು ಸಾಬೀತಾಗಿದೆ.

### 3.15.6.1 ಪರಿಚಯ / ಪ್ರಸ್ತಾವನೆ

ಭಾರತದ ಕೇಂದ್ರೀಯ ಕಾರ್ಮಿಕ ಸಂಘಟನೆ (ಟ್ರೇಡ್ ಯೂನಿಯನ್) ಗಳ ಸಂಘ, ಅಖಿಲ ಭಾರತ ಸದಸ್ಯತ್ವವನ್ನು ಹೊಂದಿರುವ ಸಂಸ್ಥೆ. ಅವರನ್ನು ಬಾಲಕಾರ್ಮಿಕತೆ ಸೂಕ್ಷ್ಮತೆಗೆ ಒಳಪಡಿಸುವುದೆಂದರೆ ಇಡೀ ಭಾರತಕ್ಕೆ ಈ ಬಗ್ಗೆ ಸೂಕ್ಷ್ಮತೆ ಕೊಟ್ಟಂತೆ. ಈ ವಿಚಾರವನ್ನು ಗುರುತಿಸಿದ ಐ.ಎಲ್.ಓ 90 ರಲ್ಲಿಯೇ ಐ.ಪಿ.ಇ.ಸಿ ಮೂಲಕ ಕಾರ್ಮಿಕ ಸಂಘಟನೆಗಳಿಗೆ ಬಾಲಕಾರ್ಮಿಕತೆಯ ವಿರುದ್ಧ ಹೋರಾಡಲು ಸಹಕಾರವನ್ನು ಕೊಡುತ್ತಿದೆ. ಸಂಘಟನೆಗಳ ಚಳುವಳಿ ಬಾಲಕಾರ್ಮಿಕತೆಯ ಸುತ್ತಲೂ ಕೆಲಸ ಮಾಡಲಾರಂಭಿಸಿತು. ಹಲವಾರು ಕಾರ್ಯಕ್ರಮಗಳಿಂದ ಭಾರತದ ಕಾರ್ಮಿಕ ಸಂಘಟನೆಗಳು ಇಡೀ ಭಾರತದಲ್ಲಿ ತಮ್ಮ ಸದಸ್ಯರನ್ನು ಬಾಲಕಾರ್ಮಿಕತೆಯ ವಿರುದ್ಧ ಕೆಲಸ ಮಾಡುವಂತೆ ಪ್ರೇರೇಪಿಸುವಲ್ಲಿ ಸಫಲರಾಗಿರುತ್ತಾರೆ. ಇವುಗಳಲ್ಲಿ ಹೆಚ್ಚಿನ ಚಟುವಟಿಕೆಗಳು ಐ.ಪಿ.ಇ.ಸಿ ಯ ಬೆಂಬಲ ಪಡೆದಿರುತ್ತವೆ. ಬಾಲಕಾರ್ಮಿಕತೆಯ ವಿರುದ್ಧದ ಹೋರಾಟದಲ್ಲಿ ಕಾರ್ಮಿಕ ಸಂಘಟನೆಗಳು ಪಡೆದ ಯಶಸ್ಸು ಹೆಚ್ಚು ಪ್ರಚಾರವಾಗದ ವಿಷಯವಾಗಿದೆ. ಸಂಘಟನೆಗಳು ತಮ್ಮ ಸ್ವ ಪ್ರೇರಣೆಯಿಂದ ತಮ್ಮ ಸಾಧನೆಯನ್ನು ಇಡೀ ಪ್ರಪಂಚಕ್ಕೆ ಪ್ರಚಾರ ಮಾಡುತ್ತಿಲ್ಲ.





**3.15.6.1.1 ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎ.ಐ.ಟಿ.ಯು.ಸಿ) 1994 ರಿಂದ ಬಾಲಕಾರ್ಮಿಕತೆಯ ಅಖಿಲ ಭಾರತ ಟ್ರೇಡ್ ಯೂನಿಯನ್ ಅತೀ ಮುಖ್ಯ ಕಳಕಳಿ ಆಗಿದೆ. ಈ ಹೋರಾಟದ ನೇತೃತ್ವವನ್ನು ವಹಿಸಿದ ಮಹಿಳೆ – ಶ್ರೀಮತಿ. ಅಮರ್‌ಜೀತ್ ಕೌರ್**

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ತನ್ನ ಪ್ರಚಾರ ಆಂದೋಲನದಲ್ಲಿ ಬಹಳ ಹೊಸತನವನ್ನು ಅಳವಡಿಸಿಕೊಂಡಿದ್ದು ಅದರಿಂದ ಸಫಲತೆಯನ್ನು ಪಡೆದಿರುತ್ತದೆ. ಸಾಮಾನ್ಯವಾಗಿ ಉಪಯೋಗಿಸುವ ಪೋಸ್ಟರ್ ಜೊತೆಗೆ ಬೀದಿನಾಟಕವನ್ನು ಉಪಯೋಗಿಸಿರುತ್ತಾರೆ. ಇದಲ್ಲದೆ, ಹಳ್ಳಿಯ ಜನರಲ್ಲಿ ಸರಕಾರೇತರ ಸಂಸ್ಥೆಗಳಲ್ಲಿ, ಸರಕಾರಿ ನೌಕರರಲ್ಲಿ ಬಾಲಕಾರ್ಮಿಕತೆಯ ಬಗ್ಗೆ ಸಹಾನುಭೂತಿ ಮೂಡಿಸಲು ಬಾಲಕಾರ್ಮಿಕರ ಕಷ್ಟ ಕಾರ್ಪಣ್ಯಗಳನ್ನು ಎತ್ತಿ ತೋರಿಸುವ ಕಾರ್ಯಕ್ರಮ ರೂಪಿಸಿಕೊಂಡಿವೆ.

ಅದರ ಇತ್ತೀಚಿನ ಆಂದೋಲನದಿಂದಾಗಿ ಮೊರಾದಾಬಾದ್‌ನಲ್ಲಿ ಕಾನೂನು ಬಾಹಿರವಾಗಿ ಬಾಲಕಾರ್ಮಿಕರನ್ನು ದುಡಿಸುತ್ತಿದ್ದ ಸುಮಾರು 400 ಹಿತ್ತಾಳೆ ಸಾಮಗ್ರಿಗಳನ್ನು ತಯಾರಿಸುವ ಸಂಸ್ಥೆಗಳಿಗೆ ಸರಕಾರ ನೋಟಿಸ್ ಕೊಟ್ಟಿರುತ್ತದೆ.

ತನ್ನ ಆಂದೋಲನಗಳಲ್ಲಿ ಎ.ಐ.ಟಿ.ಯು.ಸಿ ಯು ಬೇರೆ ಬೇರೆ ಭಾಗೀದಾರರನ್ನು ಅಳವಡಿಸಿಕೊಂಡಿದೆ. ಇವರಲ್ಲಿ ಸರಕಾರ, ಎನ್.ಜಿ.ಓ, ಮಾಲೀಕರ ಸಂಘಗಳು ಇತ್ಯಾದಿ. ಇದರ ಆಂದೋಲನ ಅಖಿಲಭಾರತ ಸ್ವರೂಪದ್ದು, ಉತ್ತರ ಪ್ರದೇಶದ ಮೊರಾದಾಬಾದ್, ರಾಜಸ್ಥಾನದ ಜೈಪುರ್, ಆಂಧ್ರದ ಮರ್ಕ್ಕಾಪುರ್, ಕಲ್ಕತ್ತಾ ಮತ್ತು ಚೆನ್ನೈ ಈ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

44 ವರ್ಷ ಪ್ರಾಯದ ಅಮರ್‌ಜೀತ್ ಕೌರ್ ಎ.ಐ.ಟಿ.ಯು.ಸಿ ಅಖಿಲ ಭಾರತ ಕಾರ್ಯದರ್ಶಿ, ಎ.ಐ.ಟಿ.ಯು.ಸಿ ಯು, ಐ.ಪಿ.ಇ.ಸಿ ಯೊಂದಿಗೆ ಸೇರಿ ಅನುಷ್ಠಾನ ಮಾಡುತ್ತಿರುವ ಬಾಲಕಾರ್ಮಿಕ ಕ್ರಿಯಾ ಕಾರ್ಯಕ್ರಮದ ಕನ್ವೀನಿಯರ್ ಆಗಿದ್ದರು 1997 ರಲ್ಲಿ ಅಮರ್‌ಜೀತ್ ಕೌರ್ ಮತ್ತು ಸಂಗಡಿಗರು, ಆಂಧ್ರ ಪ್ರದೇಶದ ಮರ್ಕ್ಕಾಪುರ್‌ದ ಸ್ಲೇಟ್ ಗಣಿಗಳನ್ನು ರೈಡ್ ಮಾಡಿದರು. ಅಲ್ಲಿ ಬಹಳಷ್ಟು ಮಕ್ಕಳು ಕೆಲಸ ಮಾಡುತ್ತಿದ್ದರು. ಈ ರೈಡ್ ಪ್ರಪ್ರಥಮವಾಗಿದ್ದು, ಕಾರ್ಮಿಕ ಸಂಘಟನೆಗಳು ಕೈಗೊಂಡ ಒಂದೇ ಒಂದು ರೈಡ್ ಆಗಿದೆ. ರೈಡ್‌ನ ಚಟುವಟಿಕೆ ಮತ್ತು ನಂತರ ನಡೆದ ಪ್ರಕ್ರಿಯೆ ವಿವರ ಈ ಕೆಳಗೆ ಇದೆ.

ಐ.ಎಲ್.ಓ / ಐ.ಪಿ.ಇ.ಸಿ ಕಾರ್ಯಕ್ರಮವನ್ನು ತೆಗೆದುಕೊಂಡಾಗ ನಾವು ಅದನ್ನು ನೇರವಾಗಿ ಬೇರೆ ರೀತಿಯಲ್ಲಿ ಅನುಷ್ಠಾನ ಮಾಡಲು ನಿರ್ಧಾರ ತೆಗೆದುಕೊಂಡೆವು. ನಾವು ನೇರ ಕ್ರಮದಲ್ಲಿ ನಂಬಿಕೆ ಇಟ್ಟವರು. ಮರ್ಕ್ಕಾಪುರದಲ್ಲಿ ಅತ್ಯಂತ ದೊಡ್ಡ ಸಂಖ್ಯೆಯಲ್ಲಿ ಮಕ್ಕಳು ಕೆಲಸ ಮಾಡುತ್ತಿದ್ದುದರಿಂದ ರೈಡ್ ಮಾಡಲು ನಮ್ಮ ಕಾರ್ಯಕರ್ತರಿಗೆ ಅವರಲ್ಲಿ ಈ ಬಗ್ಗೆ ಸೂಕ್ಷ್ಮತೆ ಉಂಟುಮಾಡಲು ತರಬೇತಿ ವ್ಯವಸ್ಥೆ ಮಾಡಿದೆವು. ನಾವು ಗಣಿಗಳಿಗೆ ದಿನಾಂಕ 27–3–1997 ರಂದು ರೈಡ್ ಮಾಡಲು ಯೋಚಿಸಿದ್ದೆವು. ರೈಡ್‌ನ ಉದ್ಧೇಶ ಸ್ಥಳಿಯ ಜನರಲ್ಲಿ ಹಾಗೂ ಸ್ಥಳೀಯ ಸರಕಾರಿ ಅಧಿಕಾರಿಗಳಲ್ಲಿ ಈ ಬಗ್ಗೆ ಅರಿವು ಉಂಟು ಮಾಡುವುದಾಗಿತ್ತು. ಕಾರ್ಯಾಗಾರದ ಹಿಂದಿನ ದಿನ ನಾವು ಮರ್ಕ್ಕಾಪುರಕ್ಕೆ ಹೋಗಿ ರೈಡ್‌ಗೆ ನಮ್ಮ ತಂಡವನ್ನು ಆಯ್ಕೆ ಮಾಡಿಕೊಂಡೆವು. ನಾವು ಪ್ರವಾಸಿಗರ ಹಾಗೆ ಬೆಳಿಗ್ಗೆ ಬೇಗನೆ ಗಣಿಗೆ ಹೊರಟೆವು. ಆ ಪ್ರದೇಶದ ಫೋಟೋಗಳನ್ನು ತೆಗೆಯಲು ಫೋಟೋಗ್ರಾಫರನ್ನು ನೇಮಕ ಮಾಡಿಕೊಂಡಿದ್ದೆವು. ನಾವು ಆ ಪ್ರದೇಶಕ್ಕೆ ಹೋದ ನಂತರ, ಸಣ್ಣ ಸಣ್ಣ ಗುಂಪಾಗಿ ಚದುರಿ ಮಾಹಿತಿ ಸಂಗ್ರಹಿಸಲಾರಂಭಿಸಿದೆವು. ನಮ್ಮ ಉದ್ದೇಶದ ಬಗ್ಗೆ ಯಾರಿಗೂ ಅನುಮಾನ ಬರದಂತೆ ನಡೆದುಕೊಂಡೆವು. ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡ ಗುತ್ತಿಗೆದಾರರು ನಮ್ಮ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ.




ನಮ್ಮ ಜೊತೆಯಲ್ಲಿ ಬಂದ ಫೋಟೋಗ್ರಾಫರ್ ಮಕ್ಕಳು ನಿಕೃಷ್ಟ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿರುವ ಫೋಟೋಗಳನ್ನು ತೆಗೆದರು. ಮರ್ಕ್ಾಪುರ್‌ನ ಸ್ಲೇಟ್‌ಗಣಿಗಳು ಸುಮಾರು 50 ಅಡಿ ಆಳ ಇದ್ದು ಅಲ್ಲಿ ಕೆಲಸ ಮಾಡುವ ಮಕ್ಕಳು 12 ವರ್ಷಕ್ಕಿಂತ ಕಡಿಮೆಯವರು. ಗಣಿಯಲ್ಲಿ ಕೆಲಸ ಮಾಡುವ ಮಹಿಳೆಯರು ಮತ್ತು ಮಕ್ಕಳು ಒಂದೇ ಕೂಲಿಯನ್ನು ಪಡೆಯುತ್ತಿದ್ದರು. ಕಾರ್ಮಿಕ ಕಾನೂನನ್ನು ಗಾಳಿಗೆ ತೂರಿದ್ದರು ಮತ್ತು ಮಕ್ಕಳ ಭದ್ರತೆಯ ಬಗ್ಗೆ ಏನೂ ಇರಲಿಲ್ಲ. ಮರ್ಕ್ಾಪುರದ ಚಿತ್ರಣ ನೋಡಿ ನಮಗೆ ದಿಗಿಲಾಯಿತು. ಅದರಲ್ಲಿ ಸಣ್ಣ ಮಕ್ಕಳು ಹೆದರುತ್ತಿರುವುದು ಸಾವಿನೊಂದಿಗೆ ಗಣಿಯಲ್ಲಿ ಇಳಿಯುವುದು ಮತ್ತು ಹತ್ತುವುದನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ನನಗೆ ಗಣಿಯಲ್ಲಿ ಬಗ್ಗಿ ಆಳ ನೋಡಲು ಹೆದರಿಕೆ ಆಗುತ್ತಿತ್ತು. ಮರ್ಕ್ಾಪುರದ ಗಣಿಯ ಭೇಟಿ ನಮ್ಮ ಕಾರ್ಯಕರ್ತರನ್ನು ಅತ್ಯಂತ ಸೂಕ್ಷ್ಮತೆ ಇರುವವರನ್ನಾಗಿ ಪರಿವರ್ತಿಸಿತು. ಅವರೆಲ್ಲಾ ಶೋಷಣೆಯ ಹಾಗೂ ಚಿತ್ರಹಿಂಸೆಯ ಪ್ರಪಂಚವನ್ನು ನೋಡಿದರು. ನಾವು ಹಿಂದಿರುಗುವಾಗ ಸ್ಥಳೀಯ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಸರಕಾರೇತರ ಸಂಸ್ಥೆಗೆ ಭೇಟಿ ಕೊಟ್ಟೆವು. ಅವರ ಹತ್ತಿರ ಈ ಬಗ್ಗೆ ಕೇಳಿದಾಗ ಅದು ತಮಗೆ ಸಂಬಂಧಿಸಿದ್ದಲ್ಲಾ ಮತ್ತು ನಮ್ಮ ಕನ್‌ಸರ್ನ್ ಅಲ್ಲಾ ಎಂಬುದಾಗಿ ತಿಳಿಸಿದರು. ನಂತರ ನಾನು ಒಂದು ಪ್ರೆಸ್ ಸಮಾವೇಶ ಕರೆದು ನಾನು ನೋಡಿದ್ದನ್ನು ಅವರಿಗೆ ವಿವರಿಸಿದೆ. ನಮಗೆ ಸ್ಥಳೀಯ ವರ್ತಮಾನ ಪತ್ರಿಕೆಯಲ್ಲಿ ಒಳ್ಳೆಯ ಪ್ರಚಾರ ಸಿಕ್ಕಿತು. ಮರುದಿನ ಎಲ್ಲಾ ಗಣಿಗಳು ಮುಚ್ಚಲ್ಪಟ್ಟವು. ನಾವು ಇನ್ನೊಮ್ಮೆ ಮರ್ಕ್ಾಪುರಕ್ಕೆ ಹೋಗಿ ಅಲ್ಲಿ ಮಕ್ಕಳು ಮತ್ತು ಅವರ ತಾಯಂದಿರೊಂದಿಗೆ ಮಾತನಾಡಿದೆವು. ತಾಯಂದಿರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕು ಎಂಬುದಾಗಿ ತಿಳಿಸಿದರು. ತಮ್ಮ ಮಕ್ಕಳಿಗೆ ಹಾಸ್ಟೆಲ್‌ನಲ್ಲಿ ಸೀಟು ಕೊಡಿಸಿರಿ ಎಂದು ಕೇಳಿಕೊಂಡರು. ಜಿಲ್ಲೆಯ ಕಲೆಕ್ಟರ್ ಸಹ ಆಸಕ್ತಿ ತೋರಿಸಿ, ಬಡ ಪೋಷಕರಿಗೆ ಸಾಲ ಕೊಡಿಸಿದರು. ಕೊನೆಯಲ್ಲಿ ಎಲ್ಲಾ ಮಕ್ಕಳನ್ನು ವಿಶೇಷ ಶಾಲೆಗೆ ಮತ್ತು ವಸತಿ ನಿಲಯಗಳಿಗೆ ಸೇರಿಸಲಾಯಿತು.

ಉತ್ತರ ಪ್ರದೇಶದ ಮೊರಾದಾಬಾದ್ ಚಟುವಟಿಕೆಯುಕ್ತ ಕೈಗಾರಿಕಾ ನಗರ. ಮೊಗಲ್‌ಪುರ ಮೊರಾದಾಬಾದ್‌ನ ಒಂದು ಉಪನಗರ. ಇದು ಹಿತ್ತಾಳೆಯ ಕೆಲಸದ ಕೇಂದ್ರ. ಸಾವಿರಾರು ಮಕ್ಕಳು ಮೊಗಲ್‌ಪುರದ ಹಿತ್ತಾಳೆ ವಸ್ತುಗಳ ತಯಾರಿಕಾ ಕೇಂದ್ರದಲ್ಲಿ ಜೀವನ ಸವೆಯುತ್ತಿದ್ದಾರೆ. ಅವರು ಕೆಲಸ ಮಾಡುತ್ತಿರುವ ಸ್ಥಿತಿ ಚಿಂತಾಜನಕ. ಹೆಚ್ಚಿನ ಕೆಲಸದ ಸ್ಥಳಗಳು ಬೆಳಕು ಗಾಳಿ ಇಲ್ಲದೆ ಹೊಗೆಯಿಂದ ಕೂಡಿದ್ದು, ಧೂಳು ಮತ್ತು ರಸಾಯನಿಕ ತ್ಯಾಜ್ಯದಿಂದ ಕೂಡಿದ ದೊಡ್ಡಿಗಳು. ಅಲ್ಲಿ ಕೆಲಸ ಮಾಡುವ ಮಕ್ಕಳು ಬೇಗನೆ ಪ್ರೌಢರಾಗುತ್ತಾರೆ. ಅವರ ದೇಹ ಮತ್ತು ಧ್ವನಿ ಮಕ್ಕಳದ್ದಾಗಿರುವುದಿಲ್ಲ. ಅವರಲ್ಲಿ ಹೆಚ್ಚಿನವರು ಬೀಡಿ ಸೇದುವ ಚಟಕ್ಕೆ ಬಿದ್ದವರಾಗಿರುತ್ತಾರೆ. ಅವರು ಬೀಡಿ ಸೇದಲು ಬಿಡುವು ತೆಗೆದುಕೊಳ್ಳುತ್ತಾರೆ.

62 ವರ್ಷದ ಝುಡ್.ಎಂ. ನಖ್ವಿ ಮೊರಾದಾಬಾದ್‌ನ ವಕೀಲರು ಹಾಗೂ ಎ.ಐ.ಟಿ.ಯು.ಸಿ ನ ನೇತಾರರು. ಅವರಿಗೆ ಇತ್ತೀಚಿಗೆ ಬಾಲಕಾರ್ಮಿಕರ ಬಗ್ಗೆ ತರಬೇತಿ ಆಗಿತ್ತು. ಬಾಲಕಾರ್ಮಿಕರು ಹಾಗೂ ಅವರನ್ನು ಕೆಲಸಕ್ಕೆ ಕಳುಹಿಸಲು ಇರುವ ಸಾಮಾಜಿಕ ಸ್ಥಿತಿಯ ಬಗ್ಗೆ ಒಂದು ಗಣತಿ ನಡೆಸಿದರು. ನಮ್ಮ ಗಣತಿಯಲ್ಲಿ ಸುಮಾರು 22000 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಕೆಲಸ ಮಾಡುತ್ತಿರುವುದು ಕಂಡು ಬಂತು. ಅವರಲ್ಲಿ 5–6 ವರ್ಷದ ಮಕ್ಕಳು ಸೇರಿದ್ದರು. ಹೆಚ್ಚಿನವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು ಎಂಬುದಾಗಿ ಇದ್ದರು. ಆದರೆ ಬಡತನ ಮತ್ತು ಶಾಲೆಗಳು ಇಲ್ಲದೆ ಇರುವುದರಿಂದ ಅವರನ್ನು ಕೆಲಸಕ್ಕೆ ಕಳುಹಿಸಿದರು. ಮೊರಾದಾಬಾದ್‌ನಲ್ಲಿ ಕಾರ್ಮಿಕ ಸಂಘಟನೆಗಳು ಬಾಲಕಾರ್ಮಿಕತೆಯ ವಿರುದ್ಧ ಹೋರಾಡಲು ಮುಂದೆ ಬಂದರು. ಇಂತಹ ಸಮಸ್ಯೆಗಳನ್ನು ಬಗೆ ಹರಿಸುವಾಗ ಇರುವ ಸಮಸ್ಯೆಗಳ ಅರಿವು ನನಗೆ ಇದೆ. ನಾವು ಅನೌಪಚಾರಿಕ ಕೇಂದ್ರಗಳನ್ನು ಸ್ಥಾಪಿಸಿದ್ದೇವೆ ಎಂದು ನಖ್ವಿ ತಿಳಿಸಿದರು.

ಅವರು ಮತ್ತು ಅವರ ಸ್ನೇಹಿತರು ಅವರ ಕೆಲಸದಲ್ಲಿ ಬಹಳ ಬೇಗನೆ ಸಫಲತೆ ಕಂಡು ಕೊಂಡಿದ್ದಾರೆ. ಅವರ ನಡೆಸಿದ ಗಣತಿ ಮತ್ತು ಮಾಧ್ಯಮಗಳ ಪ್ರಚಾರದಿಂದ ಸರಕಾರ ಸುಮಾರು 400 ಹಿತ್ತಾಳೆ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳಿಗೆ ನೋಟಿಸ್ ಕೊಟ್ಟಿತು. ಇವರು ಮಕ್ಕಳನ್ನು ಅನಧಿಕೃತವಾಗಿ ಕೆಲಸಕ್ಕೆ ನೇಮಿಸಿಕೊಂಡಿದ್ದರು. ಇದಾದ ನಂತರ ಕೆಲವು





ತಯಾರಕರು ಸಹ ಇವರ ಗುಂಪನ್ನು ಸೇರಿದರು. ಎ.ಐ.ಟಿ.ಯು.ಸಿ ಯ ಇನ್ನೊಬ್ಬ ಸದಸ್ಯರಾದ ನೇಮಸಿಂಗ್ ಅವರು ತಮ್ಮ ಸಂಘಟನೆ ಬಾಲಕಾರ್ಮಿಕ ಮಕ್ಕಳಿಗಾಗಿ ಉತ್ತಮ ಕೆಲಸ ಮಾಡುತ್ತಿದೆ ಎಂಬ ನಂಬಿಕೆವುಳ್ಳವರಾಗಿದ್ದಾರೆ. ಅವರ ಮಾತುಗಳು **"ಈ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇವರ ಪರವಾಗಿ ನಾವು ಹೋರಾಡದಿದ್ದರೆ ಇನ್ನಾರ ಪರವಾಗಿ ಹೋರಾಡಬೇಕು"** ಮೊರಾದಾಬಾದ್ ನಿಧಾನವಾಗಿ ಬಾಲಕಾರ್ಮಿಕತೆಯ ಬಗ್ಗೆ ಸೂಕ್ಷ್ಮತೆಯ ಪ್ರದೇಶವಾಗಿ ಮಾರ್ಪಾಡು ಮಾಡಲಾಗುತ್ತಿದೆ. ಅದರೆ ಕೂಡಲೇ ಬಾಲಕಾರ್ಮಿಕತೆ ಮೊರಾದಾಬಾದ್‌ನಿಂದ ಹೋಗಲು ಸಾಧ್ಯವಿಲ್ಲ. ನಖ್ವಿ ಮತ್ತು ನೇಮ್ ಸಿಂಗ್ ಆಶಾ ಭಾವನೆಯಿಂದ ಕೆಲಸ ಮಾಡುತ್ತಿದ್ದಾರೆ. ಮೊರಾದಾಬಾದ್ ರೈಲು ನಿಲ್ದಾಣದಲ್ಲಿರುವ ಗೋಡೆ ಬರಹ ಹೀಗೆ ಹೇಳುತ್ತದೆ, **"ಕತ್ತಲೆಯನ್ನು ಶಪಿಸುವುದಕ್ಕಿಂತ ಮೇಣದ ಬತ್ತಿಯನ್ನು ಹೊತ್ತಿಸುವುದು ಉತ್ತಮ"** ಮೊರಾದಾಬಾದ್ ಎ.ಐ.ಟಿ.ಯು.ಸಿ ಕಾರ್ಯಕರ್ತರು ಇದನ್ನು ತಮ್ಮ ಹೃದಯಕ್ಕೆ ತೆಗೆದುಕೊಂಡಿರುವ ಹಾಗೆ ಕಾಣಿಸುತ್ತದೆ. ಅವರ ಮಾತುಗಳು **"ಐ.ಎಲ್.ಓ/ಐ.ಪಿ.ಇ.ಸಿ ಕಾರ್ಯಕ್ರಮ ನಮ್ಮ ಕಾರ್ಮಿಕ ಸಂಘಟನೆಗಳ ಚಟುವಟಿಕೆಗಳನ್ನು ಅಸಂಘಟಿತ ಕ್ಷೇತ್ರಕ್ಕೆ ತೆಗೆದುಕೊಂಡು ಹೋಗಲು ಸಹಾಯ ಮಾಡುತ್ತಿದೆ. ಇದು ನಮಗೆ ನಮ್ಮ ಸಂಘಟನೆಯ ಚಟುವಟಿಕೆಗಳಿಗೆ ಹೊಸ ವಿಧಾನವನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಾಯ ಮಾಡಿದೆ – ಕಾರ್ಮಿಕರನ್ನು ಅವರ ಮಕ್ಕಳ ಮೂಲಕ ತಲುಪುವುದು. ಈ ಕಾರ್ಯಕ್ರಮದಿಂದ ನಮ್ಮ ಸಂಘಟನೆಯ ವರ್ಚಸ್ಸು ಹೆಚ್ಚಾಗಿದೆ. ಇನ್ನೊಂದು ಉತ್ತಮ ವಿಚಾರವೆಂದರೆ ಎಲ್ಲಾ ಕಾರ್ಮಿಕ ಸಂಘಟನೆಗಳು ಬಹಳ ಆಸಕ್ತಿಯಿಂದ ಬಾಲಕಾರ್ಮಿಕತೆಯ ಬಗ್ಗೆ ಕೆಲಸ ಮಾಡುತ್ತಿವೆ.**

#### 3.15.6.1.2 ಭಾರತೀಯ ಮಜದೂರ್ ಸಂಘ (ಬಿ.ಎಂ.ಎಸ್)

ಭಾರತೀಯ ಮಜದೂರ್ ಸಂಘ, ಐ.ಎಲ್.ಓ ನೊಂದಿಗೆ ತನ್ನ ಸಂಪರ್ಕದಿಂದ ಹಾಗೂ ಐ.ಪಿ.ಇ.ಸಿ ಯ ರಾಷ್ಟ್ರೀಯ ಸ್ಟೀರಿಂಗ್ ಸಮಿತಿಯ ಸದಸ್ಯತನದಿಂದ ಬಾಲಕಾರ್ಮಿಕತೆಯ ನಿವಾರಣೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡಿತು. ಬಿ.ಎಂ.ಎಸ್ ತನ್ನ ನೊಂದಾಯಿತ ಸದಸ್ಯರ ಮೂಲಕ ಎರಡು ಐ.ಪಿ.ಇ.ಸಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಿದೆ. ಅವುಗಳು ಪುಣೆಯ ತೆಕೆದಾರ್ ಕಾಮಗಾರ್ ಸಂಘ (ಟಿ.ಕೆ.ಎಸ್) ಮತ್ತು ಹೈದರಾಬಾದ್‌ನ ಆಂಧ್ರ ಪ್ರದೇಶ ಕಟ್ಟಡ ಮಜದೂರ್ ಸಂಘ (ಎ.ಪಿ.ಸಿ.ಎಂ.ಎಸ್) ಈ ಎರಡು ಸಂದರ್ಭಗಳಲ್ಲಿ ಬಿ.ಎಂ.ಎಸ್ ಅಂಗ ಸಂಸ್ಥೆಗಳು ನೇರವಾಗಿ ಅನೌಪಚಾರಿಕ ಶಿಕ್ಷಣದ ಕಾರ್ಯಕ್ರಮವನ್ನು ಅನುಷ್ಠಾನ ಮಾಡಿವೆ. ಇದನ್ನು ಈವರೆಗೆ ಯಾವುದೇ ಕಾರ್ಮಿಕ ಸಂಘಟನೆಗಳು ಮಾಡಿರುವುದಿಲ್ಲ.

ಬಿ.ಎಂ.ಎಸ್ ನ ಕಾರ್ಯಕಾರಿ ಅಧ್ಯಕ್ಷರಾದ ಶ್ರೀ ವೇಣು ಗೋಪಾಲನ್, ಅವರು ಸಂಸ್ಥೆಯ ಬಾಲಕಾರ್ಮಿಕ ಪದ್ಧತಿ ಹೋರಾಟದ ರುವಾರಿ. ಅವರ ಪ್ರಕಾರ, ಅವರ ಸಂಘದ ಸದಸ್ಯರನ್ನು ಬಾಲಕಾರ್ಮಿಕತೆಯ ಬಗ್ಗೆ ಸೂಕ್ಷ್ಮತೆಗೊಳಿಸಲು ಇದು ಉತ್ತಮ ದಾರಿ, ಸದಸ್ಯರನ್ನು ಬಾಲಕಾರ್ಮಿಕರ ಪುನರ್ವಸತಿಗೆ ಸ್ವಯಂ ಸೇವಾ ನೆಲೆಯಲ್ಲಿ ಕೆಲಸದಲ್ಲಿ ತೊಡಗಿಸಿಕೊಳ್ಳುವುದು. ಎ.ಪಿ.ಸಿ.ಎಂ.ಎಸ್ ನ ಬಾಲಕಾರ್ಮಿಕ ಯೋಜನೆಯ ದೇಶದ ಉತ್ತಮ ಯೋಜನೆಗಳಲ್ಲಿ ಒಂದಾಗಿದೆ. ಈಗ ಇದರಲ್ಲಿ ಹೈದರಾಬಾದ್ ಮತ್ತು ಸುತ್ತ ಮುತ್ತಲಿನ ಪ್ರದೇಶದಿಂದ ಬಿಡುಗಡೆ ಮಾಡಲ್ಪಟ್ಟ ಸುಮಾರು 500 ಬಾಲಕಾರ್ಮಿಕರು 20 ವಿಶೇಷ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಇವರಲ್ಲಿ ಕೆಲವರು ಔಪಚಾರಿಕ ಶಾಲೆಗಳಿಗೆ ಸೇರ್ಪಡೆಯಾಗಿದ್ದಾರೆ. ನರಸಿಂಗ್ ಲಾಲ್ ನೇತೃತ್ವದ ಒಂದು ಪಂಗಡ, ಅವರು ನಡೆಸುತ್ತಿರುವ ಶಾಲೆಗಳನ್ನು ನಿಗಧಿತವಾಗಿ ಪರಿವೀಕ್ಷಣೆ ಮಾಡಲಾಗುತ್ತಿದೆ. ಶಿಕ್ಷಣ ತಜ್ಞರಾದ ಶ್ರೀ ರಂಗನಾಥ್‌ರವರು ಈ ಶಾಲೆಯ ಶೈಕ್ಷಣಿಕ ಪ್ರಗತಿ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಪರಿವೀಕ್ಷಣೆ ಮಾಡುತ್ತಿದ್ದಾರೆ. ನಿಧಾನವಾಗಿ ಕಲಿಯುವವರಿಗೆ ಭಾನುವಾರದ ದಿವಸಗಳಲ್ಲಿ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ. ಅವರಲ್ಲಿ ಸ್ವಯಂ ಸೇವಾ ನೆಲೆಯಲ್ಲಿ ಕೆಲಸ ಮಾಡುವ ಪ್ರೌಢರು ಸಹ ಇದ್ದಾರೆ. ಅವರು ಶಾಲೆಗಳಿಗೆ ಭೇಟಿಕೊಟ್ಟು ಮಕ್ಕಳಿಗೆ ವೈದ್ಯಕೀಯ ಸವಲತ್ತುಗಳನ್ನು ಒದಗಿಸುತ್ತಿದ್ದಾರೆ.



**ಲಾಕಿಯ ನಕ್ಕಾಗ**

ಲಾಕಿಯ 80 ವರ್ಷದವನಾಗಿದ್ದು ಅನಕ್ಷರಸ್ಥನಾಗಿದ್ದ, ಅವನಿಗೆ ಕಲಿಯಲು ವಯಸ್ಸಾಗಿದ್ದರೂ, ಎ.ಪಿ.ಸಿ.ಎಂ.ಎಸ್ ಅವನ ಪಂಗಡದವರ ಮಕ್ಕಳಿಗೆ ನಡೆಸುವ ಶಾಲೆಗೆ ಪ್ರತಿನಿತ್ಯ ಭೇಟಿ ಕೊಡುತ್ತಿದ್ದ. ಅವನು ತರಗತಿಯಲ್ಲಿ ಕುಳಿತುಕೊಳ್ಳಲು ಸಂತೋಷ ಪಡುತ್ತಿದ್ದ. ಆ ಶಾಲೆಯಲ್ಲಿ ಕಲಿಯುತ್ತಿದ್ದ ನೂರು ಜನ ಮೊಮ್ಮಕ್ಕಳನ್ನು ತೋರಿಸಿ ತನ್ನ ಹಲ್ಲುಗಳು ಇಲ್ಲದ ಬಾಯಲ್ಲಿ ನಗುತ್ತಾ "ಮೊದಲು ಇವರೆಲ್ಲಾ ಸೋಮಾರಿಗಳು ಅಲ್ಲಿ ಇಲ್ಲಿ ಅಲೆಯುತ್ತಾ ಕಾಲ ಕಳೆಯುತ್ತಿದ್ದರು, ಈಗ ಅವರು ತುಂಬಾ ಒಳ್ಳೆಯವರಾಗಿದ್ದಾರೆ" ಲಾಕಿಯಾನು ತನ್ನ ಅಲೆಮಾರಿ ಪಂಗಡದ (ಲಂಬಾಡಿಸ್‌ಗಳು) ಇತರರೊಂದಿಗೆ ಹೈದರಾಬಾದ್ ನಗರದ ಹೊರವಲಯದಲ್ಲಿ ಜೀವಿಸುತ್ತಿದ್ದ. ಅವನ ಪಂಗಡ ಹಲವಾರು ಲಂಬಾಡಿಸ್‌ಗಳು ಈಗ ಸ್ಥಿರ ಜೀವನ ನಡೆಸುತ್ತಿದ್ದಾರೆ. ಅವರು ಆಟೋರಿಕ್ಷಾ ಚಾಲಕರಾಗಿ ಅಥವಾ ಕಟ್ಟಡ ನಿರ್ಮಾಣ ಕೂಲಿಗಳಾಗಿ ತಮ್ಮ ಮಕ್ಕಳ ಜೊತೆಯಲ್ಲಿ ಇರುತ್ತಿದ್ದರು. ಎ.ಪಿ.ಸಿ.ಎಂ.ಸಿ ಶಾಲೆಯನ್ನು ತೆರೆದಾಗ ಲಂಬಾಡಿಸ್‌ಗಳು ತಮ್ಮ ಮಕ್ಕಳನ್ನು ಸೇರಿಸಲು ತಾವಾಗಿಯೇ ಮುಂದೆ ಬಂದರು. "ನಮಗೆ ನಮ್ಮ ವಸತಿ ಪ್ರದೇಶದಲ್ಲಿ ಶಾಲೆ ತೆರೆಯಬೇಕೆಂಬುದು ಬಹಳ ದಿನದ ಆಸೆ, ಆದರೆ ನಮಗೆ ಇದರ ಬಗ್ಗೆ ಯಾವ ರೀತಿಯಲ್ಲಿ ಹೋಗಬೇಕು ಎಂಬುದು ಗೊತ್ತಾಗಲಿಲ್ಲ, ನಂತರ ಬಿ.ಎಂ.ಎಸ್‌ನ ಸದಸ್ಯರು ನಮ್ಮ ಜೊತೆಯಲ್ಲಿ ಬಂದು ಅವರು ವಾಗ್ದಾನ ಮಾಡಿದಂತೆ ನಮ್ಮ ಪ್ರದೇಶದಲ್ಲಿ ಶಾಲೆಯನ್ನು ತೆರೆದಿರುತ್ತಾರೆ. ಎಂಬುದನ್ನು ಆ ಪ್ರದೇಶ ಪಂಗಡದ ಮುಖ್ಯಸ್ಥರಾದ ಶ್ರೀ ದೇವರಾಜ್ ನಾಯಕ್ ನೆನಪಿಸಿಕೊಳ್ಳುತ್ತಾರೆ.

ನಮಗೆ ನಮ್ಮ ಶಾಲೆಗಳಿಗೆ ಹಠಾತ್ ಭೇಟಿ ಕೊಡಬೇಕಾಗಿತ್ತು. ಅದಕ್ಕಾಗಿ ನಾವು ಜಗದೀಶ ಎಂಬುವವರ ಟ್ಯಾಕ್ಸಿಯನ್ನು ಬಾಡಿಗೆಗೆ ತೆಗೆದುಕೊಂಡೆವು. ಅವರು ಜಾರಿಯಲ್ಲಿರುವುದಕ್ಕಿಂತ ಹೆಚ್ಚು ಬಾಡಿಗೆ ಕೊಡಬೇಕು ಎಂಬುದಾಗಿ ಕೋರಿದ. ಪರಿಸ್ಥಿತಿ ಒತ್ತಡದಿಂದ ನಾವು ಒಪ್ಪಿದೆವು. ಇಡೀ ದಿವಸ ಮೂಲೆ ಮೂಲೆಯಲ್ಲಿರುವ ಶಾಲೆಗಳಿಗೆ ಭೇಟಿಕೊಟ್ಟೆವು. ದಿವಸದ ಕೊನೆಯಲ್ಲಿ ನಾವು ಬಾಡಿಗೆಯನ್ನು ಕೊಡಲು ಹೋದಾಗ ಜಗದೀಶ ಬಾಡಿಗೆಯನ್ನು ತೆಗೆದುಕೊಳ್ಳಲು ಒಪ್ಪಲಿಲ್ಲಾ. ಬಾಡಿಗೆಯನ್ನು ತೆಗೆದುಕೊಳ್ಳಲು ನಿರಾಕರಿಸುತ್ತಾ ಜಗದೀಶ ಹೇಳಿದ "ನೀವು ನಿಮ್ಮ ಸಮಯವನ್ನು ಈ ಕಷ್ಟದಲ್ಲಿರುವ ಮಕ್ಕಳಿಗಾಗಿ ವ್ಯಯಿಸುತ್ತಿರುವುದರಿಂದ, ನಾನು ಸಹ ಈ ಮಕ್ಕಳ ಕಲ್ಯಾಣಕ್ಕಾಗಿ ತ್ಯಾಗ ಮಾಡಬೇಕೆಂದಿದ್ದೇನೆ"

### 3.15.6.1.3 ಭಾರತದ ಕೇಂದ್ರೀಯ ಕಾರ್ಮಿಕ ಸಂಘಟನೆ

**"ಮಕ್ಕಳ ಮತ್ತು ಮಹಿಳೆಯರ ಶೋಷಣೆ ನಿಲ್ಲಿಸಲು, ಸಂಘಟಿತ ಮತ್ತು ಅಸಂಘಟಿತ ಕ್ಷೇತ್ರಗಳ ಕಾರ್ಮಿಕರನ್ನು ಸಂಘಟಿಸಿ ಅವರನ್ನು ಸಾಂಘಿಕ ಕೆಲಸದ ಕ್ಷೇತ್ರಗಳಿಗೆ ತರುವುದು ಅವಶ್ಯಕ"**

**ವಿ.ಜಿ.ಕೆ ನಾಯರ್**

**ಜನರಲ್ ಸೆಕ್ರೆಟರಿ ಸಿ.ಐ.ಟಿ.ಯು – ಕರ್ನಾಟಕ**


ತಮ್ಮ ಮಾಲೀಕರ ಕೈಯಲ್ಲಿ ಶೋಷಣೆ ಮತ್ತು ಇಲ್‌ಟ್ರೀಟ್‌ಮೆಂಟ್ ನ್ನು ಎದುರಿಸಲು ಚಾಕಚಕ್ಯತೆ ಮತ್ತು ಶಕ್ತಿ ಇಲ್ಲದ ಕಾರ್ಮಿಕರನ್ನು ಸಂಘಟಿಸುವುದು ಅವಶ್ಯ ಎಂಬುದಾಗಿ ಯಾವಾಗಲೂ ಸಿ.ಐ.ಟಿ.ಯು ಗುರುತಿಸಿರುತ್ತದೆ. ಆದರೆ ಅವರದನ್ನು ಐ.ಪಿ.ಇ.ಸಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಸೇರಿಸಿಕೊಂಡಾಗ ಮಾತ್ರ ಅವರು ಬಾಲಕಾರ್ಮಿಕತೆ ವಿರುದ್ಧದ ಹೋರಾಟದ ಅವಶ್ಯಕತೆಯನ್ನು ಗುರುತಿಸಿದರು. ಸಿ.ಐ.ಟಿ.ಯು ಬಾಲಕಾರ್ಮಿಕತೆಯ ವಿರುದ್ಧ ಹೋರಾಟ ಈ 14 ರಾಜ್ಯಗಳ ಮತ್ತು 9 ಔದ್ಯೋಗಿಕ ಕ್ಷೇತ್ರಗಳಿಗೆ ವಿಸ್ತರಿಸಿದೆ. ಕ್ಯಾಂಪ್‌ಗಳ, ಕರಪತ್ರಗಳ, ಪೋಸ್ಟರ್‌ಗಳ ವೀಡಿಯೋಗಳ ಬಳಿ ಇಡೀ ದೇಶದಲ್ಲಿನ ಸದಸ್ಯರಲ್ಲಿ ಬಾಲಕಾರ್ಮಿಕತೆಯ ಬಗ್ಗೆ ಸಾಮಾನ್ಯ ಜ್ಞಾನ ಹೆಚ್ಚಿಸುವಲ್ಲಿ ಸಫಲರಾಗಿದ್ದರೆ, ಸಿ.ಐ.ಟಿ.ಯು ಬಾಲಕಾರ್ಮಿಕ ವಿಭಾಗದ ರಾಷ್ಟ್ರೀಯ ಮಟ್ಟದ ಮುಖ್ಯಸ್ಥರಾದ ಮತ್ತು ಸಂಸ್ಥೆಯ ಕಾರ್ಯದರ್ಶಿಗಳಾದ ಎಂ.ಕೆ ಗಂಗೂಲಿಯವರು ಬಾಲಕಾರ್ಮಿಕತೆ,



ಟ್ರೇಡ್ ಯೂನಿಯನ್ ಚಳುವಳಿಯ ಮುಖ್ಯ ಅಂಶವಾಗಿರುತ್ತದೆ ಎಂಬುದಾಗಿ ನಂಬಿರುತ್ತಾರೆ. ಸಿ.ಐ.ಟಿ.ಯು ತನ್ನ ಬಾಲಕಾರ್ಮಿಕತೆಯ ವಿರುದ್ಧದ ಮತ್ತು ಮಹಿಳೆಯ ಶೋಷಣೆ ವಿರುದ್ಧದ ಹೋರಾಟವನ್ನು ಉಳಿಸಿಕೊಂಡು ಅದನ್ನು ಇನ್ನು ತೀವ್ರಗೊಳಿಸಲು ಶಕ್ತವಾಗುತ್ತದೆ ಎಂಬುದನ್ನು ನಂಬಿರುತ್ತಾರೆ. ಅವರು ಸಿ.ಐ.ಟಿ.ಯು ಬಹಳ ಹಿಂದೆಯೇ ಬಾಲಕಾರ್ಮಿಕತೆಯ ವಿರುದ್ಧದ ಹೋರಾಟವನ್ನು ಕೈಗೆತ್ತಿಕೊಳ್ಳಬೇಕು ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಅದನ್ನು ಕರ್ನಾಟಕ ವಿಭಾಗದ ಮುಖ್ಯಸ್ಥರಾದ ವಿ.ಜಿ.ಕೆ ನಾಯರ್ ಸಹ ಒಪ್ಪಿಕೊಳ್ಳುತ್ತಾರೆ. ಇವರ ಪ್ರಕಾರ ಮಹಿಳೆಯ ಸ್ಥಿತಿಯನ್ನು ಶಿಕ್ಷಣದ ಮೂಲಕ ಉತ್ತಮ ಪಡಿಸದೆ ಬಾಲಕಾರ್ಮಿಕತೆಯನ್ನು ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ಕರ್ನಾಟಕ ರಾಜ್ಯವು ಸಿ.ಐ.ಟಿ.ಯು ಬಾಲಕಾರ್ಮಿಕತೆಯ ವಿರುದ್ಧದ ಹೋರಾಟದಲ್ಲಿ ಹೆಚ್ಚು ಸಫಲವಾದ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಅತೀ ಹೆಚ್ಚು ಅಸಂಘಟಿತ ಕಾರ್ಮಿಕರಿದ್ದಾರೆ – ಹೆಚ್ಚಿನವರು ಹೆಂಗಸರು ಮತ್ತು ಮಕ್ಕಳು – ಇವರು ಬೀಡಿ ಮತ್ತು ಅಗರಬತ್ತಿ ಉದ್ಯಮಗಳಲ್ಲಿ ಕೆಲಸ ಮಾಡುತ್ತಾರೆ. ಸಿ.ಐ.ಟಿ.ಯು ತನ್ನ ಬಾಲಕಾರ್ಮಿಕತೆಯ ವಿರುದ್ಧದ ಕಾರ್ಯಕ್ರಮಗಳನ್ನು ದಕ್ಷಿಣ ಕರ್ನಾಟಕದಲ್ಲಿ ಹಮ್ಮಿಕೊಂಡಿದೆ. ಮಂಗಳೂರಿನಲ್ಲಿ ಸುಮಾರು 23000 ಕಾರ್ಮಿಕರನ್ನು ಒಳಗೊಂಡಿದೆ. ಇದರಲ್ಲಿ ಹೆಚ್ಚಿನವರು ಮಹಿಳೆಯರು. ಸಿ.ಐ.ಟಿ.ಯು ಮಹಿಳಾ ವಿಭಾಗಕ್ಕೆ ಅಂದರೆ ಮಹಿಳಾ ಸಮಿತಿಗೆ ಬಾಲಕಾರ್ಮಿಕ ವಿರುದ್ಧದ ಹೋರಾಟದ ದೊಡ್ಡ ಪಾತ್ರವನ್ನು ವಹಿಸಲಾಗಿದೆ. ಅದರ ಕನ್ವಿನರ್ ಶ್ರೀಮತಿ ವರಲಕ್ಷ್ಮಿ. ಸಿ.ಐ.ಟಿ.ಯುನ, ಬಾಲಕಾರ್ಮಿಕತೆಯ ವಿರುದ್ಧದ ಹೋರಾಟದ ಅತ್ಯಂತ ದೊಡ್ಡ ಸಾಧನೆ, ಮೈಸೂರಿನಲ್ಲಿ ಅಗರಬತ್ತಿ ಕಾರ್ಮಿಕರ ಯೂನಿಯನ್ ಸ್ಥಾಪನೆಯಾಗಿದೆ – ಇಲ್ಲಿ ದೊಡ್ಡ ಸಂಖ್ಯೆಯ ಅಸಂಘಟಿತ ನೌಕರರು ಕೆಲಸ ಮಾಡುತ್ತಿದ್ದಾರೆ. "ಮೈಸೂರು ಜಿಲ್ಲೆ ಕಾರ್ಮಿಕರ ಸಂಘ" ಅಗರಬತ್ತಿ ಕಾರ್ಮಿಕರ ಹೊಸ ಯೂನಿಯನ್ ಆಗಿದ್ದು, ಇದು ಕರ್ನಾಟಕದಲ್ಲಿ ಸಿ.ಐ.ಟಿ.ಯು ನ ಅತ್ಯಂತ ಹೆಚ್ಚು ಸಫಲತೆಯನ್ನು ಹೊಂದಿದ ಹೊಸ ಅಂಗ ಸಂಸ್ಥೆ. ಇದರ ಸ್ಥಾಪಕರಾದ ಶ್ರೀ ಮೋಹನ್ ಕುಮಾರ್ ಅವರ ಬಾಧ್ಯತೆ ಹಾಗೂ ಕಳಕಳಿಯ ಚಟುವಟಿಕೆಯಿಂದ ಸಾಧ್ಯವಾಗಿದೆ. 45 ವರ್ಷದ ಶ್ರೀ ಮೋಹನ್ ಕುಮಾರ್‌ರವರು ಸಹ ಬಾಲಕಾರ್ಮಿಕರಾಗಿದ್ದರು.

1952 ಜನವರಿಯಲ್ಲಿ ಮೈಸೂರಿನ ಒಂದು ಬಡ ಕುಟುಂಬದಲ್ಲಿ ನನ್ನ ಜನನವಾಯಿತು. ನನ್ನನ್ನು ಮೈಸೂರಿನಲ್ಲಿ ಪ್ರಾಥಮಿಕ ಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆಗೆ ಸೇರಿಸಲಾಯಿತು. ನನ್ನ ಪೋಷಕರು ನನ್ನನ್ನು 50 ರೂಗಳಿಗೆ ಮೈಸೂರಿನ ಹತ್ತಿರ ಭಿರ್‌ವಾಲ್ ಹಳ್ಳಿಯ ಒಂದು ಸಣ್ಣ ಅಂಗಡಿಯ ಮಾಲೀಕನಿಗೆ ಅಡ ಹಾಕಿದರು. ನನ್ನ ಕೆಲಸ 6 ಎಮ್ಮೆಗಳನ್ನು ಸಾಕುವುದು. ಅವುಗಳನ್ನು ಶುಚಿ ಮಾಡುವುದು ಮತ್ತು ಅವುಗಳನ್ನು ಹತ್ತಿರ ಕಾಡಿಗೆ ಮೇಯಲು ಕರೆದುಕೊಂಡು ಹೋಗುವುದು. ಸಂಜೆ ಹೊತ್ತಿನಲ್ಲಿ ನಾನು ಅಂಗಡಿಯಲ್ಲಿ ಕೆಲಸ ಮಾಡಬೇಕಾಗಿತ್ತು. ನಾನು ನನ್ನ ವಿದ್ಯಾಭ್ಯಾಸವನ್ನು ಮುಂದುವರೆಸಲು ಯೋಚಿಸಿದ್ದರಿಂದ, ಅಂಗಡಿ ಮಾಲೀಕರಿಂದ ತಪ್ಪಿಸಿಕೊಂಡು ಮೈಸೂರು ಬಸ್ ಹತ್ತಿದೆ. ನನ್ನ ಹತ್ತಿರ ಬಸ್ ಚಾರ್ಜ್ ಕೊಡಲು ಹಣ ಇಲ್ಲದೆ ಇದ್ದುದರಿಂದ ಬಸ್ ಕಂಡೆಕ್ಟರ್ ನನ್ನನ್ನು ಪೋಲೀಸರಿಗೆ ಕೊಡುವುದಾಗಿ ಹೆದರಿಸಿದ. ಬಸ್ಸಿನಲ್ಲಿದ್ದ ಪ್ರಾಥಮಿಕ ಶಾಲೆಯ ಶಿಕ್ಷಕ ಶ್ರೀ ಶಿವಬಸಪ್ಪ ನನ್ನ ಚಾರ್ಜ್ ಕೊಟ್ಟು ನನ್ನನ್ನು ಅವರ ಊರಾದ ಕಬ್ಬಹಳ್ಳಿಗೆ ಕರೆದುಕೊಂಡು ಹೋದರು. ಅವರು ನನ್ನನ್ನು ಹಳ್ಳಿಯ ಹೈಸ್ಕೂಲಿಗೆ ಸೇರಿಸಿದರು. ಅವರು ನನಗೆ ಮಠದಲ್ಲಿ ಎರಡು ಹೊತ್ತಿನ ಊಟದ ವ್ಯವಸ್ಥೆ ಮಾಡಿದರು. ಹಾಗೂ ಅವರ ಭಾವನ ಹೋಟೆಲ್‌ನಲ್ಲಿ ಕ್ಲೀನರ್ ಆಗಿ ಕೆಲಸಕ್ಕಿಟ್ಟರು. ನಾನು ಬೆಳಿಗ್ಗೆ ಬೇಗ ಎದ್ದು ಇಡ್ಲಿ ಚಟ್ನಿ ತಯಾರಿಸಿ ಹೋಟೆಲ್‌ನಲ್ಲಿ 9 ಗಂಟೆಯವರೆಗೆ ಕೆಲಸ ಮಾಡಬೇಕಾಗಿತ್ತು. ಆಗ ನನ್ನ ಸಹಪಾಠಿಗಳು ಹೋಟೆಲ್‌ಗೆ ಊಟ ಮಾಡಲು ಬರುತ್ತಿದ್ದರು. ನಾನು ಹತ್ತನೇ ತರಗತಿಯಲ್ಲಿರುವಾಗ ಶ್ರೀ ಶಿವಬಸಪ್ಪನವರು ತೀರಿ ಹೋದರು. ಹೋಟೆಲ್ ಮಾಲೀಕರು ನನ್ನ ಶಾಲೆಯ ಶುಲ್ಕ ಕೊಡಲು ನಿರಾಕರಿಸಿದರು. ನನ್ನ ಪರೀಕ್ಷಾ ಶುಲ್ಕ ಸಹ ಕೊಡಲಿಲ್ಲ. ನನ್ನ ಕಷ್ಟವನ್ನು ನೋಡಿ ಶಾಲೆ ಶಿಕ್ಷಕರು ನನ್ನ ಶುಲ್ಕವನ್ನು ಮಕ್ಕಳಿಂದ ಸಂಗ್ರಹಿಸಿ ಕಟ್ಟಿದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಪಾರ್ಥಸಾರಥಿಯವರು ನನ್ನನ್ನು ತಮ್ಮ ಮನೆಯಲ್ಲಿ ಮನೆಗೆಲಸಕ್ಕೆ ಸೆಕೆಂಡರಿ ಪರೀಕ್ಷೆ ಮುಗಿಯುವವರೆಗೆ ಇಟ್ಟುಕೊಂಡರು.






ನಾನು ನನ್ನ ಓದನ್ನು ಮುಂದುವರೆಸಲು ನಿರ್ಧರಿಸಿದ್ದೆ. ನಾನು ಮೈಸೂರಿಗೆ ಹೋದೆ. ಮಧ್ಯದಲ್ಲಿ ನಾನು ನನ್ನ ಪೋಷಕರನ್ನು ಕಂಡು ಹಿಡಿದೆ. ಅವರು ನನ್ನನ್ನು ಕೆಲಸಕ್ಕೆ ಸೇರು ಎಂದು ಒತ್ತಾಯಿಸಿದರು. ನಾನು ಮಹಾರಾಜ ಸಂಜೆ ಕಾಲೇಜು ಸೇರಿದೆ. ಹಗಲು ಹೊತ್ತಿನಲ್ಲಿ ನನ್ನ ಕುಟುಂಬಕ್ಕೆ ಸಹಾಯ ಮಾಡಲು ಕೆಲಸ ಮಾಡುತ್ತಿದ್ದೆ. ನನ್ನ ಮೊದಲ ಕೆಲಸ ಮೈಸೂರು ರೈಲ್ವೆ ಅಂಚೆ ಸೇವೆಯಲ್ಲಿ ಹಮಾಲರ ಕೆಲಸ ತಿಂಗಳಿಗೆ 150 ಅನ್ನು ಕೂಲಿಯಾಗಿ ನೀಡುತ್ತಿದ್ದರು. ನಾನು ಅಲ್ಲಿ 2ವರ್ಷ ಕೆಲಸ ಮಾಡಿದೆ. ನಾನು ಪ್ರಥಮ ಡಿಗ್ರಿ ಮಾಡುವಾಗ ಹೋಟೆಲ್‌ನಲ್ಲಿ ವೈಟರ್ ಆಗಿ ಸೇರಿದೆ. ನಾನು ಡಿಗ್ರಿ ಮುಗಿಸಿ ಕೆಲಸಕ್ಕಾಗಿ ಹುಡುಕಾಡಲು ಆರಂಬಿಸಿದೆ. ನನ್ನ ಪ್ರಯತ್ನಗಳು ಸಫಲವಾಗಲಿಲ್ಲ. ನಾನು ಲಾ ಡಿಗ್ರಿ ಸೇರಿದೆ. ನಾನು ದಾಸ್ ಪ್ರಕಾಶ್ ಹೋಟೆಲ್‌ನಲ್ಲಿ ವೈಟರ್ ಆಗಿ ಕೆಲಸ ಮಾಡಲು ಆರಂಭಿಸಿದೆ. ಅಲ್ಲಿ ನಾನು ಹೋಟೆಲ್ ಕೆಲಸಗಾರರ ಕಾರ್ಮಿಕ ಸಂಘಟನೆ ರಚಿಸಲು ನಿರ್ಧಾರ ಮಾಡಿದೆ. ಇದರ ಉದ್ದೇಶ ಅವರ ಆಸಕ್ತಿಯನ್ನು ಕಾಪಾಡುವುದು ಮತ್ತು ಶೋಷಣೆಯಿಂದ ಮುಕ್ತಿ ದೊರಕಿಸುವುದು. ನಾನು ಸಂಘದ ಅಧ್ಯಕ್ಷನಾದೆ. ಹೋಟೆಲ್ ಆಡಳಿತ ಮಂಡಳಿಯವರು, ನನ್ನ ಸಂಘಟನೆಯ ಶಕ್ತಿ ಮುರಿಯಲು ನನ್ನನ್ನು ಕೆಲಸದಿಂದ ವಜಾ ಮಾಡಿದರು. ಕೆಲಸಗಾರರು ನನಗೆ ಬೆಂಬಲ ಕೊಟ್ಟು ಹರತಾಳ ಆರಂಭಿಸಿದರು. ಹರತಾಳವನ್ನು 62 ದಿವಸಗಳ ಕಾಲ ನಡೆಸಲಾಯಿತು. ಮೈಸೂರಿನ ಇಡೀ ಕಾರ್ಮಿಕ ವರ್ಗ ನನಗೆ ಬೆಂಬಲ ಕೊಟ್ಟಿತು. ಈ ಹರತಾಳ ನನ್ನಲ್ಲಿ ಬದಲಾವಣೆ ತಂದಿತು. ನಾನು ನನ್ನ ಜೀವನವನ್ನು ಕಾರ್ಮಿಕರ ಕಲ್ಯಾಣಕ್ಕಾಗಿ ಮುಡುಪಾಗಿಡಲು ನಿರ್ಧರಿಸಿದೆ. ಮೊದಲು ಹೋಟೆಲ್ ಕೆಲಸಗಾರರನ್ನು ಸಂಘಟಿಸಿದೆ. ಇದಾದ ನಂತರ ಅಸಂಘಟಿತ ಕ್ಷೇತ್ರದ ಇತರರನ್ನು ಸಂಘಟಿಸಲು ಆರಂಭಿಸಿದೆ. ಇತ್ತೀಚಿಗೆ ನಾನು ಬಾಲಕಾರ್ಮಿಕರ ಕಲ್ಯಾಣ ಸಂಘವನ್ನು ಸ್ಥಾಪಿಸಿರುತ್ತೇನೆ. ಇದರ ಮೂಲಕ ಕೆಲಸ ಮಾಡುವ ಮಕ್ಕಳಿಗೆ ಸಹಾಯ ಮಾಡುತ್ತಿದ್ದೇನೆ. ಇದರ ಜೊತೆಯಲ್ಲಿ ಅನೌಪಚಾರಿಕ ತರಗತಿಗಳನ್ನು ನಡೆಸುತ್ತಿದ್ದೇನೆ. ಕಲಿಕೆಯನ್ನು ಮುಂದುವರೆಸಲು ಆಸಕ್ತಿ ಇರುವವರಿಗಾಗಿ ವಸತಿ ನಿಲಯ ಆರಂಭಿಸಬೇಕೆಂದಿದ್ದೇನೆ.

ಬಾಲಕಾರ್ಮಿಕರಾಗಿ, ಹದಿಹರೆಯದ ಕಾರ್ಮಿಕನಾಗಿ ಮತ್ತು ಕಾರ್ಮಿಕನಾಗಿ ದುಡಿದ ನನ್ನ ಅನುಭವ ನನ್ನನ್ನು ಇತರ ಯಾವುದೇ ಕೆಲಸಕ್ಕೆ ಹೋಗದಂತೆ ಮಾಡಿತು. ನಾನು ನನ್ನ ಜೀವನವನ್ನು ಕಾರ್ಮಿಕ ವರ್ಗಕ್ಕೆ ಮತ್ತು ಇತರ ಕಷ್ಟ ಪಡುತ್ತಿರುವ ವರ್ಗಗಳಿಗೆ ಮೀಸಲು ಇಟ್ಟಿದ್ದೇನೆ – ಮೋಹನ್ ಕುಮಾರ್

### 3.15.6.1.4 ದಿ ಹಿಂದ್ ಮಜದೂರ್ ಸಭಾ (ಹೆಚ್.ಎಂ.ಎಸ್)

ದಿ ಹಿಂದ್ ಮಜದೂರ್ ಸಭಾಕ್ಕೆ ಕಾರ್ಮಿಕ ಸಂಘಟನೆಯ ಹೊರಗಿನ ಪಾಲುದಾರರ ಜೊತೆಯಲ್ಲಿ ಕೆಲಸ ಮಾಡಿದ ಅನುಭವ ಇದೆ. ಅದರ ಕಾರ್ಯದರ್ಶಿಯಾದ ಶ್ರೀ ಆರ್.ಎ. ಮಿಟ್ಟಲ್ ಅವರು ಹಿಂದ್ ಮಜದೂರ್ ಸಭಾದ ಬಾಲಕಾರ್ಮಿಕತೆ ನಿವಾರಣೆಯ ಚಟುವಟಿಕೆಗಳ ರುವಾರಿಯಾಗಿರುತ್ತಾರೆ. 1992 ರಲ್ಲಿ ರಾಂಚಿಯಲ್ಲಿ ನಡೆದ ಸಮಾವೇಶದಲ್ಲಿ ಹೆಚ್.ಎಂ.ಎಸ್ ಬಾಲಕಾರ್ಮಿಕತೆಯನ್ನು ವಿರೋಧಿಸಿ ನಿರ್ಣಯ ತೆಗೆದುಕೊಂಡಿತು. ಹೆಚ್.ಎಂ.ಎಸ್ ಅಂಗ ಸಂಸ್ಥೆಯಾದ ಪಶ್ಚಿಮ ಬಂಗಾಳದ "ಟೀ" ಉದ್ಯಮದವರು ಒಂದು ಹೊಸ ಕಾರ್ಯಕ್ರಮ ರೂಪಿಸಿಕೊಂಡಿದ್ದಾರೆ. ಈ ಕಾರ್ಯಕ್ರಮದ ಅಂಗವಾಗಿ, ಬಾಲಕಾರ್ಮಿಕತೆಯ ವಿರುದ್ಧ ಹೋರಾಡಲು ತೋಟಗಳ, ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಸ್ಥೆ ಎಂಬ ಸರಕಾರೇತರ ಸಂಸ್ಥೆಯನ್ನು ರೂಪಿಸಿಕೊಂಡಿದ್ದಾರೆ (1982) ಇದರ ಉದ್ದೇಶ ಸಾಮಾಜಿಕ ಕಳಕಳಿ ಮತ್ತು ಕಾರ್ಮಿಕ ಯೂನಿಯನ್ ಚಳುವಳಿಗಳನ್ನು ಒಟ್ಟು ಸೇರಿಸಿ ಬಾಲಕಾರ್ಮಿಕತೆಯ ವಿರುದ್ಧ ಹೋರಾಡುವುದು.






ಐ.ಪಿ.ಇ.ಸಿ ಸಹಾಯದಿಂದ, ಉತ್ತರ ಪಶ್ಚಿಮ ರಾಜ್ಯಗಳ ಚಾ ತೋಟಗಳಲ್ಲಿನ ಬಾಲಕಾರ್ಮಿಕತೆಯನ್ನು ಅತ್ಯಂತ ಹೆಚ್ಚಿನ ಸಫಲತೆಯಿಂದ ಅನುಷ್ಠಾನ ಮಾಡಲಾಗಿದೆ. ಆ ರಾಜ್ಯಗಳಲ್ಲಿ, ಹೆಚ್.ಎಂ.ಎಸ್ ಹಾಗೂ ಅನ್ಯ ಅಂಗ ಸಂಸ್ಥೆಗಳು ಉತ್ತರ ಪಶ್ಚಿಮ ರಾಜ್ಯಗಳಲ್ಲಿ ಬಾಲಕಾರ್ಮಿಕತೆಯ ಬಗ್ಗೆ ಅರಿವನ್ನು ಉಂಟು ಮಾಡಿವೆ. ಈ ಆಂದೋಲನಕ್ಕೆ ನಿರ್ದೇಶನ ಕೊಟ್ಟವರು ಹೆಚ್.ಎಂ.ಎಸ್ ಅಂಗ ಸಂಸ್ಥೆಯಾದ ಪಶ್ಚಿಮ ಬಂಗಾಳ ಚಾ ಮಜದೂರ್ ಸಂಘದ ಜನರಲ್ ಸೆಕ್ರೆಟರಿ ಆದ ಶ್ರೀ ಸಮೀರ್ ರಾಯ್‌ರವರು. ಯುವ ನಾಯಕರಾದ ನಾಗಪುರ ವಿಲಾಸ ಬೊಂಗಡೆಯವರು ಅನೌಪಚಾರಿಕ ತರಬೇತಿ ನಡೆಸಿ ಹೊಸ ಮಾದರಿಗಳನ್ನು ರೂಪಿಸಿರುತ್ತಾರೆ. ಈ ಕೆಳಗಿನ ಎರಡು ಚಟುವಟಿಕೆಗಳ ಅಧ್ಯಾಯದಿಂದ ಹೆಚ್.ಎಂ.ಎಸ್ ಬಾಲಕಾರ್ಮಿಕತೆಯ ಚಟುವಟಿಕೆಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಬಹುದು.

**ಆಶಾಕಿರಣದೊಂದಿಗೆ ನಾಳೆಗೆ**

ಹೆಚ್.ಎಂ.ಎಸ್‌ನ ಯುವ ನಾಯಕರಾದ ನಾಗಪುರದ ವಿಲಾಸ್ ಭೋಂಗಡೆ ಅವರು ನಗರದ ಚಿಂದಿ ಆಯುವ ಮಕ್ಕಳನ್ನು ಗುರುತಿಸಿಕೊಂಡು ಅವರನ್ನು ಅವರ ಚಿಂತಾಜನಕ ಜೀವನದಿಂದ ಬಿಡುಗಡೆಗೊಳಿಸಿ, ಅವರಿಗೆ ಅನೌಪಚಾರಿಕ ಶಿಕ್ಷಣ ತರಗತಿಗಳನ್ನು ವ್ಯವಸ್ಥೆ ಮಾಡಿದರು (1996). ಅನೌಪಚಾರಿಕ ತರಗತಿಗಳನ್ನು "ಬಾಲ ಮಜ್ದೂರ್ ಜಾಗರಣಾ ಪ್ರಕಲ್ಪ" ಎಂಬ ನೆಲೆಯಲ್ಲಿ ಒಂದು ವಿಶೇಷ ಅನೌಪಚಾರಿಕ ಶಾಲೆ ತೆರೆದರು. ಈ ವಿಶೇಷ ಶಾಲೆಗೆ 30 ಮಂದಿ ಚಿಂದಿ ಆಯುವ ಮಕ್ಕಳು ತಮ್ಮ ಕೆಲಸಕ್ಕೆ ಬೆಳಗ್ಗೆ ಏಳು ಗಂಟೆಗೆ ಹೋಗಿ ಕೆಲಸ ಮಾಡಿ ಪ್ರತಿದಿನ ಮಧ್ಯಾಹ್ನ ಶಾಲೆಗೆ ಬರುತ್ತಾರೆ. ಸ್ಥಳೀಯ ಹೆಚ್.ಎಂ.ಎಸ್ ಘಟಕದವರು ಅವರಿಗೆ ಉಪಹಾರ ಒದಗಿಸುವುದು. ವಿಲಾಸ್ ಬೊಂಗಡೆ ಅವರಿಗೆ ಶಿಕ್ಷಣ ಕೊಡುವರು. ಈ ಪ್ರಯೋಗವು ಟ್ರೇಡ್ ಯೂನಿಯನ್ ಸದಸ್ಯರಲ್ಲಿ. ಮಕ್ಕಳ ಬಗ್ಗೆ ಅವರ ಪೋಷಕರಲ್ಲಿ ಮಹತ್ತರವಾದ ಆಸಕ್ತಿಯನ್ನು ಹುಟ್ಟಿಸಿದೆ. ಇಂತಹ ಶಾಲೆಗಳಿಗೆ ಹೆಚ್ಚಿಗೆ ಬೇಡಿಕೆ ಬರಲಾರಂಭಿಸಿದೆ. ಕಷ್ಟ ಪರಿಸ್ಥಿತಿಯಲ್ಲೂ ಆಶಾಕಿರಣ ಇದೆ ಎಂಬುದನ್ನು ಬೊಂಗಡೆ ತೋರಿಸಿ ಕೊಟ್ಟಿದ್ದಾರೆ. ದುರ್ಗ ಚಿಂದಿ ಆಯುವ ಹುಡುಗಿ, ಶಾಲಾ ಶಿಕ್ಷಕಳಾಗುವ ಕನಸು ಕಾಣುತ್ತಿದ್ದಾಳೆ. ಮಕ್ಕಳು ತಮ್ಮ ಮುಂದಿನ ಭವಿಷ್ಯದ ಬಗ್ಗೆ ಕನಸು ಕಾಣುವಂತೆ ಮಾಡಿರುವುದು, ಒಂದು ವಿಶಿಷ್ಟವಾದ ಸಂಗತಿ.

**ತೋಟ, ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಸ್ಥೆ:** ಇದು ಪ್ರಾಯಶಃ ಇಂತಹ ಒಂದೆ ಒಂದು ಸಂಸ್ಥೆ, ಕಾರ್ಮಿಕ ಸಂಘಟನೆಯಿಂದ ಆರಂಭವಾಗಿರುವುದು ಎಂದು ಕಂಡು ಬರುತ್ತದೆ. ಇದರಲ್ಲಿ ಟ್ರೇಡ್ ಯೂನಿಯನ್ ಮಾಲೀಕರು ಮತ್ತು ಸರಕಾರ ಒಟ್ಟು ಸೇರಿ ಕೆಲಸ ಮಾಡುತ್ತಿದ್ದಾರೆ. ಈ ಸಂಸ್ಥೆಯ ಮುಖ್ಯ ಸ್ಥಳ ಜಲ್‌ಪೈಗುರಿಯಲ್ಲಿ ಇದೆ. ಇದು ಕೆಲವು ಮಹತ್ತರವಾದ ಸಾಧನೆ ಮಾಡಿದೆ. ಇದು ಈಶಾನ್ಯ ರಾಜ್ಯಗಳ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು 2000 ಮಕ್ಕಳು ಶಿಕ್ಷಣ ಪಡೆದುಕೊಳ್ಳಲು ಸಹಾಯ ಮಾಡಿದೆ. ಇದಲ್ಲದೆ ಟೀ ಉತ್ಪಾದನೆ ಮಾಡುವ ಪ್ರದೇಶದಲ್ಲಿ ಬಾಲಕಾರ್ಮಿಕತೆಯ ವಿರುದ್ಧ ಚಳುವಳಿ ನಡೆಸಿದೆ. ಪಶ್ಚಿಮ ಬಂಗಾಳದ ಡೊರ್ಸ್‌ನಲ್ಲಿ ಹೆಚ್.ಎಂ.ಎಸ್ ಬಾಲಕಾರ್ಮಿಕತೆಯ ವಿರುದ್ಧ ಕಾರ್ಯಕ್ರಮ ನಡೆಸುತ್ತಿದೆ. ಡಾರ್ಜಲಿಂಗ್‌ನಲ್ಲಿ ಡಾರ್ಜಲಿಂಗ್ ತೋಟಗಳ ಮಾಲೀಕರ ಸಂಘದೊಂದಿಗೆ ಸೇರಿ ಬಾಲಕಾರ್ಮಿಕತೆಯ ವಿರುದ್ಧ ಹೋರಾಟ ನಡೆಸುತ್ತಿದೆ. ಸಿಕ್ಕಿಂನಲ್ಲಿ ಸರಕಾರದ ಕೈಗಾರಿಕೆ ಇಲಾಖೆಯೊಂದಿಗೆ ಸೇರಿಕೊಂಡಿದೆ. ಇವರು ಬೇರೆ ಬೇರೆ ಪಾಲುದಾರರೊಂದಿಗೆ ಸೇರಿ ಕಾರ್ಯಕ್ರಮ ಕೈಗೊಂಡಿದ್ದಾರೆ. ಹೆಚ್.ಎಂ.ಎಸ್ ನಾಗಪುರದಲ್ಲಿ ಮಾತ್ರ ಶಾಲೆ ನಡೆಸುತ್ತಿಲ್ಲ. ಅಮೃತ್‌ಸರದ ಇಟ್ಟಿಗೆ ಗೂಡುಗಳಲ್ಲಿ ಕೆಲಸ ಮಾಡುವ ಮಕ್ಕಳಿಗಾಗಿ 2 ಅನೌಪಚಾರಿಕ ಶಾಲೆಗಳನ್ನು ಹೆಚ್.ಎಂ.ಎಸ್ ಅಂಗ ಸಂಸ್ಥೆಯಾದ "ಭಟ್ಟಾ ಮಜ್ದೂರ್ ಸಭಾ" ನಡೆಸುತ್ತಿದೆ. ಇವರಲ್ಲಿ ಹೆಚ್ಚಿನವರು ಬಿಹಾರ್‌ದಿಂದ ವಲಸೆ ಬಂದವರು. ಮಕ್ಕಳನ್ನು ಕೆಲಸಕ್ಕೆ ನೇಮಿಸಕೊಳ್ಳುವ ಇಟ್ಟಿಗೆ ಗೂಡುಗಳ ಹತ್ತಿರ ಅನೌಪಚಾರಿಕ ಶಾಲೆಗಳನ್ನು ತೆರೆಯಲಾಗಿದೆ. ಇದರ ಶಿಕ್ಷಣಕ್ಕಾಗಿ ಬೇಡಿಕೆ ಹೆಚ್ಚಿಸಿದೆ.





### 3.15.6.1.5 ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಇಂಟಕ್)

ಇಂಟಕ್ ಸಂಸ್ಥೆ ಬಾಲಕಾರ್ಮಿಕತೆ ವಿರುದ್ಧದ ಐ.ಪಿ.ಇ.ಸಿ ಕಾರ್ಯಕ್ರಮವನ್ನು ತನ್ನ ಸದಸ್ಯರಿಗಾಗಿ ಅನುಷ್ಠಾನ ಮಾಡುತ್ತಿದೆ. ಇದು ತನ್ನ ಸದಸ್ಯರಲ್ಲಿ ರಾಷ್ಟ್ರೀಯ, ಪ್ರಾಂತೀಯ ಕಾರ್ಯಾಗಾರಗಳು, ಸೆಮಿನಾರ್‌ಗಳು ಇತ್ಯಾದಿಗಳಿಂದ ಬಾಲಕಾರ್ಮಿಕತೆಯ ಬಗ್ಗೆ ಸೂಕ್ಷ್ಮತೆ ಉಂಟುಮಾಡುವಲ್ಲಿ ಸಫಲವಾಗಿದೆ.

ಇಂಟಕ್, ಐ.ಪಿ.ಇ.ಸಿ ಕಾರ್ಯಕ್ರಮಗಳಿಗಾಗಿ ಅದರ ನವದೆಹಲಿ ಕಛೇರಿಯಲ್ಲಿ ಒಂದು ಘಟಕ ತೆರೆದಿರುತ್ತದೆ. ಇದೊಂದು ಅತ್ಯಂತ ಉತ್ತಮ ಘಟಕ. ದೇಶದ ವಿವಿಧ ಭಾಗಗಳಲ್ಲಿ ಇರುವ ಸದಸ್ಯರಿಗೆ ಹಾಗೂ ಇಂಟಕ್‌ದ ಅಫಿಲಿಯೇಟ್ ಆದ ಸಂಸ್ಥೆಗಳಿಗೆ ಸಹಕಾರ ಕೊಡುತ್ತಿದೆ. ಇಂಟಕ್ ಕಾರ್ಯಕ್ರಮದ ವಿಶೇಷತೆ ಎಂದರೆ ಬಾಲಕಾರ್ಮಿಕತೆ ವಿರುದ್ಧದ ಹೋರಾಟಕ್ಕಾಗಿ ಮಕ್ಕಳ ನಿಧಿ ಒಂದನ್ನು ರಚಿಸಿರುವುದು. ಇದಕ್ಕೆ ವಾಲೆಂಟರಿ ದೇಣಿಗೆಯನ್ನು ಕೊಡಬಹುದಾಗಿದೆ. ಇದಲ್ಲದೆ, ಇಂಟಕ್ ಇಡೀ ಭಾಗದಲ್ಲಿ ಅದರ ತಳಸ್ಥರದ ಸಂಸ್ಥೆಗಳು ಬಾಲಕಾರ್ಮಿಕತೆ ವಿರುದ್ಧದ ಕೆಲಸಗಳ ಸಮಗ್ರ ವಿಶ್ಲೇಷಣೆಯನ್ನು 1997 ರ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಮಾಡಿದೆ. ಅಖಿಲ ಭಾರತ ಮಟ್ಟದ ಕಾರ್ಯಾಗಾರದಿಂದ ಸದಸ್ಯರು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು ಆಸ್ಪದವಾಯಿತು. ಮತ್ತು ತಮ್ಮ ತಮ್ಮ ಸಾಧನೆಗಳನ್ನು ಹಂಚಿಕೊಳ್ಳಲು ಆಸ್ಪದವಾಯಿತು. ಇಂಟಕ್ ಅಧ್ಯಕ್ಷರಾದ ಶ್ರೀ ಸಂಜೀವ ರೆಡ್ಡಿ ಮತ್ತು ಅವರ ಸಹವರ್ತಿಗಳಾದ ಶ್ರೀ ಲಾಲ್ ಬಹದ್ದೂರ್ ಸಿಂಗ್ ಮತ್ತು ಶ್ರೀ ರಾಮಲಾಲ್ ಠಾಕೂರ್ ಬಾಲಕಾರ್ಮಿಕತೆಯ ವಿರುದ್ಧದ ಇಂಟಕ್ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು. ದೇಶದ ಬೇರೆ ಬೇರೆ ಭಾಗದಲ್ಲಿ ಇಂಟಕ್ ಸದಸ್ಯರು ಬಾಲಕಾರ್ಮಿಕರನ್ನು ಗುರುತಿಸಿ ಅವರನ್ನು ಬಿಡುಗಡೆಗೊಳಿಸುವುದು ಜಾಸ್ತಿಯಾಯಿತು. ಇದರಲ್ಲಿ ಇಬ್ಬರು ಸದಸ್ಯರಾದ ಒರಿಸ್ಸಾದ ಪ್ರಣೋತಿ ಮಿಶ್ರಾ ಮತ್ತು ದೆಹಲಿಯ ಯೋಗೇಶ್ ಶರ್ಮಾರ ಸಾಧನೆಯನ್ನು ವಿವರಿಸಲಾಗಿದೆ.


**ಪ್ರಣೋತಿ ಮಿಶ್ರಾ**

34 ವರ್ಷದ ಪ್ರಣೋತಿ ಮಿಶ್ರಾ ಒರಿಸ್ಸಾ ರಾಜ್ಯದ ಇಂಟಕ್ ಬಾಲಕಾರ್ಮಿಕ ಘಟಕದ ಕನ್ವಿನರ್ ಅವರು ಭುವನೇಶ್ವರದ ಸುತ್ತ ಮುತ್ತಲಿನ ಬೇರೆ ಬೇರೆ ಹಳ್ಳಿಗಳಲ್ಲಿ ನಾಲ್ಕು ಅನೌಪಚಾರಿಕ ಕೇಂದ್ರಗಳನ್ನು ನಡೆಸುತ್ತಿದ್ದಾರೆ. ಪ್ರಣೋತಿ ಅವರು ಕೆಲಸ ಮಾಡುತ್ತಿದ್ದ 48 ಮಕ್ಕಳನ್ನು ಪುನರ್ವಸತಿಗೊಳಿಸದ್ದಾರೆ. ಪ್ರಣೋತಿ ತನ್ನ ವೈಯಕ್ತಿಕ ದುರಂತವನ್ನು ಹಾಗೂ ತನ್ನ ಉದ್ಯೋಗ ನಷ್ಟವನ್ನು ಸಹಿಸಿಕೊಂಡು ಬಾಲಕಾರ್ಮಿಕತೆಯ ಬಗ್ಗೆ ಕೆಲಸ ಮಾಡುತ್ತಿದ್ದಾರೆ. ಅವರು ಸಂಪೂರ್ಣವಾಗಿ ಬಾಲಕಾರ್ಮಿಕರ ಪುನರ್ವಸತಿ ಬಗ್ಗೆ ತನ್ನ ರಾಜ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಇದು ಪ್ರಣೋತಿ ಮಿಶ್ರಾರವರ ಕತೆ–ಅದನ್ನು ಅವರ ಬಾಯಿಯಿಂದಲೇ ಕೇಳಿರಿ.

ನಾನು ಬರೀ ಹಳ್ಳಿ ಹುಡುಗಿ ಆಗಿದ್ದೆ. ನಾನು ಹೊರಗಿನ ಪ್ರಪಂಚದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿದ್ದಿಲ್ಲ. ನಾನು ನನ್ನ ಪ್ರೀ ಡಿಗ್ರಿ ತರಗತಿ ಮುಗಿಸಿದ ನಂತರ ಮದುವೆ ಆದೆ. ಒಂದು ವರ್ಷದ ನಂತರ ನನ್ನ ಗಂಡ ಆತ್ಮಹತ್ಯೆ ಮಾಡಿಕೊಂಡ. ನಾನು ನನ್ನ ಒಡೆದ ಹೃದಯದೊಂದಿಗೆ ಮನೆಗೆ ವಾಪಾಸ್ಸು ಬಂದೆ ನನಗೆ ಜೀವನದಲ್ಲಿ ಮುಂದೆ ಏನು ಮಾಡುವುದು ಎಂದು ಗೊತ್ತಾಗಲಿಲ್ಲ. 21 ವರ್ಷದ ಹುಡುಗಿ ವಿಧವೆ ಬಾಳು ಬಾಳುವುದು ಅಷ್ಟು ಸುಲಭವಲ್ಲ. ನಾನು ಕೆಲಸಕ್ಕಾಗಿ ಹುಡುಕಾಡಿದೆ. ನನಗೆ ಹಿಂದುಸ್ಥಾನ ಮೆಷಿನ್ ಟೂಲ್ಸ್‌ನಲ್ಲಿ ಕೆಲಸ ಸಿಕ್ಕಿತು. ಆದರೆ ಕಂಪೆನಿ ಮೂರು ವರ್ಷದ ನಂತರ ಲಾಕೌಟ್ ಘೋಷಿಸಿತು. ನಾನು ಕೆಲಸದಲ್ಲಿದ್ದಾಗ ಇಂಟಕ್ ಸೇರಿದ್ದೆ ಹಾಗೂ ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಲಾರಂಭಿಸಿದ್ದೆ. ಲಾಕೌಟ್ ಆದ ನಂತರ ನಾನು ನನ್ನ ಇಂಟಕ್‌ನೊಂದಿಗಿನ ಸಂಬಂಧವನ್ನು ಮುಂದುವರೆಸಲು ನಿರ್ಧರಿಸಿದೆ.





ಇಂಟಕ್ ನನಗೆ ಮಹಿಳಾ ಕಾರ್ಮಿಕರನ್ನು ಸಂಘಟಿಸುವ ಕೆಲಸ ವಹಿಸಿತು. ಯೂನಿಯನ್‌ನ ಚಟುವಟಿಕೆ ನನ್ನ ಜೀವನವನ್ನು ಬದಲಾಯಿಸಿತು. ನಾನು ಆ ಸಂದರ್ಭದಲ್ಲಿ ಬಹಳಷ್ಟು ಕಷ್ಟ ಮತ್ತು ಶೋಷಣೆಯನ್ನು ನೋಡಿದೆ. ನಾನು ಪಡುತ್ತಿರುವ ಕಷ್ಟ ಕಾರ್ಪಣ್ಯಗಳಿಗಿಂತ ಅವರದು ಇನ್ನು ಹೆಚ್ಚು ಎಂಬುದನ್ನು ಅರಿತುಕೊಂಡೆ.

ಇಂಟಕ್ ಕೈಗೆತ್ತಿಕೊಂಡಿದ್ದ ಐ.ಎಲ್.ಓ., ಐ.ಪಿ.ಇ.ಸಿ ಕಾರ್ಯಕ್ರಮ ನನಗೆ ನ್ನನ ಅವಶ್ಯಕತೆಗಳು ಅತೀ ಬಡವರೊಂದಿಗೆ ಕೆಲಸ ಮಾಡುವ ಅವಕಾಶ ಒದಗಿಸಿತು. ನಾವು ಆರಂಭಿಸಿದಾಗ ಬಾಲಕಾರ್ಮಿಕತೆಯ ಬಗ್ಗೆ ಸ್ವಲ್ಪ ಮಾಹಿತಿ ಇದ್ದು, ನಾನು ಕೆಲಸ ನನ್ನ ನನ್ನ ಮನೆಯಲ್ಲಿ ಆರಂಭಿಸಿಲು ನಿಶ್ಚಯಿಸಿದೆ. ನನ್ನ ಸಹೋದರ ತನ್ನ ಅಂಗಡಿಯಲ್ಲಿ ಒಬ್ಬ ಬಾಲಕಾರ್ಮಿಕನನ್ನು ನೇಮಿಸಿಕೊಂಡಿದ್ದ. ನಾನು ನನ್ನ ಸಹೋದರನ ಹತ್ತಿರ ಬಾಲಕಾರ್ಮಿಕನನ್ನು ಹತ್ತಿರದ ಶಾಲೆಗೆ ಸೇರಿಸಲು ತಿಳಿಸಿದೆ. ನನ್ನ ಅಣ್ಣ ನಾನು ಹುಚ್ಚಿ ಎಂಬುದಾಗಿ ಪರಿಗಣಿಸಿದ ಹಾಗೂ ನನ್ನ ಆಲೋಚನೆಯನ್ನು ಇಷ್ಟ ಪಡಲಿಲ್ಲ. ನೀನು ಸಣ್ಣ ಮಗುವನ್ನು ಕೆಲಸಕ್ಕೆ ಸೇರಿಸಿಕೊಂಡು ತಪ್ಪು ಮಾಡುತ್ತಿದ್ದಿ ಎಂಬುದಾಗಿ ನನ್ನ ಅಣ್ಣನಿಗೆ ತಿಳಿಸಿದೆ. ಅವನನ್ನು ಮನವೊಲಿಸಲು ಸುಮಾರು ಒಂದು ವಾರ ಬೇಕಾಯಿತು. ನಾನು ವಾರದಲ್ಲೇ ಗೆದ್ದೆ. ನನ್ನ ಸಹೋದರ ಆ ಬಾಲಕನನ್ನು ಹತ್ತಿರದ ಶಾಲೆಗೆ ಸೇರಿಸಿದ. ಇದು ನನಗೆ ಆತ್ಮವಿಶ್ವಾಸ ತಂದಿತು. ನಾನು ನನ್ನ ಅಣ್ಣನ ಮನವೊಲಿಸಲು ಸಾಧ್ಯವಾದರೆ, ನಾನು ಇತರರನ್ನು ಮನವೊಲಿಸಲು ಸಾಧ್ಯವಾಗಬಹುದು ಎಂದು ಆತ್ಮವಿಶ್ವಾಸ ಬಂತು. ಇಂಟಕ್ ರಾಜ್ಯ ಘಟಕ ಐ.ಪಿ.ಇ.ಸಿ ಕಾರ್ಯಕ್ರಮ ಅನುಷ್ಠಾನ ಮಾಡುವ ತಯಾರಿ ಆರಂಭಿಸಿತು. ರಾಷ್ಟ್ರಮಟ್ಟದ ಕಾರ್ಯಾಗಾರ, ಮತ್ತು ರಾಜ್ಯ ಮಟ್ಟದ ಕಾರ್ಯಾಗಾರವಾದ ನಂತರ, ನಮ್ಮ ಬಹಳಷ್ಟು ಕಾರ್ಯಕರ್ತರು ಬಾಲಕಾರ್ಮಿಕತೆಯ ಬಗ್ಗೆ ಸೂಕ್ಷ್ಮತೆ ಬೆಳೆಸಿಕೊಂಡರು. ನಾವು ರಾಜ್ಯದ ಬಾಲಕಾರ್ಮಿಕ ಘಟಕ ರಚಿಸಿಕೊಂಡು ನಮ್ಮ ಕೆಲಸ ಆರಂಭಿಸಿದೆವು.


ಒರಿಸ್ಸಾದಲ್ಲಿ ಬಹಳಷ್ಟು ಮಕ್ಕಳು ಅಸಂಘಟಿತ ಕ್ಷೇತ್ರಗಳಾದ ಕೃಷಿ ಮತ್ತು ನಿರ್ಮಾಣ ಉದ್ಯಮಗಳಲ್ಲಿ ಕೆಲಸ ಮಾಡುತ್ತಾರೆ. ನಾನು ಅಂತಹ ಪ್ರದೇಶಗಳಿಗೆ ಹೋಗಿ ಅವರ ತಾಯಂದಿರೊಂದಿಗೆ ಮಾತುಕತೆ ನಡೆಸಿರುತ್ತೇನೆ. ಅವರೆಲ್ಲಾ ಬಡತನದಲ್ಲಿ ನೊಂದು ಬೆಂದು ಅಸಹಾಯಕರು. ಅವರು ಬದುಕಲು ಕಷ್ಟಪಡುತ್ತಿರುವಾಗ ಶಿಕ್ಷಣದ ಬಗ್ಗೆ ಯೋಚಿಸಲು ಸಾಧ್ಯವಿರಲಿಲ್ಲ. ನಾವು ಅವರ ಪ್ರದೇಶದಲ್ಲಿ ಶಾಲೆಯನು ತೆರೆದಾಗ ಅವರೆಲ್ಲಾ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಿದರು. ನಾವು ಈಗ ಭುವನೇಶ್ವರದಲ್ಲಿ ನಾಲ್ಕು ಕೇಂದ್ರ ನಡೆಸುತ್ತಿದ್ದೇವೆ. ನಮ್ಮ ಸಂಘಟನೆ ಇಂತಹ ಚಟುವಟಿಕೆಗಳಿಂದ ಗಟ್ಟಿಯಾಗುತ್ತಿದೆ.

**ಅವರನ್ನು ಶಾಲೆಗೆ ತರುವುದು**

ಭುಜನ್ ಕುಮಾರ್ ಮತ್ತು ಅವನ ಸಹೋದರ ಸಂದೀಪ್, ತಾವು ಶಿಕ್ಷಣ ಪಡೆದುಕೊಳ್ಳಲು ಆಸ್ಪದ ಮಾಡಿಕೊಟ್ಟ ಶ್ರೀ. ಯೋಗೇಶ್ ಕುಮಾರ್ ಶರ್ಮಾರಿಗೆ ವಂದಿಸಬೇಕು. ಸ್ವಲ್ಪ ಸಮಯದ ಹಿಂದೆ ಈ ಮಕ್ಕಳು ತಮ್ಮ ಶಿಕ್ಷಣವನ್ನು ನಿಲ್ಲಿಸಬೇಕಾಯಿತು. ಅವರ ತಂದೆ ಕಾಯಿಲೆ ಬಿದ್ದಾಗ, ಅವರು ತಮ್ಮ ಹಣ್ಣಿನ ವ್ಯಾಪಾರ ನೋಡಿಕೊಳ್ಳಬೇಕಾಯಿತು. ಈ ಸಂದರ್ಭದಲ್ಲಿ ಶ್ರೀ ಯೋಗೇಶ್ ಕುಮಾರ್ ಶರ್ಮಾ ಮಧ್ಯೆ ಪ್ರವೇಶಿಸಿದರು.

ಅವರು ಈ ಮಕ್ಕಳಿಗೆ ತಮ್ಮ ಶಿಕ್ಷಣವನ್ನು ಮುಂದುವರೆಸಲು ಆರ್ಥಿಕ ಸಹಾಯ ಮಾಡಿದರು. ಇಬ್ಬರು ಸಹ ಉತ್ತಮವಾಗಿ ಕಲಿಯುತ್ತಿದ್ದು, ತಮ್ಮ ತಂದೆಗೆ ಬಿಡುವಿನ ವೇಳೆಯಲ್ಲಿ ಸಹಾಯ ಮಾಡುತ್ತಿದ್ದಾರೆ. ಅವರ ತಂದೆಯ ಪ್ರಕಾರ "ಮಾಸ್ಟರ್‌ಜೀ ಒತ್ತಾಯ ಮಾಡದೆ ಇದ್ದರೆ ನಾನು ನನ್ನ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿಲ್ಲ. ಅವರ ಜೀವನ ಹಾಳಾಗುತ್ತಿತ್ತು. ಈಗ ಅವರು ಕಲಿಯುತ್ತಿದ್ದಾರೆ ಹಾಗೂ ಕೆಲಸ ಮಾಡುತ್ತಿದ್ದಾರೆ. ನಾವು ಅವರಿಗೆ ಚಿರಋಣಿಯಾಗಿದ್ದೇವೆ" ಇನ್ನೊಬ್ಬ ಎಳೆ ಪ್ರಾಯದ ಬಾಲಕನಿಗೆ ಸಹ ಶರ್ಮಾ ಸಹಾಯ ಮಾಡಿರುತ್ತಾರೆ. ಸುಮೀತ್ ತನ್ನ ತಂದೆಯನ್ನು ಕಳೆದುಕೊಂಡಾಗ ಅವನಿಗೆ ಬರೀ ಮೂರು ವರ್ಷ ಪ್ರಾಯವಾಗಿತ್ತು. ಅವನ ತಾಯಿಗೆ ತನ್ನ ಅಲ್ಪ ವರಮಾನದಿಂದ ಆತನನ್ನು





ಸಾಕಲು ಸಾಧ್ಯವಿರಲಿಲ್ಲ. ಅವನ ಮಾವ ಅವನನ್ನು ಹಳ್ಳಿಯಿಂದ ಡೆಲ್ಲಿಗೆ ಕರೆದುಕೊಂಡು ಬಂದ. ಇವನನ್ನು ಶರ್ಮಾರು ಗುರುತಿಸಿದರು. ಸುಮೀತ್ ಶಾಲೆಗೆ ಸೇರಲು ಶರ್ಮಾರು ಸಹಾಯ ಮಾಡಿದರು. ಅವನು ಈಗ ಶಾಲೆಯಲ್ಲಿ ಕಲಿಯುತ್ತಿದ್ದಾನೆ. ಅವನ ಮಾವನಿಗೂ ಸಹ ಸಂತೋಷವಾಗಿದೆ. ಅವನ ಅಳಿಯ ಶಾಲೆಯಲ್ಲಿ ಕಲಿಯುತ್ತಿದ್ದಾನೆ. ಅದು ಅವನ ಹಳ್ಳಿಯಲ್ಲಿ ಸಾಧ್ಯವಿರಲಿಲ್ಲ. ಶರ್ಮಾರ ಪ್ರಕಾರ ತೀವ್ರವಾದ ಬಡತನದಿಂದ ಮಕ್ಕಳು ಶಾಲೆಯನ್ನು ಬಿಡುತ್ತಿದ್ದಾರೆ ಅಥವಾ ಶಿಕ್ಷಣ ಪಡೆದುಕೊಳ್ಳುತ್ತಿಲ್ಲ. ಅವರಲ್ಲಿ ಹೆಚ್ಚಿನವರಿಗೆ ಶಾಲೆಗೆ ಸೇರಲು ಆಸೆ ಇದೆ. ಅವರು ಕೆಲಸ ಮಾಡುತ್ತಿರುವ ಮಕ್ಕಳಿಗೋಸ್ಕರ ರಾತ್ರಿ ಶಾಲೆ ತೆರೆಯಲು ನಿರ್ಧರಿಸಿರುತ್ತಾರೆ. ಶರ್ಮಾರು ಇಲ್ಲಿಯವರೆಗೆ ದೆಹಲಿಯ ಹೊರವಲಯದಲ್ಲಿ ಸುಮಾರು 12 ಜನ ಬಾಲಕಾರ್ಮಿಕರನ್ನು ಪುನರ್ವಸತಿಗೊಳಿಸಿದ್ದಾರೆ. ಇದು ಸಣ್ಣ ಸಂಖ್ಯೆಯಾಗಿ ಕಾಣಿಸಬಹುದು. ಶರ್ಮಾರ ಹಾಗೆ ಹಲವಾರು ಜನರು ಯಾವುದೇ ಪ್ರಚಾರವಿಲ್ಲದೆ, ಗೊಂದಲವಿಲ್ಲದೆ, ಅಬ್ಬರವಿಲ್ಲದೆ ಭಾರತದ ಹಳ್ಳಿಗಳಲ್ಲಿ ಮತ್ತು ನಗರಗಳಲ್ಲಿ ಕೆಲಸ ಮಾಡುತ್ತಿರುವ ಮಕ್ಕಳ ಜೀವನವನು ಉತ್ತಮ ಪಡಿಸಲು ಕೆಲಸ ಮಾಡಿತ್ತಿದ್ದಾರೆ.

### 3.15.6.2 ಟ್ರೇಡ್ ಯೂನಿಯನ್‌ಗಳು ಮತ್ತು ಸರಕಾರೇತರ ಸಂಸ್ಥೆಗಳು – ಬೆಳೆಯುತ್ತಿರುವ ಪಾಲುಗಾರಿಕೆ

ಬಾಲಕಾರ್ಮಿಕತೆಯ ವಿರುದ್ಧದ ಹೋರಾಟದಲ್ಲಿ ಕಾರ್ಮಿಕ ಸಂಘಟನೆಗಳು ಮತ್ತು ಸರಕಾರೇತರ ಸಂಸ್ಥೆಗಳ ಮಧ್ಯದಲ್ಲಿ ಹಲವಾರು ಪಾಲುದಾರಿಕೆಗಳು ಅಸ್ಥಿತ್ವಕ್ಕೆ ಬಂದಿವೆ. ಈ ಎರಡೂ ಸಂಸ್ಥೆಗಳಿಗೂ ಬಾಲಕಾರ್ಮಿಕತೆಯ ವಿರುದ್ಧದ ಹೋರಾಟ ಸಾಮಾನ್ಯವಾದ ವಿಷಯ. ಆದುದರಿಂದ ಭಾರತದ ಅತ್ಯಂತ ಉತ್ತಮ ಸರಕಾರೇತರ ಸಂಸ್ಥೆಯಾದ "ಸಿನಿ–ಆಶಾ" ಸಂಸ್ಥೆಯು ಪಶ್ಚಿಮ ಬಂಗಾಳದಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಜೊತೆ ಸೇರಿ ಕಾರ್ಯ ನಿರ್ವಸುತ್ತಿದೆ. ಹಿಂದ್ ಮಜ್ದೂರ್ ಸಭಾ, ಡಾರ್ಜಲಿಂಗ್ ಪ್ಲಾಂಟರ್ಸ್ ಸಂಘದೊಂದಿಗೆ ಸೇರಿ ಕೆಲಸ ಮಾಡುತ್ತಿದೆ. ರಾಜಸ್ಥಾನದಲ್ಲಿ ಸಹ ಒಂದು ಸರಕಾರೇತರ ಸಂಸ್ಥೆ, ಟ್ರೇಡ್ ಯೂನಿಯನ್ ಸಹಾಯದಿಂದ ಬಾಲಕಾರ್ಮಿಕರಿಗಾಗಿ ಶಾಲೆ ನಡೆಸುತ್ತಿದೆ.

**"ತಗಡಿನ ಮಾಡಿನ ಅಡಿಯಲ್ಲಿ ಆಶಾ ಕಿರಣ"**

ಜೈಪುರದ ಸಾಮಾಜಿಕ ಕಾರ್ಯಕರ್ತ ಶರೀಫ್ ಅಹಮ್ಮದ್ ಖಾನ್ ಪ್ರಕಾರ ಜೈಪುರದ ಹರಳು ಹೊಳಪು ಮಾಡುವ ಉದ್ಯಮದಲ್ಲಿ ಹಾಗೂ ಮಾರ್ಬಲ್ ಕ್ವಾರಿಗಳಲ್ಲಿ ಸುಮಾರು 23000 ಮಕ್ಕಳು ಕೆಲಸ ಮಾಡುತ್ತಿದ್ದಾರೆ (1986 ರ ಗಣತಿ). ಈ ಮಕ್ಕಳಿಗಾಗಿ ಶಾಲೆ ತೆರೆಯಲು ಆರಂಭಿಸಿದಾಗ, ಹೆಚ್ಚ ಪ್ರತಿರೋಧ ಅವರ ಪೋಷಕರಿಂದ ಬಂತು. ಅವರ ಪ್ರಶ್ನೆ "ನಮ್ಮ ಜೀವನವನ್ನು ಏಕೆ ಹಾಳು ಮಾಡುತ್ತೀರಿ" ಅವರನ್ನು ಕಷ್ಟ ಪಟ್ಟು ಮನವೊಲಿಸಲಾಯಿತು. ಮಕ್ಕಳು ಶಿಕ್ಷಣ ಪಡೆದುಕೊಂಡರೆ ಅವರಿಗೆ ಲಾಭವಾಗುವುದು ಎಂದು ತಿಳಿಸಲಾಯಿತು. ಶರೀಫ್ ಶಾಲೆ – ತಗಡಿನ ಮಾಡಿನ ಶಾಲೆ – ಆದರೆ ಅದು ಬಹಳ ಸಫಲವಾದ ಶಾಲೆ. ಇಲ್ಲಿಯ 10 ಮಕ್ಕಳು ಹೈಯರ್ ಸೆಕೆಂಡರಿ ಪಾಸ್ ಮಾಡಿರುತ್ತಾರೆ. 24 ಮಕ್ಕಳು ಔಪಚಾರಿಕ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಶರೀಫರ ಪ್ರಕಾರ ಅವರು ಬಹಳ ಸಾಧನೆಯನ್ನು ಮಾಡಿರುವುದಿಲ್ಲ, ಆದರೆ ಮಾಡಿದ್ದು ಅವರಿಗೆ ಸಂತೋಷ ತಂದಿದೆ. ಸಂಪನ್ಮೂಲದ ಕೊರತೆಯಿಂದ ಒಮ್ಮೆ ಶಾಲೆಯನ್ನು ಮುಚ್ಚುವ ಹಂತಕ್ಕೆ ಶರೀಫ್ ಬಂದಿದ್ದರು. ಎ.ಐ.ಟಿ.ಯು.ಸಿ ನ ರಾಜ್ಯ ಘಟಕದ ಕಾರ್ಯದರ್ಶಿಗಳಾದ ಶ್ರೀ ಚಂಗಾನಿಯವರು ಅವರಿಗೆ ಮುಂದುವರಿಸಲು ಸಹಾಯ ಮಾಡಿದರು. ಇದು ಶರೀಫ್ ರಲ್ಲಿ ಶಾಲೆಯಲ್ಲಿ ಉತ್ತಮವಾಗಿ ಕಲಿಯುತ್ತಿರುವ ಸರಾಫ್‌ರಾಜ್ ಮತ್ತು ಶಮೀನ ಅಂತವರಿಗೆ ಒಳ್ಳೆಯ ಸುದ್ದಿ. ಸರಾಫ್‌ರಾಜ್ ತಾನು ಪೊಲೀಸ್ ಅಧಿಕಾರಿ ಆಗಬೇಕು ಎಂಬುದಾಗಿ ಇದ್ದಾನೆ. ಶಮೀನ್ ನಾನು ಶಿಕ್ಷಕಿ ಆಗಬೇಕು ಎಂಬುದಾಗಿ ಇದ್ದಾಳೆ. ಇಂತಹ ಕನಸುಗಳು ಶರೀಫರ ತಗಡಿನ ಮಾಡಿನ ಅಡಿಯಲ್ಲಿ ನನಸಾಗಲು ಸಾಧ್ಯವಿದೆ.




ಸಿನಿ–ಆಶಾ ಎಲ್ಲಾ ಸರಕಾರೇತರ ಸಂಸ್ಥೆಗಳ ಹಾಗೆ ಹೊಸ ರೀತಿಯಲ್ಲಿ, ಪರಿಣಾಮಕಾರಿಯಾಗಿ ಹಾಗೂ ಸದ್ದಿಲ್ಲದೆ ಕೆಲಸ ಮಾಡಲು ಆಸಕ್ತಿ ಹೊಂದಿರುವ ಸಂಸ್ಥೆ. ಸಿನಿ–ಆಶಾ ಸಂಸ್ಥೆಯು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಜೊತೆ ಕಲ್ಕತ್ತಾದ ರಾಜಾ ಬಜಾರ್‌ನಲ್ಲಿ ಮಕ್ಕಳನ್ನು ಕೆಲಸದ ವಾತಾವರಣದಿಂದ ಬಿಡಿಸಿ, ಅವರನ್ನು ಶಾಲೆಗೆ ಸೇರಿಸಲು ಶ್ರಮಿಸುತ್ತಿದೆ. ಇದು ಬಹಳ ಕಷ್ಟದ ಕೆಲಸ – ಕಾರಣ ಹೆಚ್ಚಿನ ಮಕ್ಕಳ ಮಾಲೀಕರು ಅವರ ಪೋಷಕರೇ ಆಗಿದ್ದಾರೆ. ಅವರು ತಮ್ಮ ಮಕ್ಕಳಿಂದ ಉಪ್ಪಿನಕಾಯಿ, ಹಪ್ಪಳ, ಅಲಂಕಾರಿಕ ವಸ್ತುಗಳನ್ನು ಮಾಡಿಸುತ್ತಿದ್ದರು. ಪೋಷಕರು ಕೆಲಸವನ್ನು ಮನೆಗೆ ತರುತ್ತಿದ್ದರು. ಅವರಿಗೆ ಸಂಭಾವನೆ ಮಾಡಿದ ಕೆಲಸದ ವಸ್ತುಗಳ ಆಧಾರದಲ್ಲಿ ಸಿಗುತ್ತಿತ್ತು. ಇಡೀ ಕುಟುಂಬ ಕೆಲಸದಲ್ಲಿ ಭಾಗಿಯಾಗುತ್ತಿತ್ತು. ಮಕ್ಕಳು ಅವರ ವೃತ್ತಿಗೆ ಸಹಾಯಕರಾಗಿದ್ದು, ಅವರನ್ನು ಶಾಲೆಯಿಂದ ಹೊರಗೆ ಇಡಲಾಗುತ್ತಿತ್ತು. ಇಲ್ಲಿ ಸಿನಿ–ಆಶಾ ಮತ್ತು ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎ.ಐ.ಟಿ.ಯು.ಸಿ) ಪಾಲುದಾರಿಕೆಯಲ್ಲಿ ಇಬ್ಬರು ಸೇರಿ ಇಲ್ಲಿ ಕೆಲಸ ಮಾಡುತ್ತಿದ್ದರು. ಎ.ಐ.ಟಿ.ಯು.ಸಿ ಯ ಚಂಚಲ್ ಘೋಷ್ ಹಾಗೂ ಅವರ ಸಹವರ್ತಿಗಳ ನೇತೃತ್ವದಲ್ಲಿ ಆಂದೋಲನ ಮೂಲಕ ಮನೆಮನೆಗೆ ಭೇಟಿ ಕೊಟ್ಟು ಪೋಷಕರನ್ನು ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳದಂತೆ ಮನವೊಲಿಸುತ್ತಿದ್ದರು. ಇದು ಸರಿ ಎಂದ ಕೂಡಲೇ ಸಿನಿ–ಆಶಾ ಸಂಸ್ಥೆಯವರು ತಮ್ಮ ಕೆಲಸವನ್ನು ಆರಂಭಿಸುತ್ತಿದ್ದರು. ಮಕ್ಕಳ ಪುನರ್ವಸತಿಗೆ ಅವರು ಪ್ರಯತ್ನಿಸುತ್ತಿದ್ದರು. ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆ ಮಾಡುತ್ತಿದ್ದರು. ಮೊದಲು ಅವರನ್ನು "ತಯಾರಿ ಕೇಂದ್ರಕ್ಕೆ" ಸೇರಿಸುತ್ತಿದ್ದರು. ನಂತರ ಅವರನ್ನು ಸಾಮಾನ್ಯ ಶಾಲೆಗೆ ಸೇರಿಸುತ್ತಿದ್ದರು. ಸಿನಿ–ಆಶಾ ಮತ್ತು ಎ.ಐ.ಟಿ.ಯು.ಸಿ ಯ ಕಾರ್ಯಕ್ರಮ ಪರಿಣಾಮಕಾರಿ ಆಗಿದ್ದರೂ ಸಹ ಹೆಚ್ಚು ಪ್ರಚಾರಕ್ಕೆ ಆಸ್ಪದ ಮಾಡಿಕೊಡಲಿಲ್ಲ. ಇಲ್ಲಿಯವರೆಗೆ 300 ಮಕ್ಕಳನ್ನು ಕೆಲಸದಿಂದ ಬಿಡಿಸಿ, ಸಾಮಾನ್ಯ ಶಾಲೆಗೆ ಸೇರಿಸಲ್ಪಟ್ಟಿದ್ದಾರೆ. ಸಂಬಂಧಪಟ್ಟವರಿಗೆ ಸೂಕ್ಷ್ಮತೆ ಕೊಡಲು ಜಂಟಿ ಕಾರ್ಯಾಗಾರ ನಡೆಸಿರುತ್ತಾರೆ. ಎ.ಐ.ಟಿ.ಯು.ಸಿ ಯು ಪೋಷಕರ ಮೇಲಿನ ತನ್ನ ಒತ್ತಡವನ್ನು ಮುಂದುವರೆಸಿರುತ್ತಾರೆ. ಈಗ ಸಿನಿ–ಆಶಾ ಸಂಸ್ಥೆ ಇತರ ಟ್ರೇಡ್ ಯೂನಿಯನ್‌ಗಳ ಜೊತೆ ಕೆಲಸ ಮಾಡಲು ಮುಂದೆ ಬಂದಿವೆ.

### 3.15.6.3 ಮಾಲೀಕರ ಸಂಸ್ಥೆಗಳು ಮತ್ತು ಟ್ರೇಡ್ ಯೂನಿಯನ್

ಹೆಚ್ಚಾಗಿ ಮಾಲೀಕರನ್ನು ಬಾಲಕಾರ್ಮಿಕತೆಯಲ್ಲಿ ಖಳನಾಯಕರನ್ನಾಗಿ ಮಾಡಲಾಗಿದೆ. ಇದು ನಿಜಕ್ಕೆ ದೂರವಾಗಿದೆ. ಎಫ್.ಐ.ಸಿ.ಸಿ.ಐ ಯ ಡಾ (ಮಿಸ್) ಹಂಸಾರವರ ಪ್ರಕಾರ ನಮ್ಮ ಸದಸ್ಯರು ಸಮಸ್ಯೆಯ ಅರಿವನ್ನು ಹೊಂದಿದ್ದು, ದೇಶದ ಹೆಚ್ಚಿನ ಕಡೆಯಲ್ಲಿ ಬಾಲಕಾರ್ಮಿಕತೆಯ ವಿರುದ್ಧದ ಹೋರಾಟದಲ್ಲಿ ಭಾಗವಹಿಸುತ್ತಿದ್ದಾರೆ. ದಕ್ಷಿಣ ಭಾರತದ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರಿ (ಎಸ್.ಐ.ಸಿ.ಸಿ.ಐ) ಎಫ್.ಐ.ಸಿ.ಸಿ.ಐ ಯ ಅಂಗ ಸಂಸ್ಥೆ ಆಗಿದ್ದು ಅದರ ಮುಖ್ಯ ಕಛೇರಿ ಚೆನ್ನೈನಲ್ಲಿದೆ. ಈ ಸಂಸ್ಥೆ ಸ್ಟೀಲ್ ಉದ್ಯಮದಲ್ಲಿದ್ದ ಬಾಲಕಾರ್ಮಿಕತೆಯ ನಿವಾರಣೆಗಾಗಿ ಉತ್ತಮ ಕೆಲಸ ಮಾಡಿರುತ್ತದೆ. ಇದರ ಚಟುವಟಿಕೆಗಳು ಟ್ರೇಡ್ ಯೂನಿಯನ್‌ಗಳಿಗೂ ಸಹಾಯ ಮಾಡುತ್ತಿವೆ.

ತಮಿಳುನಾಡು ಎ.ಐ.ಟಿ.ಯು.ಸಿ ನ ಘಟಕದ ಕಾರ್ಯದರ್ಶಿ ಶ್ರೀ. ಟಿ.ಆರ್.ಎಸ್ ಮಣಿಯ ಪ್ರಕಾರ, ಎಸ್.ಐ.ಸಿ.ಸಿ.ಐ ಉತ್ತಮ ಕೆಲಸ ಮಾಡುತ್ತಿದೆ. ಎ.ಐ.ಟಿ.ಯು.ಸಿ ಯು ಎಸ್.ಐ.ಸಿ.ಸಿ.ಐ ಕೆಲವು ಬಾಲಕಾರ್ಮಿಕತೆಯ ವಿರುದ್ಧದ ಚಟುವಟಿಕೆಗಳಲ್ಲಿ ಭಾಗವಹಿಸಿದ್ದು, ಅವರಿಗೆ ಎಸ್.ಐ.ಸಿ.ಸಿ.ಐ ಈ ಕೆಲಸದಲ್ಲಿ ತುಂಬಾ ಅನುಭವ ಇರುವುದು ಕಂಡು ಬಂದಿಗೆ. ಸ್ಟೈನ್‌ಲೆಸ್ ಸ್ಟೀಲ್ ಉದ್ಯಮ ಕಾರ್ಮಿಕರನ್ನು ಈ ವಿಷಯದಲ್ಲಿ ತರಬೇತಿ ಗೊಳಿಸಿದ್ದು, ಅವರು ಸಹ ಈ ವಿಷಯದಲ್ಲಿ ಸಂಘಟನೆಯಾಗುತ್ತಿದ್ದಾರೆ. ಇದು ಒಂದು ಧನಾತ್ಮಕವಾದ ಬೆಳವಣಿಗೆ. ವಾಲ್‌ಟ್ಯಾಕ್ಸ್ ರಸ್ತೆಯಲ್ಲಿ ಹೆಚ್ಚು ಬಾಲಕಾರ್ಮಿಕರು ಇರಲು ಕಾರಣ ಏನೆಂದರೆ ಅಲ್ಲಿ ಕಾರ್ಮಿಕರು ಸರಿಯಾಗಿ ಸಂಘಟನೆ ಆಗದೆ ಇರುವುದು.






**ಸ್ಟೈನ್‌ಲೆಸ್ ಸ್ಟೀಲ್**

ಎಸ್.ಐ.ಸಿ.ಸಿ.ಐ ನ ಕಾರ್ಯದರ್ಶಿಯಾದ ಪ್ರಸಾದ್ ದೇವಿದಾಸರ ಪ್ರಕರ ಅವರು ಬಾಲಕಾರ್ಮಿಕರ ಬಗ್ಗೆ ಆಸಕ್ತಿ ತೆಗೆದುಕೊಳ್ಳಲು ಕಾರಣ ಐ.ಪಿ.ಇ.ಸಿ ಯಾಗಿರುತ್ತದೆ. ನಮ್ಮ ಸದಸ್ಯರಿಗೆ ಈ ಬಗ್ಗೆ ಸೂಕ್ಷ್ಮತೆ ಕೊಡುವ ತನಕ ನಮಗೆ ಈ ವಿಷಯದ ಬಗ್ಗೆ ಏನೂ ಗೊತ್ತಿರಲಿಲ್ಲ. ಈಗ ಆ ಅನಾಸಕ್ತಿ ಹೋಗಿದೆ. ದೇವಿದಾಸರ ಪ್ರಕಾರ ಇದು ಸುಲಭದ ಕೆಲಸವಲ್ಲ. ಜನರನ್ನು ಮನವೊಲಿಸುವುದು ಕಷ್ಟದ ಕೆಲಸ. ಅವರಿಗೆ ಬಾಲಕಾರ್ಮಿಕತೆ ಕೆಟ್ಟದ್ದು ಎಂದು ಮನವರಿಕೆ ಮಾಡುವುದು ಕಷ್ಟ. ಎಸ್.ಐ.ಸಿ.ಸಿ.ಐ ಗೆ ಐ.ಪಿ.ಇ.ಸಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಆಸ್ಪದ ಸಿಕ್ಕಿದಾಗ ಅದು, ಸ್ಟೈನ್‌ಲೆಸ್ ಸ್ಟೀಲ್ ಉದ್ಯಮವನ್ನು ಆಯ್ಕೆ ಮಾಡಿಕೊಂಡಿತು. ಸ್ಟೈನ್‌ಲೆಸ್ ಸ್ಟೀಲ್ ಅಡುಗೆ ಪಾತ್ರಗಳಿಗೆ ದಕ್ಷಿಣ ಭಾರತದಲ್ಲಿ ಅತ್ಯಂತ ಹೆಚ್ಚು ಬೇಡಿಕೆ ಇದೆ. ಇದರಲ್ಲಿ ಹೆಚ್ಚಿನ ಭಾಗ ಚೆನ್ನೈನ ವಾಲ್‌ಟ್ಯಾಕ್ಸ್ ರಸ್ತೆಯ ಗುಡಿಸಲುಗಳಲ್ಲಿ ತಯಾರಾಗುತ್ತವೆ. ಈ ಉದ್ಯಮಗಳಲ್ಲಿ ಹೆಚ್ಚಿನ ಸಂಖ್ಯೆಯ ಮಕ್ಕಳು ಕೆಲಸ ಮಾಡುತ್ತಿದ್ದಾರೆ. ಸ್ಟೈನ್‌ಲೆಸ್ ಸ್ಟೀಲ್ ಉದ್ಯಮದ ಮಾಲೀಕರಾದ ಶ್ರೀ ಶಂಕರ್, ತಮ್ಮ ಉದ್ಯಮದಲ್ಲಿ ಯಾವತ್ತೂ ಮಕ್ಕಳನ್ನು ತೊಡಗಿಸಿಕೊಂಡಿರಲಿಲ್ಲ. ಎಸ್.ಐ.ಸಿ.ಸಿ.ಐ ಯು ಶ್ರೀ ಶಂಕರ್ ನೇತೃತ್ವದಲ್ಲಿ ಬಾಲಕಾರ್ಮಿಕತೆಯ ವಿರುದ್ಧ ಆಂದೋಲನ ಹಮ್ಮಿಕೊಳ್ಳಲು ನಿರ್ಧರಿಸಿತು. ಈ ಬಗ್ಗೆ ಗುಟ್ಟಾಗಿ ಒಂದು ಗಣತಿಯನ್ನು ನಡೆಸಲಾಯಿತು. ಇದರ ನಂತರ ಪ್ರಸಿದ್ಧ **"ಅಪೊಲೊ"** ಆಸ್ಪತ್ರೆಯ ನೇತೃತ್ವದಲ್ಲಿ ಆರೋಗ್ಯ ಕ್ಯಾಂಪ್‌ಗಳನ್ನು ನಡೆಸಲಾಯಿತು. ಆರೋಗ್ಯ ಕ್ಯಾಂಪ್‌ಗಳು ಹೆಚ್ಚಿನ ಸಂಖ್ಯೆಯ ಮಕ್ಕಳು ಮತ್ತು ಮಹಿಳೆಯರನ್ನು ಆಕರ್ಷಿಸಿತು. ಈ ಬಗ್ಗೆ ಒಂದು ಕಾರ್ಯಾಗಾರವನ್ನು ವ್ಯವಸ್ಥೆ ಮಾಡಲಾಯಿತು. ಇದರಲ್ಲಿ ಟ್ರೇಡ್ ಯೂನಿಯನ್‌ಗಳು ಸಹ ಭಾಗವಹಿಸಿದ್ದವು. ಎಸ್.ಐ.ಸಿ.ಸಿ.ಐ ವ್ಯವಸ್ಥೆ ಮಾಡಿದ್ದ ವಸ್ತು ಪ್ರದರ್ಶನದಲ್ಲಿ ಕಾರ್ಮಿಕ ಸಂಘಟನೆಗಳು ಮತ್ತು ಎನ್.ಜಿ.ಓಗಳು ಭಾಗವಹಿಸಿದ್ದವು. ಸ್ಟೈನ್‌ಲೆಸ್ ಸ್ಟೀಲ್ ಉದ್ಯಮದಲ್ಲಿರುವ ಬಾಲಕಾರ್ಮಿಕತೆಯನ್ನು ಹೋಗಲಾಡಿಸಲು, ಎಸ್.ಐ.ಸಿ.ಸಿ.ಐ ಯು ಇನ್ನು ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಆಸಕ್ತಿ ಹೊಂದಿದೆ ಎಂಬುದಾಗಿ ಡೇವಿಡ್ಸ್ ಅಭಿಪ್ರಾಯ ಪಡುತ್ತಾರೆ. ಇವರ ಯೋಜನೆಗಳಲ್ಲಿ ಮ್ಕಕಳಿಗೆ ವಿದ್ಯಾರ್ಥಿವೇತನಗಳನ್ನು ವ್ಯವಸ್ಥೆ ಮಾಡುವುದು, ಸ್ಟೀಲ್ ಉದ್ಯಮದಲ್ಲಿ ಕೆಲಸದ ಪ್ರಕ್ರಿಯೆಯನ್ನು ಉತ್ತಮ ಪಡಿಸುವುದು ಸಹ ಸೇರಿದೆ.






## 3.16 ಕೃತಜ್ಞತೆಗಳು


- ಅನುಷ್ಠಾನಾಧಿಕಾರಿಗಳ ಕೈಪಿಡಿ – ಡಾ॥ ಎಂ.ಸಿ.ಆರ್ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ. ಹೈದರಾಬಾದ್, ಆಂಧ್ರಪ್ರದೇಶ
- ಕಾರ್ಮಿಕ ಆಡಳಿತ ಮತ್ತು ಅನೌಪಚಾರಿಕ ಆರ್ಥಿಕ ವ್ಯವಸ್ಥೆಯಲ್ಲಿ ಬಾಲಕಾರ್ಮಿಕತೆಯ ಪರಿವೀಕ್ಷಣೆ. ಶ್ರೀ ಸಂಜೀವ ಕುಮಾರ್
- ಕಾರ್ಮಿಕ ಸಂಘಗಳ ನಾಯಕರ ಕೈಪಿಡಿ
- ಕೃಷಿರಂಗದ ಅಪಾಯಕಾರಿ ಬಾಲಕಾರ್ಮಿಕತೆ ನಿರ್ಮೂಲನೆಯ ತರಬೇತಿ ಕೈಪಿಡಿ – ಐ.ಎಲ್.ಓ. ಪ್ರಕಟಣೆ
- ಮಗು ಮತ್ತು ಕಾನೂನು – ಗೀತಾ ರಾಮಸ್ವಾಮಿ, ಆಂಧ್ರಪ್ರದೇಶ ಜುಡಿಷಿಯಲ್ ಅಕಾಡೆಮಿ




# ಭಾಗ – 4





## 4.1 ಅನುಚ್ಛೇಧ – 1

**ಸ್ನೇಹ ಸೂಚಕ ಪಟ್ಟಿ**





**ಮುಖವಾಡ ಉಪಯೋಗಿಸಲು ಸೂಚನೆಗಳು**

- ಮುಖವಾಡಗಳು ಸಾಮಾನ್ಯ ಮನುಷ್ಯನ ಮುಖದ ಅಳತೆಗಳಲ್ಲಿವೆ.
- ಮುಖವಾಡಗಳನ್ನು ಉಪಯೋಗಿಸುವ ಮೊದಲು ಕಣ್ಣಿನ ಹಾಗೂ ಮೂಗಿನ ಭಾಗವನ್ನು ಕತ್ತರಿಸಿ ತೆಗೆಯಿರಿ.
- ಮುಖವಾಡಗಳಿಗೆ ದಾರಗಳನ್ನು ಹಾಕಿ ಅದನ್ನು ಕಟ್ಟಿಕೊಳ್ಳಲು ಅನುಕೂಲವಾಗುವಂತೆ ರಂಧ್ರಗಳನ್ನು ಮಾಡಲಾಗಿದೆ.
- ಮುಖವಾಡಗಳು ಎಲ್ಲಾ ವ್ಯಕ್ತಿಗಳ ಮುಖಕ್ಕೂ ಹೊಂದಿಕೊಳ್ಳುವಂತಿದೆ.




## ಬಾಲಕಾರ್ಮಿಕ ಮಗುವಿನ ಮುಖವಾಡ



## 4.2 ಅನುಚ್ಛೇಧ – 2

## ಸಂತೋಷದಿಂದಿರುವ ಮಗುವಿನ ಮುಖವಾಡ





# 4.3 ಅನುಚ್ಛೇಧ – 3

ಮಾದರಿ ಪವರ್ ಪಾಯಿಂಟ್ ಮಂಡನೆಯ ನಮೂನೆ
(ಗ್ರಾಮೀಣ ಪ್ರದೇಶದಲ್ಲಿ ಈ ಸಾಹಿತ್ಯವನ್ನು ಇಡೀ ಹಾಳೆಯ ಮೇಲೆ ಮುದ್ರಿಸಿ ಫ್ಲಿಪ್ ಚಾರ್ಟ ಆಗಿ ಉಪಯೋಗಿಸಬಹುದು)

ಬಾಲಕಾರ್ಮಿಕರು

- **ನಾವು ಯಾರು?**
- **ನಾವ್ಯಾಕೆ ಕೆಲಸ ಮಾಡುತ್ತಿದ್ದೇವೆ?**
- **ನಮ್ಮ ಭವಿಷ್ಯವೇನು?**

ನಾವು ಯಾರು?

ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಪ್ರಕಾರ:

- ಯಾವುದೇ 18 ವರ್ಷದ ಕೆಳಗಿನ ವ್ಯಕ್ತಿ ನಿರಂತರವಾಗಿ ಪ್ರಾಯಸ್ಥರು ಮಾಡುವ ಕೆಲಸ ಕಾರ್ಯಗಳನ್ನು ಅಪಾಯಕಾರಿ ಪರಿಸರದಲ್ಲಿ ಹಾಗೂ ಕಡಿಮೆ ಸಂಬಳಕ್ಕಾಗಿ ಮಾಡುತ್ತಿದ್ದು ತಮ್ಮ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಯನ್ನು ಪಡೆಯದೇ ಇದ್ದರೆ ಅವರನ್ನು ಬಾಲಕಾರ್ಮಿಕರೆಂದು ಕರೆಯಲಾಗುತ್ತದೆ.
- ಶಿಕ್ಷಣ ಮತ್ತು ತರಬೇತಿಯಿಂದ ವಂಚಿತರಾಗಿ ತಮ್ಮ ಉಜ್ವಲವಾದ ಭವಿಷ್ಯವನ್ನು ಕಳದುಕೊಳ್ಳುವವರು.
- ಭೌತಿಕವಾಗಿ ಹಾಗೂ ಮಾನಸಿಕವಾಗಿ ಮನೆಯಿಂದ ದೂರ ಇಡಲ್ಪಟ್ಟ ಮಕ್ಕಳು

ನಾವು ಯಾರು?

- ಕರ್ನಾಟಕ ಸರ್ಕಾರದ ಬಾಲಕಾರ್ಮಿಕತೆಯ ನಿರ್ಮೂಲನೆಯ ಕ್ರಿಯಾ ಯೋಜನೆ 2007 ರ ಪ್ರಕಾರ – ಶಾಲೆಯಿಂದ ಹೊರಗಿರುವ ಯಾವುದೇ ಮಗು ಬಾಲಕಾರ್ಮಿಕರಾಗಿರುವ ಸಾಂಭವ್ಯ ಇದೆ.
- ಬಾಲಕಾರ್ಮಿಕತೆ (ನಿರ್ಮೂಲನೆ ಮತ್ತು ನಿಯಂತ್ರಣ) ಕಾನೂನು 1986– 14 ವರ್ಷ ಪ್ರಾಯ ಮೀರದ ಹಾಗೂ ಕಾನೂನಿನಲ್ಲಿ ಗುರುತಿಸಿದ ಅಪಾಯಕಾರಿ ಕ್ಷೇತ್ರ ಹಾಗೂ ಪ್ರಕ್ರಿಯೆಗಳಲ್ಲಿ ಕೆಲಸ ಮಾಡುತ್ತಿರುವ ಯಾವುದೇ ವ್ಯಕ್ತಿ.

ಮಕ್ಕಳು ಕೆಲಸ ಮಾಡುವುದನ್ನು...

**57 ಪ್ರಕ್ರಿಯೆಗಳಲ್ಲಿ**
**17 ವೃತ್ತಿಗಳಲ್ಲಿ..........................ನಿಷೇಧಿಸಲಾಗಿದೆ.**
ಆದರೂ ಮಕ್ಕಳು ಈ ಕೆಳಗಿನ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಪ್ರಾಥಮಿಕ ವಲಯ: ಕೃಷಿ, ಜಾನುವಾರು ಸಾಕಣೆ, ರೇಷ್ಮೆ ಇತ್ಯಾದಿ.
ಮಾಧ್ಯಮಿಕ ವಲಯ: ಇಟ್ಟಿಗೆ, ಬೀಡಿ, ಅಗರಬತ್ತಿ, ಕಸೂತಿ ವಸ್ತುಗಳು, ಕೈಮಗ್ಗದ ಬಟ್ಟೆ, ಮನೆವಾರ್ತೆ ವಸ್ತುಗಳ ತಯಾರಿಕೆಯಲ್ಲಿ ಹಾಗೂ ಸಣ್ಣ ಕಾರ್ಖಾನೆಗಳಲ್ಲಿ.
ತೃತೀಯ ವಲಯ: ಮನೆಗಳಲ್ಲಿ ಮನೆಕೆಲಸದ ಆಳುಗಳು, ರಸ್ತೆ ಬದಿ ವ್ಯಾಪಾರ, ಅಂಗಡಿ ವ್ಯಾಪಾರ, ತ್ಯಾಜ್ಯ ಮರು ಬಳಕೆ, ವೇಶ್ಯಾವೃತ್ತಿ, ಕಟ್ಟಡ ನಿರ್ಮಾಣ ಇತ್ಯಾದಿ.


ಕೆಲವು ವ್ಯಕ್ತಿಗಳು ಕೆಲಸಗಳನ್ನು ಅಪಾಯಕಾರಿ ಮತ್ತು ಅಪಾಯಕಾರಿ ಅಲ್ಲದ ಕೆಲಸಗಳೆಂದು ವಿಭಜಿಸುತ್ತಾರೆ. ಇದು ಸರಿಯೆ?


**ಮಕ್ಕಳು ಮತ್ತು ಅವರ ಸ್ನೇಹಿತರ ಪ್ರಕಾರ**

ಯಾವುದೇ ಕೆಲಸವು ಮಕ್ಕಳಿಗೆ ಅಪಾಯಕಾರಿ ಕಾರಣ ಅದು ಅವರ ಶಿಕ್ಷಣ ಮತ್ತು ಸ್ವಾಭಾವಿಕ ಬೆಳವಣಿಗೆಗೆ ಅಡ್ಡಿ ಉಂಟುಮಾಡುತ್ತದೆ.

**ಹಕ್ಕುಗಳು ಮತ್ತು ವಾಸ್ತವ**

- ಅಂತರಾಷ್ಟ್ರೀಯ ಸಂಸ್ಥೆಯ ಮಕ್ಕಳ ಹಕ್ಕುಗಳ ಸಮಾವೇಶದ ಪ್ರಕಾರ ಮಕ್ಕಳಿಗೆ ಹಕ್ಕುಗಳಿವೆ.
- ಆದರೆ ಬಾಲಕಾರ್ಮಿಕರುಗಳು ವಾಸ್ತವವಾಗಿ ತಮ್ಮ ಹಕ್ಕುಗಳನ್ನು ಅನುಭವಿಸಲು ಆಸ್ಪದವಿಲ್ಲ.





### ಮಕ್ಕಳ ಹಕ್ಕುಗಳು ಮತ್ತು ವಾಸ್ತವ

| ಹಕ್ಕುಗಳು | ವಾಸ್ತವ |
|---|---|
| • ಎಲ್ಲಾ ಮಕ್ಕಳಿಗು ಶಿಕ್ಷಣ ಪಡೆದು ಕೊಳ್ಳುವ ಹಕ್ಕು ಇದೆ | • ಮಾಲೀಕರಾಗಲಿ ಅಥವಾ ಪೋಷಕರಾಗಲಿ ಮಕ್ಕಳ ಶಿಕ್ಷಣದ ಅವಶ್ಯಕತೆಯನ್ನು ಅರ್ಥ ಮಾಡಿಕೊಂಡಿರುವುದಿಲ್ಲ. |
| • ಎಲ್ಲಾ ಮಕ್ಕಳಿಗೆ ಜೀವಿಸುವ ಹಕ್ಕು ಇದೆ | • ಬಾಲಕಾರ್ಮಿಕರು ಯಾವಾಗಲೂ ಮಾಲೀಕರಿಂದ ಕೆಟ್ಟ ಶಬ್ದಗಳಿಂದ ಬೈಸಿಕೊಳ್ಳುತ್ತಾರೆ. |

### ಮಕ್ಕಳ ಹಕ್ಕುಗಳು ಮತ್ತು ವಾಸ್ತವ

| ಹಕ್ಕುಗಳು | ವಾಸ್ತವ |
|---|---|
| • ಎಲ್ಲಾ ಮಕ್ಕಳಿಗೆ ತಮ್ಮ ವಿಚಾರಗಳನ್ನು ಹೇಳಿಕೊಳ್ಳಲು ಸ್ವಾತಂತ್ರ್ಯ ಇದೆ | • ಬಾಲಕಾರ್ಮಿಕರು ತಮ್ಮ ಕಷ್ಟದ ಕೆಲಸಗಳ ಬಗ್ಗೆ ಹೇಳಿಕೊಂಡರೆ ಅವರ ಮಾಲೀಕರು ಅವರನ್ನು ಬೈಗಳುಗಳಿಗೆ ಗುರಿಪಡಿಸುತ್ತಾರೆ. |
| • ಎಲ್ಲಾ ಮಕ್ಕಳಿಗೆ ವಿರಾಮ ಮತ್ತು ಆಟದ ಹಕ್ಕು ಇದೆ | • ಬಾಲಕಾರ್ಮಿಕರು ಬರೀ ಕೆಲಸ ಮಾಡುತ್ತಾರೆ. ಅವರಿಗೆ ಆಟವಾಡಲು ಅವಕಾಶವಿರುವುದಿಲ್ಲ. ಅವರು ವಿರಾಮವಿಲ್ಲದೆ ಗ್ಯಾರೇಜುಗಳಲ್ಲಿ, ಅಂಗಡಿ ಮುಂಗಟ್ಟುಗಳಲ್ಲಿ ನಿರಂತರವಾಗಿ ಕೆಲಸ ಮಾಡುತ್ತಾರೆ. |

### ಮಕ್ಕಳ ಹಕ್ಕುಗಳು ಮತ್ತು ವಾಸ್ತವ

| ಹಕ್ಕುಗಳು | ವಾಸ್ತವ |
|---|---|
| • ಎಲ್ಲಾ ಮಕ್ಕಳಿಗೆ ತಮ್ಮ ತಂದೆ ತಾಯಿಗಳ ಜೊತೆಯಲ್ಲಿ ಜೀವಿಸಲು ಹಕ್ಕು ಇದೆ | • ಬಾಲಕಾರ್ಮಿಕರು ತಮ್ಮ ತಂದೆ ತಾಯಿಗಳ ಪ್ರೀತಿ ವಾತ್ಸಲ್ಯದ ಬಗ್ಗೆ ಹಂಬಲಿಸುತ್ತಾರೆ. |
| • ಎಲ್ಲಾ ಮಕ್ಕಳಿಗೆ ನಿರ್ಲಕ್ಷ್ಯತೆ ಮತ್ತು ಬೈಗುಳದ ವಿರುದ್ಧ ಹಕ್ಕು ಇದೆ. | • ಸಣ್ಣ ಸಣ್ಣ ತಪ್ಪುಗಳಿಗೂ ಸಹ ಬಾಲಕಾರ್ಮಿಕರನ್ನು ಕಠಿಣವಾಗಿ ಭೌತಿಕ ದಂಡನೆಗೆ ಒಳಪಡಿಸಲಾಗುತ್ತದೆ. |


### ಮಕ್ಕಳ ಹಕ್ಕುಗಳು ಮತ್ತು ವಾಸ್ತವ

| ಹಕ್ಕುಗಳು | ವಾಸ್ತವ |
|---|---|
| • ಅವರ ಶಿಕ್ಷಣ, ಆರೋಗ್ಯ ಮತ್ತು ಬೆಳವಣಿಗೆಗೆ ತೊಂದರೆ ತರುವ ಎಲ್ಲಾ ಕೆಲಸಗಳಿಂದ ರಕ್ಷಣೆ ಪಡೆಯುವ ಹಕ್ಕು ಇದೆ. | • ಬಾಲಕಾರ್ಮಿಕರು ಅಪಘಾತಕ್ಕೆ ಗುರಿಯಾಗುತ್ತಾರೆ – ಕೈ ಕಾಲು ಕಳೆದುಕೊಳ್ಳುತ್ತಾರೆ – ಸಾವನ್ನಪ್ಪುತ್ತಾರೆ ಹಾಗೂ ಕುಂಠಿತ ಬೆಳವಣಿಗೆ ಹೊಂದುತ್ತಾರೆ. |
| • ಎಲ್ಲಾ ಮಕ್ಕಳಿಗೆ ನಿರ್ಲಕ್ಷ್ಯತೆ ಮತ್ತು ಬೈಗುಳದ ವಿರುದ್ಧ ಹಕ್ಕು ಇದೆ. | • ಮಕ್ಕಳು ಮೈ ಹುಷಾರಿಲ್ಲದಿದ್ದರು ಕೆಲಸ ಮಾಡಬೇಕಾಗುತ್ತದೆ. ಅವರು ಮಾನಸಿಕ ಹಾಗೂ ಲೈಂಗಿಕ ಹಿಂಸೆಗೆ ಒಳಪಡಬೇಕಾಗುತ್ತದೆ. |

### ಬಾಲಕಾರ್ಮಿಕರು ಮಾತ್ರ ಶೋಷಣೆಗೆ ಒಳಪಡುತ್ತಿಲ್ಲ.

- ಬಾಲಕಾರ್ಮಿಕರು ಅನಕ್ಷರಸ್ಥರಾಗಿ ಹಾಗೂ ಕೌಶಲ್ಯರಹಿತರಾಗಿ ಪ್ರೌಢಾವಸ್ಥೆಯನ್ನು ತಲುಪುವುದರಿಂದ ಅವರ ಕುಟುಂಬ ತೊಂದರೆಗೆ ಒಳಪಡಬೇಕಾಗುತ್ತದೆ.
- ಬಾಲಕಾರ್ಮಿಕರು ಅನಕ್ಷರತೆ, ಬಡತನ ಹಾಗೂ ಶೋಷಣೆಗೆ ಒಳಪಡುವುದರಿಂದ ಇಡೀ ಸಮುದಾಯ ಮತ್ತು ರಾಷ್ಟ್ರವು ತೊಂದರೆಗೊಳಪಡಬೇಕಾಗುತ್ತದೆ.
- ಬಾಲಕಾರ್ಮಿಕತೆ ಕೂಲಿದರ ಹಾಗೂ ಕೆಲಸದ ಮಾರುಕಟ್ಟೆಗೆ ತೊಂದರೆ ಕೊಡುತ್ತದೆ.

### ವಿಷ ವರ್ತುಲದಲ್ಲಿ ಸಿಕ್ಕಿರುವ ಬಾಲಕಾರ್ಮಿಕ






**ಮಕ್ಕಳ ಮೇಲೆ ಹೂಡಿಕೆ**

| ವೆಚ್ಚ | ಲಾಭಗಳು |
|---|---|
| –ಶಿಕ್ಷಣ ಹಾಗೂ ಆರೋಗ್ಯ ಗುಣಮಟ್ಟದ ಹೆಚ್ಚಳ | ಉತ್ತಮ ಶಿಕ್ಷಣ ಮತ್ತು ಆರೋಗ್ಯ, ಕೌಶಲ್ಯಭರಿತ ಪ್ರೌಢರು, ಧನಾತ್ಮಕ ಹಾಗೂ ಶಾಂತಿಪ್ರಿಯ ಚಿಂತನೆಯ ಉತ್ತಮ ಪ್ರಜೆಗಳು |
| ಬಾಲಕಾರ್ಮಿಕತೆಯ ನಿರ್ಮೂಲನೆಯ ಕಾರ್ಯಕ್ರಮಗಳು | |
| ಅವಕಾಶದ ವೆಚ್ಚ | |


**ಮಕ್ಕಳ ಯಾಕೆ ಕೆಲಸ ಮಾಡುತ್ತಾರೆ**

| ಬೇಡಿಕೆ ಭಾಗ | ಪೂರೈಕೆಯ ಭಾಗ |
|---|---|
| – ಕಾನೂನನ್ನು ಸರಿಯಾಗಿ ಅನುಷ್ಠಾನ ಮಾಡದೆ ಇರುವುದು | 1. ಬಡತನ |
| – ಕಡಿಮೆ ವೆಚ್ಚದ ಹಾಗೂ ಶಿಸ್ತುಬದ್ಧವಾದ ಕೂಲಿಗಳ ಸರಬರಾಜು | – ಸಾಲ<br>– ಶಿಕ್ಷಣದಿಂದ ವಂಚಿತ<br>– ವಲಸೆ<br>– ನೈಸರ್ಗಿಕ ಪ್ರಕೋಪ<br>– ಉತ್ತಮ ಕೆಲಸ ಇಲ್ಲದಿರುವುದು<br>– ಸಾಮಾಜಿಕ ಭದ್ರತೆ ಇಲ್ಲದಿರುವುದು<br>– ಜನರ ಮನೋಭಾವ |

ನೀವು ಮತ್ತು ನಾವು ಒಟ್ಟು ಸೇರಿ
ನಮ್ಮ ಎಲ್ಲಾ ಶಕ್ತಿಯನ್ನು ಹಾಕಿ
ಒಂದೇ ಮನಸ್ಸಿನಿಂದ
ಕೆಲಸ ಮಾಡಿದರೆ ಬಾಲಕಾರ್ಮಿಕತೆಯನ್ನು
ಹೋಗಲಾಡಿಸಲು ಸಾಧ್ಯ

ವಂದನೆಗಳು





## 4.4 ಅನುಚ್ಛೇದ 4

**ಮಾದರಿ ಪವರ್ ಪಾಯಿಂಟ್ ಮಂಡನೆಯ ಸಾಹಿತ್ಯ ಬಾಲಕಾರ್ಮಿಕತೆಯ ನಿರ್ಮೂಲನೆಯಲ್ಲಿ ಕಾರ್ಮಿಕ ಸಂಘಟನೆಗಳ ಪಾತ್ರ**

**ಬಾಲಕಾರ್ಮಿಕತೆ ಕಾರ್ಮಿಕ ಸಂಘಟನೆಗಳು ಒಂದು ವಿಷಯವಾಗಿ**

1. ಬಾಲಕಾರ್ಮಿಕತೆ ಅಸಂಘಟಿತ ಕ್ಷೇತ್ರಕ್ಕೆ ದಾರಿ ಮಾಡಿಕೊಡುವುದು
2. ಬಾಲಕಾರ್ಮಿಕತೆ ಕಾರ್ಮಿಕ ಸಂಘಟನೆಗಳ ಅನುಸಂಧಾನ ಶಕ್ತಿಯನ್ನು ಶಿಥಿಲಗೊಳಿಸುವುದು
3. ಬಾಲಕಾರ್ಮಿಕತೆ ಮತ್ತು ಕಡಿಮೆ ಸಂಬಳಕ್ಕೆ ಎಡೆ ಮಾಡಿಕೊಡುವುದು
4. ಮಕ್ಕಳು ಕೆಲಸದ ಸ್ಥಳದಲ್ಲಿಯೇ ಇರುವುದರಿಂದ, ಅವರ ನಿಯಂತ್ರಣ ಕಾರ್ಮಿಕ ಸಂಘಟನೆಗಳಿಗೆ ಸುಲಭ
5. ಹೆಚ್ಚಿನ ಬಾಲಕಾರ್ಮಿಕರು ಕೂಲಿಕಾರರ ಮಕ್ಕಳಾಗಿದ್ದಾರೆ.

**ಕಾರ್ಮಿಕ ಸಂಘಟನೆಗಳಿಗೆ ಇತರರಿಗಿಂತ ಹೆಚ್ಚು ಅನುಕೂಲ ಇದೆ.**

1. ಅವರು ಒಂದು ಸಂಘಟನೆಯ ಸದಸ್ಯರು
2. ಅವರು ಬಡತನ ನಿವಾರಣೆಗೆ ಕೆಲಸ ಮಾಡುತ್ತಾರೆ
3. ಅವರಿಗೆ ದೊಡ್ಡ ಸಂಘಟನೆಯ ಬೆಂಬಲ ಇದೆ – ಸ್ಥಳೀಯ, ಕ್ಷೇತ್ರೀಯ, ರಾಜ್ಯ ಮಟ್ಟದಲ್ಲಿ, ರಾಷ್ಟ್ರ ಮಟ್ಟದಲ್ಲಿ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ
4. ಸರ್ಕಾರದ ಮೇಲೆ ಒತ್ತಡ ತರಲು ಸಾಧ್ಯವಿದೆ
5. ಅವರಿಗೆ ಸಾಮಾಜಿಕ ಅನುಸಂಧಾನ ಮತ್ತು ಚರ್ಚೆ ನಡೆಸಲು ಸಾಧ್ಯವಿದೆ.


**ಕಾರ್ಮಿಕ ಸಂಘಟನೆಗಳು ಕೆಲಸ ಮಾಡಬಹುದಾದ ಕ್ಷೇತ್ರಗಳು**


1. ಮಾಹಿತಿಗಳ, ನೈಜ ಸಂಗತಿಗಳ ಸಂಗ್ರಹಣೆ ಮತ್ತು ಶೋಧ
2. ಅರಿವನ್ನು ಹೆಚ್ಚಿಸುವುದು, ಒಟ್ಟುಗೂಡಿಸುವಿಕೆ ಮತ್ತು ಆಂದೋಲನ ನಡೆಸುವುದು
3. ಸಾಂಘಿಕ ಯಾ ಸಂಧಾನ ನಡೆಸಲು ಸಾಧ್ಯವಿದೆ.
4. ಸರಿಯಾಗಿ ಕಾನೂನಿನ ಅನುಷ್ಠಾನವಾಗುವಂತೆ ಮತ್ತು ಹೊಸ ಕಾನೂನುಗಳ ರಚಿಸುವಂತೆ ಒತ್ತಾಯ ತರಲು ಸಾಧ್ಯವಿದೆ.
5. ಬಾಲಕಾರ್ಮಿಕರ ಕುಟುಂಬಗಳ ಶಿಕ್ಷಣ, ಆರೋಗ್ಯ ಮತ್ತು ಹೆಚ್ಚು ಸಂಪಾದಿಸುವ ಅವಕಾಶಗಳನ್ನು ಒದಗಿಸಲು ಆಸ್ಪದ ಇದೆ.

**ಕಾರ್ಮಿಕ ಸಂಘಟನೆಗಳ ಕ್ರಿಯಾ ಯೋಜನೆಗೆ ಮುಖ್ಯ ಸಾಹಿತ್ಯ**

1. ಬಾಲಕಾರ್ಮಿಕತೆ, ಕಾರ್ಮಿಕ ಸಂಘಟನೆ ಮುಖ್ಯ ವಿಚಾರವೆಂಬುದಾಗಿ ಘೋಷಣೆ ಮಾಡಿ
2. ಸಮಸ್ಯೆಯನ್ನು ಪರಿಹರಿಸಲು ರಾಷ್ಟ್ರಮಟ್ಟದಲ್ಲಿ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಲಿಷ್ಠವಾದ ಆಂದೋಲನದ ಅವಶ್ಯಕತೆ ಇದೆ.
3. ಎಲ್ಲಾ ರೀತಿಯ ಬಾಲಕಾರ್ಮಿಕತೆಯ ನಿರ್ಮೂಲನ, ಕಾರ್ಮಿಕ ಸಂಘಟನೆಯ ಗುರಿ ಎಂಬುದಾಗಿ ಘೋಷಿಸಿ
4. ಕಾರ್ಮಿಕ ಸಂಘಟನೆಯ ನೀತಿ ನಿಯಮಗಳನ್ನು ಬಲಪಡಿಸಿರಿ.


**ವಂದನೆಗಳು**





## 4.5 ಅನುಚ್ಛೇದ 5

### ಬಾಲಕಾರ್ಮಿಕ ರಹಿತ ಕರ್ನಾಟಕ – ಒಂದು ವಿಷನ್




ಬಾಲಕಾರ್ಮಿಕ ರಹಿತ ರಾಜ್ಯ
(ಶಾಲೆಯಿಂದ ಹೊರಗಿರುವ ಎಲ್ಲಾ ಮಕ್ಕಳು ಸಂಭಾವನೀಯ ಬಾಲಕಾರ್ಮಿಕರು)

- ಎಲ್ಲಾ ಮಕ್ಕಳು ಶಾಲಯಲ್ಲಿ ಇರಬೇಕು. ( ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ)
- ಎಲ್ಲರಿಗೂ ಕೌಶಲ್ಯಭರಿತ ಮತ್ತು ಉತ್ತಮ ಕೆಲಸಗಳು
- ಎಲ್ಲರಿಗೂ ಬಡತನ ಮತ್ತು ಅವಶ್ಯಕತೆಗಳಿಂದ ಸ್ವಾತಂತ್ರ್ಯ

ಈ ಕೆಳಗಿನವುಗಳು ಅತ್ಯಂತ ಕನಿಷ್ಠ ಇರುವಂತೆ ನೋಡಿಕೊಳ್ಳುವುದು.
✦ಬಾಲಕಾರ್ಮಿಕ ನಿರ್ಮೂಲನೆಗೆ ಸಂಬಂಧಪಟ್ಟಂತೆ ಉದ್ದೇಶಗಳು.
✦ಸಮಸ್ಯೆಯ ಸ್ವರೂಪಗಳು.
✦ಟಾರ್ಗೆಟ್ ಗುಂಪಿನ ಗುರುತಿಸುವಿಕೆ
✦ಬಾಲಕಾರ್ಮಿಕತೆಯ ಬೇಡಿಕೆ ಹಾಗೂ ಪೂರೈಕೆ ಬಗ್ಗೆ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು.
✦ಪ್ರತಿಯೊಂದು ರೀತಿಯ ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು ಪ್ರಕ್ರಿಯೆಗಳು.

- ಯೋಜನೆ ತಯಾರಿಸಲು, ಅನುಷ್ಠಾನ ಮಾಡಲು, ಮೇಲ್ವಿಚಾರಣೆ ನಡೆಸಲು, ದಾಖಲೀಕರಣ ಗೊಳಿಸಲು ಮತ್ತು ಮೌಲ್ಯಮಾಪನ ಮಾಡಲು ಸಾಂಸ್ಥಿಕ ವ್ಯವಸ್ಥೆ.
- ಅನುಷ್ಠಾನ ಮತ್ತು ಬಾಲ ಕೆಲಸಗಾರರ ಬಿಡುಗಡೆ
- ಸಮುದಾಯವನ್ನು ಒಟ್ಟು ಸೇರಿಸುವಿಕೆ, ಅರಿವಿನ ಹೆಚ್ಚಳ ಎಲ್ಲಾ ಹಂತದ ಭಾಗೀದಾರರೊಂದಿಗೆ ಸಮಾಲೋಚನೆ ಮತ್ತು ಅವರ ಕೆಪಾಸಿಟಿ ಹೆಚ್ಚಳ.
- ಬಾಲಕಾರ್ಮಿಕ ಕುಟುಂಬಗಳ ಜೀವನಾಧಾರ ಹೆಚ್ಚಳಕ್ಕೆ ಅಭಿವೃದ್ಧಿ ಕಾರ್ಯಕ್ರಮಗಳ ಕ್ರೋಢೀಕರಣ.
- ಬಾಲಕಾರ್ಮಿಕ ಕುಟುಂಬಗಳ ಶಿಕ್ಷಣ, ಆರೋಗ್ಯ, ಕೌಶಲ್ಯ ಮತ್ತು ಕೆಲಸಗಳ ಮಟ್ಟದ ಹೆಚ್ಚಳಿಕೆ ಪ್ರಯತ್ನ
- ಬಾಲಕಾರ್ಮಿಕರಾಗುವುದನ್ನು ತಡೆಗಟ್ಟುವುದು ಮತ್ತು ಮನಪರಿವರ್ತನೆ.

